ಬುಧವಾರ, ಅಕ್ಟೋಬರ್ 12, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 282 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
57,147	16,983	₹52,300 (ಬೆಂಗಳೂರು)	₹59,700 (ಬೆಂಗಳೂರು)	82.21

2 ಸಾವಿರಕ್ಕೂ ಹೆಚ್ಚು ಹುದ್ದೆ ರದ್ದು • ವಿವಿಧ ಇಲಾಖೆಗಳ ವಿಲೀನಕ್ಕೆ ಚಿಂತನೆ

ಕೃಷಿ ಇಲಾಖೆಗೆ ರೇಷ್ಮೆ, ತೋಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಷ್ಮೆ ಮತ್ತು ತೋಟಗಾರಿಕೆ ಇಲಾಖೆಗಳನ್ನು ಕೃಷಿ ಇಲಾಖೆಯೊಂದಿಗೆ ವಿಲೀನಗೊಳಿಸುವುದು ಹಾಗೂ ಕೆಲವು ಇಲಾಖೆಗಳನ್ನು ಮುಚ್ಚುವ ಮೂಲಕ ಎರಡು ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ರದ್ದುಗೊಳಿಸುವ ತೀರ್ಮಾನವನ್ನು ಕಂದಾಯ ಸಚಿವರ ನೇತೃತ್ವದ ಸಂಪುಟ ಉಪ ಸಮಿತಿ ಕೈಗೊಂಡಿದೆ.

ವಿವಿಧ ಇಲಾಖೆಗಳ ವಿಲೀನ ಕುರಿತು ಕಂದಾಯ ಸಚಿವ ಆರ್. ಅಶೋಕ ಅಧ್ಯಕ್ಷತೆಯ ಸಂಪುಟ ಉಪ ಸಮಿತಿ ಮಂಗಳವಾರ ಮೂರನೇ ಸಭೆ ನಡೆಸಿತು. ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಮತ್ತು ಗೃಹ ಸಚಿವ ಆರಗ ಜ್ಞಾನೇಂದ್ರ ಪಾಲ್ಗೊಂಡಿದ್ದರು. ಕೆಲವು ಇಲಾಖೆಗಳು, ನಿಗಮ, ಪ್ರಾಧಿಕಾರಗಳ ರದ್ದತಿ ನಿರ್ಧಾರವನ್ನು ಸಭೆ ಕೈಗೊಂಡಿದೆ.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅಶೋಕ, ‘ಅನಗತ್ಯವಾಗಿರುವ ಹುದ್ದೆಗಳು ಮತ್ತು ಇಲಾಖೆಗಳನ್ನು ವಿಲೀನಗೊಳಿಸುವುದು ಅಥವಾ ರದ್ದು ಮಾಡುವುದರ ಮೂಲಕ ರಾಜ್ಯ ಸರ್ಕಾರದ ಬೊಕ್ಕಸದ ಮೇಲಿನ ಹೊರೆಯನ್ನು ತಗ್ಗಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಮಂಗಳವಾರದ ಸಭೆಯಲ್ಲಿ ಉಪ ಸಮಿತಿ ಹಲವು ನಿರ್ಧಾರಗಳನ್ನು ಕೈಗೊಂಡಿದ್ದು, ಸಂಪುಟದ ಒಪ್ಪಿಗೆಯೊಂದಿಗೆ ಶೀಘ್ರದಲ್ಲಿಯೇ ಅನುಷ್ಠಾನಕ್ಕೆ ತರಲಾಗುವುದು’ ಎಂದು ತಿಳಿಸಿದರು.

ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳನ್ನು ಕೃಷಿ ಇಲಾಖೆಯೊಂದಿಗೆ ವಿಲೀನಗೊಳಿಸಲಾಗುವುದು. ಸಚಿವಾಲಯ ಸೇರಿದಂತೆ ಎಲ್ಲ ಹಂತಗಳಲ್ಲೂ ಈ ಬದಲಾವಣೆ ಜಾರಿಯಾಗಲಿದೆ. ಕೆಳಹಂತದ ಹುದ್ದೆಗಳನ್ನು ವಿಲೀನಗೊಳಿಸಿ, ಹಿರಿಯ ಅಧಿಕಾರಿಗಳ ಹುದ್ದೆಗಳನ್ನು ರದ್ದುಗೊಳಿಸಲಾಗುವುದು. ಈ ಇಲಾಖೆಗಳಲ್ಲಿ ಸುಮಾರು 2,000 ಹುದ್ದೆಗಳು ರದ್ದಾಗಲಿವೆ ಎಂದು ವಿವರಿಸಿದರು.

ರೇಷ್ಮೆ ಬೆಳೆಯುವ ಪ್ರದೇಶಗಳಿಗೆ ಸೀಮಿತವಾಗಿ ರೇಷ್ಮೆ ಕೃಷಿ ಅಧಿಕಾರಿಗಳ ಹುದ್ದೆಗಳನ್ನು ಉಳಿಸಿಕೊಳ್ಳಲಾಗುವುದು. ಮೇಲಿನ ಹಂತದಲ್ಲಿ ಎರಡೂ ಇಲಾಖೆಗಳ ಜವಾಬ್ದಾರಿಯನ್ನು ಕೃಷಿ ಇಲಾಖೆಗೆ ವಹಿಸಲಾಗುವುದು. ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯನ್ನು ಶಿಕ್ಷಣ ಇಲಾಖೆಯ ಜತೆ ವಿಲೀನಗೊಳಿಸಲಾಗುತ್ತದೆ. ಕೆಲವು ನಿಗಮಗಳನ್ನು ರದ್ದುಗೊಳಿಸುವ ತೀರ್ಮಾನವೂ ಆಗಿದೆ ಎಂದರು.

ಅರಣ್ಯ ಅಧಿಕಾರಿಗಳ ಹುದ್ದೆಗಳಿಗೆ ಕತ್ತರಿ

ಭಾರತೀಯ ಅರಣ್ಯ ಸೇವೆ (ಐಎಫ್‌ಎಸ್) ಸೇರಿದಂತೆ ರಾಜ್ಯದ ಅರಣ್ಯ ಇಲಾಖೆಯಲ್ಲಿರುವ ಹಿರಿಯ ಅಧಿಕಾರಿಗಳ ಹುದ್ದೆಗಳನ್ನು ಗಣನೀಯವಾಗಿ ತಗ್ಗಿಸಲು ಸಂಪುಟ ಉಪಸಮಿತಿಯು ಚಿಂತನೆ ನಡೆಸಿದೆ. ಪೂರಕವಾಗಿ ಸಮಗ್ರ ವಿವರ ಒದಗಿಸಲು ಅರಣ್ಯ ಇಲಾಖೆಗೆ ಸೂಚಿಸಿದೆ.

‘ಮಲೆನಾಡು, ಕರಾವಳಿ ಜಿಲ್ಲೆಗಳನ್ನು ಹೊರತುಪಡಿಸಿ ಜಿಲ್ಲೆಗೆ ಒಂದು ಜಿಲ್ಲಾ ಅಥವಾ ಉಪ ಅರಣ್ಯ ಸಂರಕ್ಷಣಾಧಿಕಾರಿ, ಉಪ ವಿಭಾಗಕ್ಕೆ ಒಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ತಾಲ್ಲೂಕಿಗೆ ಒಂದು ವಲಯ ಅರಣ್ಯಾಧಿಕಾರಿ ಹುದ್ದೆ ಉಳಿಸಿಕೊಳ್ಳಬೇಕು. ಉಳಿದ ಅಧಿಕಾರಿಗಳ ವೃಂದದ ಹುದ್ದೆಗಳನ್ನು ರದ್ದುಗೊಳಿಸಿ ಕೆಳಹಂತದ ಸಿಬ್ಬಂದಿ ಸಂಖ್ಯೆ ಹೆಚ್ಚಿಸಲು ಇಲಾಖೆಯ ವರದಿ ಕೇಳಲಾಗಿದೆ’ ಎಂದು ಸಚಿವ ಅಶೋಕ ಹೇಳಿದರು.

ಜಿಲ್ಲೆಗೊಂದೇ ಯೋಜನಾ ಪ್ರಾಧಿಕಾರ: ಅಶೋಕ

ಒಂದೇ ಜಿಲ್ಲೆಯೊಳಗೆ ಹಲವು ಯೋಜನಾ ಪ್ರಾಧಿಕಾರಗಳಿವೆ. ಅವೆಲ್ಲವನ್ನೂ ರದ್ದುಪಡಿಸಿ ಜಿಲ್ಲಾ ಮಟ್ಟದಲ್ಲಿ ಒಂದೇ ಯೋಜನಾ ಪ್ರಾಧಿಕಾರ ಉಳಿಸಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಅಶೋಕ ವಿವರಿಸಿದರು.

ಬೆಂಗಳೂರು ಸುತ್ತಮುತ್ತ ಹತ್ತಕ್ಕೂ ಹೆಚ್ಚು ಯೋಜನಾ ಪ್ರಾಧಿಕಾರಗಳಿವೆ. ನೆಲಮಂಗಲ, ಹೊಸಕೋಟೆ, ದೇವನಹಳ್ಳಿ, ಮಾಗಡಿ, ಚನ್ನಪಟ್ಟಣ, ರಾಮನಗರ ಹೀಗೆ ಹಲವು ಯೋಜನಾ ಪ್ರಾಧಿಕಾರಗಳು ಅಸ್ತಿತ್ವದಲ್ಲಿವೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ವ್ಯಾಪ್ತಿ ಪ್ರತ್ಯೇಕ ಪ್ರಾಧಿಕಾರವಿದೆ. ಈ ಎಲ್ಲವನ್ನೂ ರದ್ದುಗೊಳಿಸಿ ಜಿಲ್ಲೆಗೆ ಒಂದೇ ಯೋಜನಾ ಪ್ರಾಧಿಕಾರ ಉಳಿಸಿಕೊಳ್ಳಲು ನಿರ್ಧರಿಸಲಾಗಿದೆ ಎಂದರು.

ರದ್ದಾಗಲಿರುವ ನಿಗಮಗಳು

- ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ
- ಮೈಸೂರು ತಂಬಾಕು ಕಂಪನಿ
- ಕರ್ನಾಟಕ ಕೃಷಿ ಕೈಗಾರಿಕಾ ನಿಗಮ
- ಕರ್ನಾಟಕ ಆಹಾರ ನಿಗಮ (ಕೃಷಿ ಇಲಾಖೆ)



ರಾಯಚೂರು ತಾಲ್ಲೂಕಿನ ಗಿಲ್ಲೇಸುಗೂರು ಗ್ರಾಮದಲ್ಲಿ ಮಂಗಳವಾರ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್‌. ಯಡಿಯೂರಪ್ಪ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭತ್ತ ತೂರುವ ಮೂಲಕ ಬಿಜೆಪಿ ಜನಸಂಕಲ್ಪ ಯಾತ್ರೆ ಉದ್ಘಾಟಿಸಿದರು. ಪಕ್ಷದ ಮುಖಂಡರಾದ ಶಿವನಗೌಡ ನಾಯಕ, ಬಿ.ಶ್ರೀರಾಮುಲು, ಅರುಣಾ ಡಿ.ಕೆ, ಗೋವಿಂದ ಕಾರಜೋಳ ಮತ್ತು ತಿಪ್ಪರಾಜ ಹವಾಲ್ದಾರ ಇದ್ದಾರೆ

ಬೊಮ್ಮಾಯಿ – ಯಡಿಯೂರಪ್ಪ ಜನಸಂಕಲ್ಪ ಯಾತ್ರೆ ಆರಂಭ

ಪ್ರಜಾವಾಣಿ ವಾರ್ತೆ

ರಾಯಚೂರು: ‘ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ 150 ಸ್ಥಾನಗಳನ್ನು ಬಿಜೆಪಿ ಗೆಲ್ಲಲೇಬೇಕು. ಇದಕ್ಕಾಗಿ ಹಾಲಿ ಶಾಸಕರು ಮತ್ತು ಪಕ್ಷದ ಕಾರ್ಯಕರ್ತರು ಈಗಿನಿಂದಲೇ ಪ್ರಚಾರ ಆರಂಭಿಸಬೇಕು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕರೆ ನೀಡಿದರು.

ರಾಯಚೂರು ತಾಲ್ಲೂಕಿನ ತುಂಗಭದ್ರಾ ನದಿಗೆ ಹೊಂದಿಕೊಂಡ ಗಿಲ್ಲೇಸುಗೂರು ಗ್ರಾಮದಲ್ಲಿ ಬಿಜೆಪಿ ಜನಸಂಕಲ್ಪ ಯಾತ್ರೆಯನ್ನು ಭತ್ತ ತೂರುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಪರಿಶಿಷ್ಟ ಜಾತಿ/ಪಂಗಡಗಳಿಗೆ ಮೀಸಲಾತಿ ಹೆಚ್ಚಳಕ್ಕೆ ರಾಜ್ಯ ಸರ್ಕಾರ ಕೈಗೊಂಡ ನಿರ್ಧಾರ ಹಾಗೂ ಕೇಂದ್ರದ ಸಾಧನೆಗಳನ್ನು ಮುಂದಿಟ್ಟುಕೊಂಡು ಜನರ ಬಳಿ ಹೋಗುವುದಾಗಿ ಅವರು ಘೋಷಿಸಿದರು.

ಶ್ರೀ ರಾಘವೇಂದ್ರ ಸ್ವಾಮಿಗಳು ನಡೆದಾಡಿದ ಈ ಪುಣ್ಯಭೂಮಿಯಿಂದ ಜನಸಂಕಲ್ಪ ಯಾತ್ರೆ ಆರಂಭಿಸುತ್ತಿದ್ದು, ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದರು. ಕಾರ್ಯಕ್ರಮದ ಬಳಿಕ ಇಬ್ಬರು ನಾಯಕರು ಮಂತ್ರಾಲಯದ ಶ್ರೀ ರಾಘವೇಂದ್ರಸ್ವಾಮಿ ಮಠಕ್ಕೆ ಭೇಟಿ ನೀಡಿ, ಆಶೀರ್ವಾದ ಪಡೆದರು.

ಭಾಷಣದುದ್ದಕ್ಕೂ ಕಾಂಗ್ರೆಸ್ ನಾಯಕರ ವಿರುದ್ಧ ಹರಿಹಾಯ್ದ ಅವರು, ‘ಕಾಂಗ್ರೆಸ್ ಪಕ್ಷ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಗೆದ್ದ ಸ್ಥಾನಗಳನ್ನಾದರೂ ಉಳಿಸಿಕೊಳ್ಳಲಿ. ಇದು ನನ್ನ ನೇರ ಸವಾಲು’ ಎಂದರು.

10ನೇ ಪುಟ ನೋಡಿ

‘ಏಮ್ಸ್ ಮಂಜೂರು: ಐದು ಸ್ಥಾನ ಗೆಲ್ಲಿಸಿ’

‘ರಾಯಚೂರು ಜಿಲ್ಲೆಯಲ್ಲಿ ಏಮ್ಸ್ ಸ್ಥಾಪನೆ ಕುರಿತ ಜನರ ಬೇಡಿಕೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಂದಿಸುವರು. ಆದರೆ, ಏಳು ಶಾಸಕ ಸ್ಥಾನಗಳ ಪೈಕಿ ಐದು ಸ್ಥಾನಗಳಲ್ಲಿ ಬಿಜೆಪಿಗೆ ಗೆಲ್ಲಿಸಬೇಕು’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ಇದಕ್ಕೆ ಪೂರಕವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿ, ‘ರಾಯಚೂರಿನಲ್ಲಿ ಖಂಡಿತ ಏಮ್ಸ್ ಸ್ಥಾಪಿಸಲಾಗುವುದು. ಇದರ ಬಗ್ಗೆ ಪ್ರಧಾನಿ ಜೊತೆ ಚರ್ಚಿಸಲು ಮುಂದಿನ ವಾರ ದೆಹಲಿಗೆ ಹೊರಟಿರುವೆ. ಯಡಿಯೂರಪ್ಪ ಅವರ ಮಾತನ್ನು ಪಾಲಿಸಿ’ ಎಂದರು.

ಸಂಕ್ಷಿಪ್ತ ಸುದ್ದಿ

‘ಗ್ರಾಪಂ ಅಧ್ಯಕ್ಷರ ಅಧಿಕಾರ ಮೊಟಕು ಪ್ರಸ್ತಾವ ತಿರಸ್ಕಾರ’

ಬೆಂಗಳೂರು: ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರಿಗೆ ಪ್ರಸ್ತುತ ಇರುವ ಯಾವುದೇ ಅಧಿಕಾರವನ್ನು ಕಡಿತಗೊಳಿಸುವ ಪ್ರಸ್ತಾವವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿರಸ್ಕರಿಸಿದ್ದಾರೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಮುಖ್ಯಮಂತ್ರಿ ಅವರನ್ನು ಮಂಗಳವಾರ ಬೆಳಿಗ್ಗೆ ಭೇಟಿ ಮಾಡಿದ ಅವರು, ಅಧಿಕಾರ ಮೊಟಕುಗೊಳಿಸುವ ಪ್ರಸ್ತಾವದ ಕುರಿತು ಗ್ರಾಮ ಪಂಚಾಯಿತಿಗಳ ಚುನಾಯಿತ ಪ್ರತಿನಿಧಿಗಳಲ್ಲಿ ಉಂಟಾಗಿರುವ ಆತಂಕವನ್ನು ಗಮನಕ್ಕೆ ತಂದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಕರ್ನಾಟಕ ಗ್ರಾಮ ಸ್ವರಾಜ್ ಹಾಗೂ ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾವವನ್ನು ಮುಖ್ಯಮಂತ್ರಿ ತಿರಸ್ಕರಿಸಿದ್ದಾರೆ. ಗ್ರಾಮ ಪಂಚಾಯಿತಿಗಳು ಪ್ರಜಾಪ್ರಭುತ್ವ ವ್ಯವಸ್ಥೆಯ ಭದ್ರ ಬುನಾದಿ. ಗ್ರಾಮೀಣ ಭಾಗದಲ್ಲಿ ಭವಿಷ್ಯದ ನಾಯಕತ್ವ ರೂಪಿಸುವಲ್ಲಿ ಗಣನೀಯ ಕೊಡುಗೆ ನೀಡುತ್ತಿವೆ. ಈ ವ್ಯವಸ್ಥೆಯನ್ನು ಬಲಪಡಿಸುವ ಹಾಗೂ ಅಧಿಕಾರ ವಿಕೇಂದ್ರಿಕರಣಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಬದ್ಧತೆ ಹೊಂದಿದೆ’ ಎಂದರು.

ಇಂದಿನಿಂದ ಜಾರಿ: ಆ್ಯಪ್‌ನಿಂದ ಆಟೊ ಸೇವೆ ತೆಗೆಯದಿದ್ದರೆ ದೂರು

ಓಲಾ, ಉಬರ್ ಆಟೊ ಸೇವೆ ಸ್ಥಗಿತ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಓಲಾ, ಉಬರ್ ಮತ್ತು ರ‍್ಯಾಪಿಡೊ ಕಂಪನಿಗಳ ಆ್ಯಪ್‌ಗಳಲ್ಲಿ ಆಟೊರಿಕ್ಷಾ ಸೇವೆ ಬುಧವಾರದಿಂದ ಸ್ಥಗಿತವಾಗಲಿದೆ.

ಓಲಾ ಮತ್ತು ಉಬರ್ ಕಂಪನಿಗಳ ಪ್ರತಿನಿಧಿಗಳ ಜತೆ ಸಭೆ ನಡೆಸಿದ ಸಾರಿಗೆ ಆಯುಕ್ತ ಟಿಎಚ್‌ಎಂ ಕುಮಾರ್, ‘ಕರ್ನಾಟಕ ರಾಜ್ಯ ಬೇಡಿಕೆ ಆಧಾರಿತ ಸಾರಿಗೆ ತಂತ್ರಜ್ಞಾನ ನಿಯಮ –2016ರ ಪ್ರಕಾರ ಆಟೊ ಸೇವೆ ಒದಗಿಸಲು ಈ ಕಂಪನಿಗಳಿಗೆ ಅವಕಾಶ ಇಲ್ಲ. ಈ ಬಗ್ಗೆ ಅವರಿಗೆ ಮನವರಿಕೆ ಮಾಡಲಾಗಿದೆ. ಆಟೊ ಸೇವೆಯನ್ನು ಆ್ಯಪ್‌ನಿಂದ ತೆಗೆಯಲು ಸೂಚನೆ ನೀಡಿದ್ದೇವೆ. ತೆಗೆಯದಿದ್ದರೆ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿ ಈ ಆ್ಯಪ್‌ಗಳಲ್ಲಿ ಆಟೊರಿಕ್ಷಾ ಸೇವೆ ಸ್ಥಗಿತಗೊಳಿಸಲಾಗುವುದು’ ಎಂದು ಹೇಳಿದರು.

‘ಆಟೊ ಸೇವೆ ಅನಧಿಕೃತ ಆಗಿರುವುದರಿಂದ ಆಟೊ ಚಾಲಕರು ಮತ್ತು ಪ್ರಯಾಣಿಕರು ಆ್ಯಪ್‌ನಲ್ಲಿ ಈ ಸೇವೆ ಬಳಕೆ ಮಾಡಬಾರದು. ಬಳಕೆ ಮಾಡಿ ತೊಂದರೆ ಅನುಭವಿಸಿದರೆ ಅದಕ್ಕೆ ಇಲಾಖೆ ಜವಾಬ್ದಾರಿ ಆಗುವುದಿಲ್ಲ ಎಂಬ ಪ್ರಕಟಣೆಯನ್ನೂ ಹೊರಡಿಸಲಾಗುವುದು’ ಎಂದು ಟಿಎಚ್‌ಎಂ ಕುಮಾರ್ ತಿಳಿಸಿದರು.

4ನೇ ಪುಟ ನೋಡಿ

ರೋಜರ್ ಬಿನ್ನಿ ಬಿಸಿಸಿಐ ಅಧ್ಯಕ್ಷ



ನವದೆಹಲಿ (ಪಿಟಿಐ): ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷರಾಗಿರುವ ರೋಜರ್ ಬಿನ್ನಿ ಅವರು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಮುಂದಿನ ಅಧ್ಯಕ್ಷರಾಗಲಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಪುತ್ರ ಜಯ್ ಶಾ ಕಾರ್ಯದರ್ಶಿಯಾಗಿ ಸತತ ಎರಡನೇ ಅವಧಿಗೆ ಮುಂದುವರಿಯಲಿದ್ದಾರೆ.

ಬಿಸಿಸಿಐನ ನೂತನ ಪದಾಧಿಕಾರಿಗಳ ಆಯ್ಕೆಗೆ ಇದೇ 18ರಂದು ಮುಂಬೈನಲ್ಲಿ ಸರ್ವಸದ್ಯಸರ ಸಭೆ ನಡೆಯಲಿದೆ. ‘ಆದರೆ ಎಲ್ಲ ಸ್ಥಾನಗಳಿಗೂ ಅವಿರೋಧ ಆಯ್ಕೆಗೆ ಒಮ್ಮತ ಮೂಡಿದ್ದು, ಚುನಾವಣೆ ಇರುವುದಿಲ್ಲ’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ. ಬಿನ್ನಿ ಅವರು ಮುಂಬೈನಲ್ಲಿ ಮಂಗಳವಾರ ನಾಮಪತ್ರ ಸಲ್ಲಿಸಿದರು.

ಸೌರವ್‌ ಗಂಗೂಲಿ ಅವರ ಮೂರು ವರ್ಷಗಳ ಅಧಿಕಾರ ಇದೇ ಸೆಪ್ಟೆಂಬರ್‌ನಲ್ಲಿ ಕೊನೆಗೊಂಡಿತ್ತು. ಬಿನ್ನಿ ಅವರು ಮಂಡಳಿಯ 36ನೇ ಅಧ್ಯಕ್ಷರಾಗಿ ಅ.18 ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರ ತಮ್ಮ, ಅರುಣ್ ಸಿಂಗ್ ಧುಮಾಲ್ ಐಪಿಎಲ್‌ನ ನೂತನ ಮುಖ್ಯಸ್ಥರಾಗಲಿದ್ದಾರೆ.

ವಿವರ 14

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸುಪ್ರೀಂ ಕೋರ್ಟ್ ಆದೇಶ

ಆರಗ, ಸೇಡಂ ಬದಲಿ ನಿವೇಶನ ವಾಪಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನಲ್ಲಿ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿದ ಬಡಾವಣೆಯಲ್ಲಿ ರಾಜಕಾರಣಿಗಳಿಗೆ ಕಾನೂನುಬಾಹಿರವಾಗಿ ಬದಲಿ ನಿವೇಶನಗಳನ್ನು ಹಂಚಿಕೆ ಮಾಡಿದ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿರುವ ಸುಪ್ರೀಂ ಕೋರ್ಟ್, ಈ ಬದಲಿ ನಿವೇಶನಗಳನ್ನು ಕಾನೂನು ಪ್ರಕ್ರಿಯೆಗಳ ಅನುಸಾರ ವಾಪಸ್ ಪಡೆಯುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಮಂಗಳವಾರ ಆದೇಶ ನೀಡಿದೆ.



ನಿವೇಶನಗಳ ಮಂಜೂರಾತಿಯನ್ನಷ್ಟೇ ರದ್ದುಗೊಳಿಸುವುದು ಸಾಲದು ಎಂದಿರುವ ನ್ಯಾಯಾಲಯ, ನಿವೇಶನದ ಮಾಲೀಕರಿಂದ ಅವುಗಳನ್ನು ಮರಳಿ ಸ್ವಾಧೀನಕ್ಕೆ ಪಡೆಯಬೇಕು ಎಂದು ಪ್ರಾಧಿಕಾರಕ್ಕೆ ಸೂಚನೆ ನೀಡಿತು.

ನ್ಯಾಯಮೂರ್ತಿಗಳಾದ ಅಬ್ದುಲ್ ಎಸ್.ನಜೀರ್, ಸಂಜೀವ್ ಖನ್ನಾ ಅವರನ್ನು ಒಳಗೊಂಡ ನ್ಯಾಯಪೀಠ, ನ್ಯಾಯಮೂರ್ತಿ ಎ.ವಿ.ಚಂದ್ರಶೇಖರ್ ಸಮಿತಿ ನೀಡಿರುವ ವರದಿಯನ್ನು ಪರಿಗಣಿಸಿತು. ಸುಪ್ರೀಂ ಕೋರ್ಟ್ 2021ರ ಅಕ್ಟೋಬರ್‌ನಲ್ಲಿ ನೀಡಿರುವ ಆದೇಶವನ್ನು ಉಲ್ಲಂಘಿಸಿ ಪ್ರಾಧಿಕಾರವು ಆರ್‌ಎಂವಿ ಎರಡನೇ ಹಂತದಲ್ಲಿ ರಾಜಕಾರಣಿಗಳಿಗೆ ಪರ್ಯಾಯ ನಿವೇಶನಗಳನ್ನು ಹಂಚಿಕೆ ಮಾಡಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮರು ಸ್ವಾಧೀನ ಪಡೆದಿರುವ ಅಥವಾ ಪೂರ್ಣ ಅಭಿವೃದ್ಧಿ ಹೊಂದಿದ ಬಡಾವಣೆಗಳಲ್ಲಿ ಸಾರ್ವಜನಿಕ ಹರಾಜಿನ ಮೂಲಕ ಮಾತ್ರ ನಿವೇಶನಗಳನ್ನು ಹಂಚಿಕೆ ಮಾಡಬೇಕು ಎಂದು ಸುಪ್ರೀಂ ಕೋರ್ಟ್ 2021ರ ಅಕ್ಟೋಬರ್ 29ರಂದು ಆದೇಶಿಸಿತ್ತು. ಆದರೆ, ಪ್ರಾಧಿಕಾರವು ಸುಪ್ರೀಂ ಕೋರ್ಟ್‌ನ ಆದೇಶವನ್ನು ಉಲ್ಲಂಘಿಸಿ ಅಭಿವೃದ್ಧಿ ಹೊಂದಿದ ಬಡಾವಣೆಯಲ್ಲಿ ಗೃಹ ಸಚಿವ ಆರಗ ಜ್ಞಾನೇಂದ್ರ, ಮಾಜಿ ಸಂಸದ ಬಸವರಾಜ ಪಾಟೀಲ ಸೇಡಂ, ಬಿಜೆಪಿ ಶಾಸಕರಾದ ವೀರಣ್ಣ ಸಿ.ಚರಂತಿಮಠ, ಅಭಯ ಪಾಟೀಲ, ನಗರಾಭಿವೃದ್ಧಿ ಇಲಾಖೆಯ ಉಪ ಕಾರ್ಯದರ್ಶಿ ಜಗದೀಶ ರೆಡ್ಡಿ ಸಂಬಂಧಿಕರು ಸೇರಿದಂತೆ ಏಳು ಮಂದಿಗೆ ಬದಲಿ ನಿವೇಶನಗಳನ್ನು ಹಂಚಿಕೆ ಮಾಡಿತ್ತು.



ಆರಗ ಜ್ಞಾನೇಂದ್ರ

‘ಬದಲಿ ನಿವೇಶನದ ಮಂಜೂರಾತಿಯಲ್ಲಿ ಕೆಲವು ಉಲ್ಲಂಘನೆಗಳು ಆಗಿವೆ ಎಂದು ನೀವು ಈಗಾಗಲೇ ತಿಳಿಸಿದ್ದೀರಿ. ಸಮಿತಿಯು ಉಲ್ಲಂಘನೆಯ ವಿವರಗಳನ್ನು ನೀಡಿದೆ. ನೀವು ಇಲ್ಲಿಯವರೆಗೆ ಕ್ರಯ ಪತ್ರವನ್ನು ರದ್ದುಗೊಳಿಸಿಲ್ಲ. ಇದರಿಂದ ಕೆಲವು ಜನರು ಒಂದೇ ಬಾರಿಗೆ ನಾಲ್ಕರಿಂದ ಐದು ನಿವೇಶನಗಳನ್ನು ಪಡೆಯಲು ಸಾಧ್ಯವಾಗಿದೆ’ ಎಂದ ನ್ಯಾಯಮೂರ್ತಿ ಅಬ್ದುಲ್ ನಜೀರ್, ನಿವೇಶನಗಳನ್ನು ಹಿಂಪಡೆಯಲು ಯಾವೆಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಬಿಡಿಎ ವಕೀಲರನ್ನು ಪ್ರಶ್ನಿಸಿದರು.

10ನೇ ಪುಟ ನೋಡಿ

ಕಾರ್ಯದರ್ಶಿ, ಉಪ ಕಾರ್ಯದರ್ಶಿ ವರ್ಗ

ಆರ್‌ಎಂವಿ ಎರಡನೇ ಹಂತದಲ್ಲಿ ರಾಜಕಾರಣಿಗಳಿಗೆ ಬದಲಿ ನಿವೇಶನಗಳನ್ನು ಹಂಚಿಕೆ ಮಾಡಿದ ಕಾರಣಕ್ಕೆ ಬಿಡಿಎ ಕಾರ್ಯದರ್ಶಿ ಸಿ.ಎಲ್.ಆನಂದ್ ಹಾಗೂ ಉಪ ಕಾರ್ಯದರ್ಶಿ ಡಾ.ಎನ್.ಎನ್.ಮಧು ಅವರನ್ನು ವರ್ಗಾವಣೆ ಮಾಡುವಂತೆ ಸುಪ್ರೀಂ ಕೋರ್ಟ್ ಆದೇಶಿಸಿದೆ.

‘ಅಧಿಕಾರಿಗಳಿಬ್ಬರು ದೇಶದ ಕಾನೂನನ್ನು ಪಾಲನೆ ಮಾಡಿಲ್ಲ. ಹಂಚಿಕೆಯಾದ ನಿವೇಶನ ಸಾರ್ವಜನಿಕ ಆಸ್ತಿ. ಅದು ಆಯುಕ್ತರ ಆಸ್ತಿಯಲ್ಲ’ ಎಂದು ನ್ಯಾಯಪೀಠ ಮೌಖಿಕವಾಗಿ ಹೇಳಿತು.

ಬದಲಿ ನಿವೇಶನಗಳನ್ನು ಹಂಚಿಕೆ ಮಾಡಿದ ಕಾರಣಕ್ಕೆ ಬಿಡಿಎ ಆಯುಕ್ತ ಎಂ.ಬಿ.ರಾಜೇಶ ಗೌಡ ಅವರನ್ನು ವರ್ಗಾವಣೆ ಮಾಡುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು.

ಮುಂದಿನ ಸಿಜೆಐ: ಚಂದ್ರಚೂಡ್ ಹೆಸರು ಶಿಫಾರಸು



ನವದೆಹಲಿ : ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯಮೂರ್ತಿ ಧನಂಜಯ ವೈ. ಚಂದ್ರಚೂಡ್ ಅವರನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಯು.ಯು. ಲಲಿತ್ ಅವರು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ. 11

ಪ್ರತಿಭಟನೆ ಕೈಬಿಟ್ಟ ವಿದ್ಯಾರ್ಥಿಗಳು

ಬೆಂಗಳೂರು: ‘ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಖಾಸಗಿ ವಾಹನಗಳ ಸಂಚಾರ ನಿಷೇಧಿಸಬೇಕು’ ಎಂದು ಒತ್ತಾಯಿಸಿ ಸೋಮವಾರದಿಂದ ಆರಂಭಿಸಿದ್ದ ಪ್ರತಿಭಟನೆಯನ್ನು ವಿದ್ಯಾರ್ಥಿಗಳು ಮಂಗಳವಾರ ಅಂತ್ಯಗೊಳಿಸಿದರು. 3B

ಚಿನಕುರಳಿ

ಪ್ರಕಾಶ್ ಶೆಟ್ಟಿ



₹9 ಲಕ್ಷ ಸಾಲ ನೀಡಿದ್ದ ಎಸ್ಟೇಟ್ ಮಾಲೀಕರಿಂದ ಕೃತ್ಯ: ಆರೋಪ

ದಲಿತ ಕುಟುಂಬದ 10 ಜನರ ಕೂಡಿಹಾಕಿ ಹಿಂಸೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ತಾಲ್ಲೂಕಿನ ಹುಣಸೆಹಳ್ಳಿ ಪುರದ ಎಸ್ಟೇಟ್‌ನಲ್ಲಿ ಕೆಲಸಕ್ಕಿದ್ದ ಪರಿಶಿಷ್ಟ ಜಾತಿಯ ಒಂದೇ ಕುಟುಂಬದ 10 ಮಂದಿಯನ್ನು ಎಸ್ಟೇಟ್ ಮಾಲೀಕ ಕೂಡಿಹಾಕಿ ಹಿಂಸಿಸಿದ್ದಾರೆ ಎಂದು ಪ್ರಕರಣ ದಾಖಲಾಗಿದೆ.

ಎಸ್ಟೇಟ್ ಮಾಲೀಕರೂ ಆದ ಬಿಜೆಪಿ ಬೆಂಬಲಿಗ ಜಗದೀಶ ಗೌಡ, ಅವರ ಪುತ್ರ ತಿಲಕ್ ವಿರುದ್ಧ ಬಾಳೆಹೊನ್ನೂರು ಠಾಣೆಯಲ್ಲಿ ಐಪಿಸಿ 504 (ಉದ್ದೇಶಪೂರ್ವಕವಾಗಿ ಶಾಂತಿ ಕದಡುವುದು), 323 (ಹಲ್ಲೆ), 342 (ಅಕ್ರಮ ಬಂಧನ), ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

‘ನಾನು, ಪತ್ನಿ ಅರ್ಪಿತಾ, ಸಹೋದರಿಯರಾದ ರೂಪಾ, ಕವಿತಾ, ಐವರು ಮಕ್ಕಳು ಸಹಿತ ಒಟ್ಟು 10 ಮಂದಿಯನ್ನು ಮನೆಯಲ್ಲಿ ಕೂಡಿಹಾಕಿ ಬೀಗ ಹಾಕಿದ್ದರು. ಬೆಳಿಗ್ಗೆಯಿಂದ ಸಂಜೆವರೆಗೂ ಮನೆಯೊಳಗೇ ಇದ್ದೆವು. ಅದರೊಳಗೆ ಶೌಚಾಲಯವೂ ಇರಲಿಲ್ಲ. ರೂಪಾ ಅವರು ಬಚ್ಚಿಟ್ಟಿದ್ದ ಮೊಬೈಲ್‌ನಿಂದ ಸಂಬಂಧಿಕರಿಗೆ ಕರೆ ಮಾಡಿ ವಿಷಯ ತಿಳಿಸಿದೆವು. ಪತ್ನಿ ಗರ್ಭಿಣಿ, ಅವರ ಹೊಟ್ಟೆಗೆ ಪೆಟ್ಟು ಬಿದ್ದು, ಗರ್ಭಪಾತವಾಗಿದೆ. ಸಂಜೆ ಮನೆಯ ಬೀಗ ತೆಗೆದರು, ಆಸ್ಪತ್ರೆಗೆ ಕರೆದೊಯ್ದೆವು’ ಎಂದು ಅರ್ಪಿತಾ ಪತಿ ವಿಜಯ್ ದೂರಿದ್ದಾರೆ.

‘ದೂರು ಆಧರಿಸಿ ಪ್ರಕರಣ ದಾಖಲಿಸಿದ್ದೇವೆ. ಆರೋಪಿಗಳನ್ನು ಬಂಧಿಸಿಲ್ಲ. ದೂರಿನಲ್ಲಿ ಗರ್ಭಪಾತದ ಉಲ್ಲೇಖ ಇಲ್ಲ. ತನಿಖೆ ಶುರುವಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ದೂರಿನಲ್ಲೇನಿದೆ?

‘ಎಸ್ಟೇಟ್ ಮಾಲೀಕರಾದ ಜಗದೀಶ, ಪುತ್ರ ತಿಲಕ್ ಅವರು ಸಾಲ ವಾಪಸ್ ನೀಡುವಂತೆ ಪೀಡಿಸಿ, ಬೈದು, ಥಳಿಸಿ ಕೂಲಿ ಲೈನ್‌ಮನೆಯಲ್ಲಿ ಕೂಡಿಹಾಕಿ ಹಿಂಸಿಸಿದ್ದಾರೆ’ ಎಂದು ಅರ್ಪಿತಾ ದೂರು ನೀಡಿದ್ದಾರೆ.

‘ಪತಿ ವಿಜಯ್, ಕುಟುಂಬದೊಂದಿಗೆ ಮೂರು ತಿಂಗಳಿಂದ ಜಗದೀಶ ಅವರ ಕಾಫಿ ತೋಟದಲ್ಲಿ ಕೆಲಸ ಮಾಡಿಕೊಂಡು ಕೂಲಿಲೈನ್ ನಲ್ಲಿ ವಾಸ ಇದ್ದೇವೆ. ಸುಮಾರು 15 ದಿನಗಳ ಹಿಂದೆ ಪತಿಯ ಸಂಬಂಧಿ ಸತೀಶ, ಮಂಜು ಅವರಿಗೂ ಮತ್ತು ಪಕ್ಕದ ಮನೆಯವರಿಗೂ ಮಕ್ಕಳ ವಿಚಾರದಲ್ಲಿ ಗಲಾಟೆಯಾಗಿತ್ತು. ಆ ಸಂದರ್ಭದಲ್ಲಿ ಎಸ್ಟೇಟ್ ಮಾಲೀಕ ಜಗದೀಶ ಅವರು ಮಂಜು ಅವರನ್ನು ನಿಂದಿಸಿ, ಥಳಿಸಿದ್ದರು’ ಎಂದು ದೂರಿನಲ್ಲಿ ಹೇಳಿದ್ದಾರೆ.

‘ಇನ್ನು ಮುಂದೆ ಇಲ್ಲಿ ಕೆಲಸ ಮಾಡಲ್ಲ, ಬೇರೆ ಕಡೆ ಹೋಗುತ್ತೇವೆ ಎಂದು ಮಾಲೀಕರಿಗೆ ಹೇಳಿದ್ದೆವು. ಪಡೆದಿರುವ ಸಾಲದ ಹಣವನ್ನು ವಾಪಸ್ ಕೊಟ್ಟು ಬೇರೆ ಕಡೆಗೆ ಹೋಗಿ ಎಂದು ಜಗದೀಶ ಹೇಳಿದ್ದರು. ಹೀಗಾಗಿ, ಹಣ ಹೊಂದಿಸಲು ಮಂಜು, ಸತೀಶ ಅವರು ಬೇರೆ ಎಸ್ಟೇಟ್‌ಗೆ ಹೋಗಿದ್ದರು. ಅ. 8ರಂದು ಬೆಳಿಗ್ಗೆ 10.30 ಗಂಟೆಗೆ ನಾವು ಪತಿ, ಪತ್ನಿ ಇಬ್ಬರೂ ಕೂಲಿಲೈನ್ ಮನೆಯಲ್ಲಿ ಇದ್ದಾಗ ಜಗದೀಶ, ತಿಲಕ್ ಅಲ್ಲಿಗೆ ಬಂದರು. ಹಣ ತರಲು ಹೋದವರು ಇನ್ನೂ ಬಂದಿಲ್ಲ ಎಂದು ಜೋರು ಮಾಡಿ ಬೈಯ್ದು, ಮೊಬೈಲ್ ಕಿತ್ತುಕೊಂಡರು. ಮೊಬೈಲ್ ಕೊಡಲ್ಲ ಎಂದಿದ್ದಕ್ಕೆ ಜಗದೀಶ ಅವರು ಕೆನ್ನೆಗೆ ಬಾರಿಸಿದರು. ಗಲಾಟೆ ಬಿಡಿಸಲು ಬಂದ ಪತಿ ವಿಜಯ್, ಪತಿಯ ಸಹೋದರಿಯರಾದ ರೂಪಾ, ಕವಿತಾ ಅವರಿಗೂ ಬೈದು, ಹೊಡೆದರು. ನಮ್ಮನ್ನೆಲ್ಲ ಕೂಲಿಲೈನ್‌ನಲ್ಲಿ ಕೂಡಿಹಾಕಿದರು‘ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

‘ಹೊಟ್ಟೆನೋವು ಇತ್ತು. ಮೂಡಿಗೆರೆಯ ಆಸ್ಪತ್ರೆಯಲ್ಲಿ ತೋರಿಸಿ, ಇದೇ 9ರಂದು ಚಿಕ್ಕಮಗಳೂರಿನ ಆಸ್ಪತ್ರೆಗೆ ಬಂದು ಚಿಕಿತ್ಸೆಗೆ ದಾಖಲಾಗಿದ್ದೇನೆ. ಜಗದೀಶ, ತಿಲಕ್ ವಿರುದ್ಧ ಕ್ರಮ ಕೈಗೊಳ್ಳಬೇಕು‘ ಎಂದು ಕೋರಿದ್ದಾರೆ.

ಹಿಂದಿ ಹೇರಿಕೆಗೆ ವಾಟಾಳ್ ಟೀಕೆ

ಬೆಂಗಳೂರು: ಗೃಹ ಸಚಿವ ಅಮಿತ್ ಶಾ ಅವರು ಹಿಂದಿ ಹೇರಿಕೆಯ ಮೂಲಕ ಎಲ್ಲ ಪ್ರಾದೇಶಿಕ ಭಾಷೆಗಳನ್ನು ತುಳಿಯುವ ಹುನ್ನಾರ ಮಾಡಿರುವುದು ಆತಂಕಕಾರಿ ಎಂದು ಕನ್ನಡ ಚಳವಳಿ ಪಕ್ಷದ ವಾಟಾಳ್ ನಾಗರಾಜ್ ತಿಳಿಸಿದ್ದಾರೆ.

15ಕ್ಕೆ 'ಭೂಮಿಕಾ ಕ್ಲಬ್' ಕಾರ್ಯಕ್ರಮ



ಶಮಿತಾ ಮಲ್ನಾಡ್

ಬೆಂಗಳೂರು: ಮಹಿಳೆಯರ ಜೀವನ ಶೈಲಿಯನ್ನು ಉತ್ಕೃಷ್ಟಗೊಳಿಸಲು 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಸ್ಥಾಪಿಸಿರುವ 'ಭೂಮಿಕಾ ಕ್ಲಬ್' ವೇದಿಕೆ, ಹಬ್ಬಗಳ ಪ್ರಯುಕ್ತ ಇದೇ ಶನಿವಾರ (ಅ.15) ಮಧ್ಯಾಹ್ನ 2.30ಕ್ಕೆ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ.

ಅಶೋಕ ನಗರದಲ್ಲಿರುವ ಸೇಂಟ್ ಜೋಸೆಫ್ಸ್ ಮ್ಯಾನೇಜ್‌ಮೆಂಟ್ ಇನ್‌ಸ್ಟಿಟ್ಯೂಟ್‌ನಲ್ಲಿ ಕಾರ್ಯಕ್ರಮ ನಡೆಯಲಿದೆ. ಗಾಯಕಿ ಶಮಿತಾ ಮಲ್ನಾಡ್ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಆರೋಗ್ಯಕರ ಆಹಾರದ ಬಗ್ಗೆ ಅಪೋಲೊ ಆಸ್ಪತ್ರೆಯ ಡಾ. ಪ್ರಿಯಾಂಕಾ ರೋಹಟಗಿ, ಹಬ್ಬಗಳ ಅಲಂಕಾರದ ಬಗ್ಗೆ ನಿಖಿತಾ ಪ್ರಿಯಾ ಭರಣ ಹಾಗೂ ಮನೆ ಅಲಂಕಾರದ ಬಗ್ಗೆ ಸ್ನೇಹಲ್ ಪಾಟೀಲ್ ಮಾತನಾಡಲಿದ್ದಾರೆ. ಶಮಿತಾ ಮಲ್ನಾಡ್ ಅವರು ಸಂಗೀತ ಕಾರ್ಯಕ್ರಮ ನೀಡಲಿದ್ದಾರೆ. ಸ್ಟೈಲ್ ಸ್ಟ್ರಾಡಾದಿಂದ ಹಬ್ಬದ ಪರಿಕಲ್ಪನೆಯ ಫ್ಯಾಷನ್ ಶೋ ನಡೆಯಲಿದೆ. ನೃತ್ಯ ನಿರ್ದೇಶಕ ಮಿರ್ಜಾ ಅಲಿ, ಡಿಸೈನರ್ ಬಕಾಶ್ ಅಲಿ ಭಾಗವಹಿಸಲಿದ್ದಾರೆ. ಮಾಲಾ ಅವರಿಂದ ಮೇಕ್ ಓವರ್ ನಡೆಯಲಿದೆ.

ಇಂಡಿಯಾ ಸ್ವೀಟ್ ಹೌಸ್‌ನಿಂದ ಅಚ್ಚರಿ ಉಡುಗೊರೆ ಗೆಲ್ಲುವ ಅವಕಾಶವೂ ಇರಲಿದೆ. ಹೆಸರು ನೋಂದಾಯಿಸಿದವರಿಗೆ ಮಾತ್ರ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಎಂದು ಪ್ರಕಟಣೆ ತಿಳಿಸಿದೆ.

ನೋಂದಣಿಗೆ: bit.ly/pvbhumikaclub

'ಎಸ್‌ಸಿ–ಎಸ್‌ಟಿ ಸೇರ್ಪಡೆಗೆ ಕೆಲ ಸಮುದಾಯಗಳ ಒತ್ತಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿಸುವಂತೆ ಇನ್ನೂ ಕೆಲವು ಸಮುದಾಯಗಳು ಒತ್ತಾಯಿಸುತ್ತಿವೆ. ಈ ಬಗ್ಗೆ ಹಿಂದುಳಿದ ವರ್ಗಗಳ ಆಯೋಗ ನೀಡುವ ಶಿಫಾರಸ್ಸುಗಳನ್ನು ಪರಿಶೀಲಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿ, 'ಮೀಸಲಾತಿ ಪಡೆಯುವ ಬಗ್ಗೆ ಎಲ್ಲ ಸಮುದಾಯಗಳಿಗೂ ಆಕಾಂಕ್ಷೆ ಇರುತ್ತದೆ. ಈ ವಿಚಾರವಾಗಿ ಹಿಂದುಳಿದ ವರ್ಗಗಳ ಆಯೋಗದ ತಜ್ಞರೊಡನೆ ಸಮಾಲೋಚಿಸಲಾಗುವುದು' ಎಂದೂ ಹೇಳಿದರು.

ಸರ್ಕಾರ ಎಸ್‌ಸಿ, ಎಸ್‌ಟಿ ಸಮುದಾಯಕ್ಕೆ ಮೀಸಲಾತಿ ಹೆಚ್ಚಿಸಿ ಕಾನೂನಾತ್ಮಕವಾಗಿ ರಕ್ಷಣೆ ಕೊಡುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ ಎಂದರು.

'2023ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಮತ್ತೊಮ್ಮೆ ಜಯಶಾಲಿಯಾಗುವ ವಿಶ್ವಾಸವಿದೆ. ರಾಜ್ಯದಲ್ಲಿ ನಮ್ಮ ಸರ್ಕಾರ ಮಾಡಿರುವ ಕಾರ್ಯಕ್ರಮಗಳು, ನೀತಿಗಳು ಮತ್ತು ಕೇಂದ್ರ ಸರ್ಕಾರದ ಕಾರ್ಯಕ್ರಮಗಳಿಂದಾಗಿ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲೂ ಸಾವಿರಾರು ಜನರಿಗೆ ಅನುಕೂಲವಾಗಿದೆ' ಎಂದರು.

'ಕಾಂಗ್ರೆಸ್ ಪಕ್ಷದ ಭಾರತ್ ಜೋಡೊ ಯಾತ್ರೆ ಬಗ್ಗೆ ನಾವು ತಲೆ ಕೆಡಿಸಿಕೊಂಡಿಲ್ಲ. ಜೋಡೊ ಯಾತ್ರೆ ಯಾರನ್ನು ಜೋಡಿಸುತ್ತಿದೆ, ಯಾರನ್ನು ಒಡೆಯುತ್ತಿದೆ ಎಂಬುದು ಜಗತ್ತಿಗೆ ತಿಳಿದಿದೆ. ಭಾರತ್ ಜೋಡೊ ಯಾತ್ರೆಗೂ ಜನಸಂಕಲ್ಪ ಯಾತ್ರೆಗೂ ಸಂಬಂಧವಿಲ್ಲ' ಎಂದು ಬೊಮ್ಮಾಯಿ ಹೇಳಿದರು.

ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಹೆಸರು ಬದಲು

ಬೆಂಗಳೂರು: ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಹೆಸರನ್ನು 'ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ' ಎಂದು ಬದಲಾಯಿಸಲಾಗಿದ್ದು, ಮಂಗಳವಾರ ಅಧಿಸೂಚನೆ ಹೊರಡಿಸಲಾಗಿದೆ.

ಪ್ರೌಢಶಾಲೆಗಳ ಜತೆಗೆ, ಪದವಿಪೂರ್ವ ಪರೀಕ್ಷೆಗಳನ್ನೂ ಈ ಮಂಡಳಿ ನಿರ್ವಹಿಸಲಿದೆ. ಇದುವರೆಗೂ 'ನಿರ್ದೇಶಕ' ಮಂಡಳಿಯ ಮುಖ್ಯಸ್ಥರಾಗಿದ್ದರು. ಮುಂದೆ ಆ ಸ್ಥಾನವನ್ನು ಅಧ್ಯಕ್ಷ ಸ್ಥಾನವೆಂದು ಸಂಬೋಧಿಸಲಾಗುತ್ತದೆ. ಐಎಎಸ್ ದರ್ಜೆಯ ಅಧಿಕಾರಿ ಆ ಹುದ್ದೆ ಅಲಂಕರಿಸಲಿದ್ದಾರೆ. ಎಸ್ಸೆಸ್ಸೆಲ್ಸಿ ಪರೀಕ್ಷಾ ಕಾರ್ಯಗಳನ್ನು ಉಪಾಧ್ಯಕ್ಷರು ನೋಡಿಕೊಳ್ಳುವರು. ಪ್ರಥಮ ಹಾಗೂ ದ್ವಿತೀಯ ಪಿಯುಗಳನ್ನು ಹಿರಿಯ ಪ್ರೌಢಶಾಲೆಯ 11 ಮತ್ತು 12ನೇ ತರಗತಿಗಳು ಎಂದು ಬಳಸಲು ಸೂಚಿಸಲಾಗಿದೆ.


ಪಾದಚಾರಿ ಮಾರ್ಗಕ್ಕೆ ನುಗ್ಗಿದ ಕಾರು: ಮಾಜಿ ಯೋಧ ರವಿಶಂಕರ್ ಸಾವು

ಪಾನಮತ್ತ ಚಾಲನೆಯಿಂದ ಅಪಘಾತ: ರಿಯಲ್ ಎಸ್ಟೇಟ್ ಉದ್ಯಮಿ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಸೋಮವಾರ ರಾತ್ರಿ ಅಪಘಾತ ಸಂಭವಿಸಿದ್ದು, ಮಾಜಿ ಯೋಧ ರವಿಶಂಕರ್ ರಾವ್ (59) ಎಂಬುವವರು ಮೃತಪಟ್ಟಿದ್ದಾರೆ.

'ಒಂದು ಬೆಳಿಯ ವಿರುಪಾಕ್ಷಪುರದ ರವಿಶಂಕರ್, ಕೆಲ ವರ್ಷ ಸೇನೆಯಲ್ಲಿ ಕೆಲಸ ಮಾಡಿ ಬಂದಿದ್ದರು. ಸದ್ಯ ನಗರದ ಸ್ವಾನ್ ಇಂಡಿಯಾ ಸೆಕ್ಯೂರ್ ಸರ್ವೀಸ್ ಕಂಪನಿಯಲ್ಲಿ ಕೆಲಸಕ್ಕೆ ಸೇರಿದ್ದರು. ಪತ್ನಿ ಹಾಗೂ ಮಕ್ಕಳ ಜೊತೆ ನೆಲೆಸಿದ್ದರು' ಎಂದು ಪೊಲೀಸರು ತಿಳಿಸಿದರು.


ರವಿಶಂಕರ್

'ರಿಯಲ್ ಎಸ್ಟೇಟ್ ಉದ್ಯಮಿ ನಿತಿನ್ ಪೂಜಯ್ಯ (29) ಎಂಬಾತ ಪಾನಮತ್ತನಾಗಿ ಅಡ್ಡಾದಿಡ್ಡಿ ಕಾರು (ಕೆಎ 01 ಎಂಡಿ 0634) ಚಲಾಯಿಸಿದ್ದ. ಪಾದಚಾರಿ ಮಾರ್ಗಕ್ಕೆ ನುಗ್ಗಿದ ಕಾರು, ಅಲ್ಲಿದ್ದ ರವಿಶಂಕರ್ ಸೇರಿದಂತೆ ನಾಲ್ವರಿಗೆ ಡಿಕ್ಕಿ ಹೊಡೆದಿತ್ತು' ಎಂದರು.

'ತೀವ್ರ ಗಾಯಗೊಂಡು ಪ್ರಜ್ಞೆ ತಪ್ಪಿದ್ದ ರವಿಶಂಕರ್ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ತಪಾಸಣೆ ನಡೆಸಿದ ವೈದ್ಯರು, ರವಿಶಂಕರ್ ಮೃತಪಟ್ಟಿರುವುದಾಗಿ ಹೇಳಿದರು. ಭದ್ರತಾ ಸಿಬ್ಬಂದಿಗಳಾದ ಎಸ್.ಪಿ. ಮಂಜುನಾಥ್, ನವೀನ್‌ಕುಮಾರ್, ಹೋಟೆಲ್ ಕೆಲಸಗಾರ ರಘು ಎಂಬುವರು ತೀವ್ರ ಗಾಯಗೊಂಡಿದ್ದಾರೆ. ಮೂವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪ್ರಕಾಶ್ ಎಂಬುವರಿಗೆ ಸಣ್ಣಪುಟ್ಟ ಗಾಯವಾಗಿದೆ' ಎಂದೂ ಪೊಲೀಸರು ತಿಳಿಸಿದರು.

'ಕೊಡಗಿನ ನಿತಿನ್, ದಾಸರಹಳ್ಳಿ ಮುಖ್ಯರಸ್ತೆಯಲ್ಲಿ ವಾಸವಿದ್ದ. ಪಾನಮತ್ತನಾಗಿ ನಿರ್ಲಕ್ಷ್ಯದಿಂದ ಅತಿ ವೇಗದಲ್ಲಿ ಕಾರು ಚಲಾಯಿಸಿದ್ದರಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಈತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ. ಅಪಘಾತದಲ್ಲಿ ನಿತಿನ್‌ಗೂ ಪೆಟ್ಟಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ' ಎಂದೂ ಹೇಳಿದರು.

ಪಾದಚಾರಿ ಮಾರ್ಗದಲ್ಲಿ ನಿಂತಿದ್ದ ಜನ: 'ರವಿಶಂಕರ್, ಮಂಜುನಾಥ್ ಹಾಗೂ ನವೀನ್‌ಕುಮಾರ್ ಮೂವರು ಸಹೋದ್ಯೋಗಿಗಳು. ಸೋಮವಾರ ರಾತ್ರಿ 11.45ರ ಸುಮಾರಿಗೆ ಕೊಡಿಗೇಹಳ್ಳಿ ಮುಖ್ಯರಸ್ತೆಯ 'ಬೆಂಗಳೂರು ದಮ್ ಬಿರಿಯಾನಿ' ಹೋಟೆಲ್ ಬಳಿಯ ಪಾದಚಾರಿ ಮಾರ್ಗದಲ್ಲಿ ನಿಂತಿದ್ದರು. ಹೋಟೆಲ್ ಕೆಲಸಗಾರರಾದ ರಘು ಹಾಗೂ ಪ್ರಕಾಶ್ ಸಹ ಅದೇ ಸ್ಥಳದಲ್ಲಿದ್ದರು' ಎಂದು ಪೊಲೀಸರು ತಿಳಿಸಿದರು.

'ಕೊಡಿಗೇಹಳ್ಳಿ ಮುಖ್ಯರಸ್ತೆಯಲ್ಲಿ ಹೊರಟಿದ್ದ ನಿತಿನ್, ಅಡ್ಡಾದಿಡ್ಡಿ ಕಾರು ಚಲಾಯಿಸಿದ್ದ. ಪಾದಚಾರಿ ಮಾರ್ಗಕ್ಕೆ ನುಗ್ಗಿದ ಕಾರು, ಅಲ್ಲಿದ್ದವರಿಗೆ ಡಿಕ್ಕಿ ಹೊಡೆದಿತ್ತು. ನಂತರ, ದ್ವಿಚಕ್ರ ವಾಹನಕ್ಕೂ ಗುದ್ದಿತ್ತು. ಅಪಘಾತದಲ್ಲಿ ಕಾರಿನ ಮುಂಭಾಗ ಜಖಂಗೊಂಡಿದೆ' ಎಂದೂ ಹೇಳಿದರು.

ಉಚಿತ ತರಗತಿ

ಬೆಂಗಳೂರು: ಉದಯಭಾನು ಕಲಾಸಂಘವು 2022-23ನೇ ಸಾಲಿಗೆ ಅವಕಾಶ ವಂಚಿತ ಅಶಕ್ತ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ (ವಿಜ್ಞಾನ ಮತ್ತು ವಾಣಿಜ್ಯ) ವಿದ್ಯಾರ್ಥಿಗಳಿಗೆ ಉಚಿತ ತರಗತಿಗಳನ್ನು ಪ್ರಾರಂಭಿಸಿದೆ.

ನಗರದ ಪ್ರಮುಖ ಶಾಲಾ ಕಾಲೇಜುಗಳ ಹಿರಿಯ ಅಧ್ಯಾಪಕರು ಗೌರವ ಸೇವೆ ಸಲ್ಲಿಸಲಿದ್ದು, ಅಶಕ್ತ ವಿದ್ಯಾರ್ಥಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಂಸ್ಥಾಪಕ ಗೌರವ ಕಾರ್ಯದರ್ಶಿ ಎಂ. ನರಸಿಂಹ ಕೋರಿದ್ದಾರೆ.

ವಿದ್ಯಾರ್ಥಿ - ಯುವಜನರಲ್ಲಿ ಶಿಸ್ತುಬದ್ಧ ವ್ಯಕ್ತಿತ್ವ ವಿಕಸನ ರೂಪಿಸುವ ಬಗ್ಗೆ ಹಾಗೂ ಪೋಷಕರಿಗೆ ಅನುಭವದ ಮಾರ್ಗಸೂಚಿ ಕಾರ್ಯಕ್ರಮ ಇದೇ 16 ರಂದು ಬೆಳಿಗ್ಗೆ 10ಕ್ಕೆ ಉದಯಭಾನು ಸಾಂಸ್ಕೃತಿಕ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಮಾಹಿತಿ ಕೆಂಪೇಗೌಡನಗರದಲ್ಲಿರುವ ಉದಯಭಾನು ಕಲಾಸಂಘದ ಸಹಾಯಕ ಕಾರ್ಯದರ್ಶಿ ಎಚ್.ಎಸ್. ಕಪಿಸ್ಯ (ದೂ:9880892180) ಅವರನ್ನು ಸಂಪರ್ಕಿಸಲು ಕೋರಲಾಗಿದೆ.

ಮೇಘಾಲಯ ಯುವತಿ ಮದುವೆಯಾಗಿದ್ದ ಆರೋಪಿ


ಪತ್ನಿ ಜತೆ ಸಲುಗೆ: ಆಫ್ರಿಕಾ ಪ್ರಜೆ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೃತಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಅಸೋಲೋಮನ್ ಎಕೆನೆ (35) ಎಂಬುವವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಈ ಸಂಬಂಧ ಓಬಿವಾರಾ (26) ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

'ಅಸೋಲೋಮನ್ ಹಾಗೂ ಆರೋಪಿ ಓಬಿವಾರ ಆಫ್ರಿಕಾ ಪ್ರಜೆಗಳು. ವ್ಯಾಪಾರ ವೀಸಾದಡಿ ನಗರಕ್ಕೆ ಬಂದಿದ್ದ ಇವರು ಪ್ರತ್ಯೇಕವಾಗಿ ನೆಲೆಸಿದ್ದರು. ಯುವತಿ ವಿಚಾರವಾಗಿ ಇಬ್ಬರ ಮಧ್ಯೆ ಜಗಳವಾಗಿ ಕೊಲೆಯಲ್ಲಿ ಅಂತ್ಯವಾಗಿದೆ' ಎಂದು ಪೊಲೀಸರು ಹೇಳಿದರು.

'ಓಬಿವಾರ, ಉದ್ಯೋಗ ಅರಸಿ ಬೆಂಗಳೂರಿಗೆ ಬಂದಿದ್ದ ಮೇಘಾಲಯದ ಯುವತಿಯೊಬ್ಬರನ್ನು ಪರಿಚಯಿಸಿಕೊಂಡಿದ್ದರು. ಇಬ್ಬರೂ ಪ್ರೀತಿಸಲಾರಂಭಿಸಿದ್ದರು. ನಂತರ, ಮದುವೆ ಆಗಿದ್ದರು. ದಾಸರಹಳ್ಳಿಯ ಮುನಿಕೆಂಪಣ್ಣ ಬಡಾವಣೆಯ ಬಹುಮಹಡಿ ಕಟ್ಟಡವೊಂದರ ಎರಡನೇ ಮಹಡಿಯಲ್ಲಿರುವ ಬಾಡಿಗೆ ಮನೆಯಲ್ಲಿ ವಾಸವಿದ್ದರು. ದಂಪತಿಗೆ ಮಗು ಸಹ ಇದೆ' ಎಂದರು.


ಓಬಿವಾರ

ಮನೆಗೆ ಕರೆಸಿದ್ದ ಪತ್ನಿ: 'ಆರೋಪಿಯ ಪತ್ನಿಗೆ ಇತ್ತೀಚೆಗೆ ಅಸೋಲೋಮನ್ ಪರಿಚಯವಾಗಿತ್ತು. ಇಬ್ಬರೂ ಸ್ನೇಹಿತರಾಗಿದ್ದರು. ಸಲುಗೆಯೂ ಬೆಳೆದಿತ್ತು. ಆರೋಪಿಯ ಪತ್ನಿ, ಸೋಮವಾರ ಸಂಜೆ ಅಸೋಲೋಮನ್ ಅವರನ್ನು ಮನೆಗೆ ಕರೆಸಿದ್ದರು. ಕೆಲಸ ನಿಮಿತ್ತ ಯಲಹಂಕಕ್ಕೆ ಹೋಗಿದ್ದ ಓಬಿವಾರ, ಏಕಾಏಕಿ ಮನೆಗೆ ಬಂದಿದ್ದ' ಎಂದು ಪೊಲೀಸರು ಹೇಳಿದರು.

'ಪತ್ನಿ ಜೊತೆಗಿದ್ದ ಅಸೋಲೋಮನ್ ಕಂಡು ಸಿಟ್ಟಾಗಿದ್ದ ಓಬಿವಾರ, ಜಗಳ ತೆಗೆದಿದ್ದ. ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ. ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು. ಓಬಿವಾರ, ಚಾಕುವಿನಿಂದ ಅಸೋಲೋಮನ್ ಅವರ ಎದೆ, ಹೊಟ್ಟೆ, ಕುತ್ತಿಗೆ ಇರಿದಿದ್ದ. ರಕ್ತ ಸೋರುತ್ತಿದ್ದ ಸ್ಥಿತಿಯಲ್ಲಿ ಆರೋಪಿಯಿಂದ ತಪ್ಪಿಸಿಕೊಂಡು ಓಡಿದ್ದ ಅಸೋಲೋಮನ್, ಮಹಡಿ ಮೆಟ್ಟಿಲು ಇಳಿಯುವಾಗ ಆಯತಪ್ಪಿ ಬಿದ್ದು ಮೃತಪಟ್ಟಿದ್ದಾರೆ.'

'ಕೊಲೆ ನಂತರ ಠಾಣೆಗೆ ಬಂದಿದ್ದ ಆರೋಪಿ ಓಬಿವಾರ, ತನ್ನದೇ ಭಾಷೆಯಲ್ಲಿ ಮಾತನಾಡಿದ್ದ. ಇದು ಠಾಣೆ ಸಿಬ್ಬಂದಿಗೆ ಅರ್ಥವಾಗಿರಲಿಲ್ಲ. ಓಬಿವಾರ ಕೈಗೂ ಗಾಯವಾಗಿತ್ತು. ಹೀಗಾಗಿ, ಆಸ್ಪತ್ರೆಗೆ ಹೋಗುವಂತೆ ಸಿಬ್ಬಂದಿ ಹೇಳಿ ಕಳುಹಿಸಿದ್ದರು. ಇದಾದ ಕೆಲ ನಿಮಿಷಗಳ ನಂತರ, ಕೊಲೆ ಬಗ್ಗೆ ಸ್ಥಳೀಯರು ಮಾಹಿತಿ ನೀಡಿದ್ದರು. ಅವಾಗಲೇ ಹುಡುಕಾಟ ನಡೆಸಿ ಆರೋಪಿಯನ್ನು ಬಂಧಿಸಲಾಯಿತು. ಪತ್ನಿ ಹಾಗೂ ಪ್ರತ್ಯಕ್ಷದರ್ಶಿಗಳ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಬಂಧಿತ ಓಬಿವಾರನನ್ನು ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಕಾನೂನು ಇಲಾಖೆ ಸಲಹೆ ಕೋರಿದ ಸಂಪುಟ ಉಪ ಸಮಿತಿ

ಸೊಪ್ಪಿನಬೆಟ್ಟ, ಕುಮ್ಕಿ ರೈತರಿಗೆ ಮಂಜೂರು?

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕುಮ್ಕಿ, ಬಾಣೆ ಮತ್ತು ಸೊಪ್ಪಿನಬೆಟ್ಟ ಜಮೀನುಗಳಲ್ಲಿ ದೀರ್ಘ ಕಾಲದಿಂದ ಸಾಗುವಳಿ ಮಾಡುತ್ತಿರುವ ರೈತರಿಗೆ ಆ ಜಮೀನುಗಳನ್ನು ಮಂಜೂರು ಮಾಡುವುದಕ್ಕೆ ಪೂರಕವಾಗಿ ಭೂ ಕಂದಾಯ ಕಾಯ್ದೆಗೆ ತಿದ್ದುಪಡಿ ತರುವುದಕ್ಕೆ ಪೂರಕವಾಗಿ ಸಂಪುಟ ಉಪ ಸಮಿತಿಯು ಕಾನೂನು ಇಲಾಖೆಯ ಸಲಹೆ ಕೋರಿದೆ.

ಕಂದಾಯ ಸಚಿವ ಆರ್.ಅಶೋಕ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸಂಪುಟ ಉಪ ಸಮಿತಿ ಸಭೆಯಲ್ಲಿ ಈ ಕುರಿತು ವಿಸ್ತೃತ ಚರ್ಚೆ ನಡೆಸಲಾಗಿದೆ. ಈ ಜಮೀನುಗಳನ್ನು ಸಾಗುವಳಿದಾರರಿಗೆ ಮಂಜೂರು ಮಾಡಲು ಇರುವ ಕಾನೂನು ತೊಡಕುಗಳನ್ನು ನಿವಾರಿಸುವುದಕ್ಕೆ ಪೂರಕವಾಗಿ ಕಾಯ್ದೆ ತಿದ್ದುಪಡಿ ಶಿಫಾರಸಿಗೆ ನಿರ್ಧರಿಸಲಾಗಿದೆ.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅಶೋಕ, 'ಕುಮ್ಕಿ, ಬಾಣೆ ಮತ್ತು ಸೊಪ್ಪಿನಬೆಟ್ಟ ಎಂದು ಗುರುತಿಸಿರುವ ಜಮೀನುಗಳಲ್ಲಿ 40 ರಿಂದ 50 ವರ್ಷಗಳಿಂದ ಸಾಗುವಳಿ ಮಾಡುತ್ತಿರುವ ರೈತರಿಗೆ ನೆರವಾಗುವುದು ನಮ್ಮ ಉದ್ದೇಶ' ಎಂದರು.

ಗುರುತಿಸಲಾದ ಇಂತಹ ಜಮೀನುಗಳಲ್ಲಿ ಹೊಸದಾಗಿ ಮಾಡುತ್ತಿರುವ ಸಾಗುವಳಿಗಳನ್ನು ಸಕ್ರಮಗೊಳಿಸುವುದಿಲ್ಲ. ದೀರ್ಘ ಕಾಲದಿಂದ ಸಾಗುವಳಿ ಮಾಡಿಕೊಂಡು ಬಂದಿದ್ದು, ಬಗರ್ ಹುಕುಂ ಯೋಜನೆಯಡಿ ಸಕ್ರಮ ಕೋರಿ ಅರ್ಜಿ ಸಲ್ಲಿಸಿದ್ದವರಿಗೆ ಮಾತ್ರ ಈ ಅವಕಾಶ ನೀಡಲಾಗುವುದು. ಹಿಂದೆ ಅರ್ಜಿಗಳು ತಿರಸ್ಕೃತಗೊಂಡಿದ್ದರೂ ಅಂತಹವರಿಗೆ ಈ ಯೋಜನೆಯಡಿ ಜಮೀನು ಮಂಜೂರಾತಿಗೆ ಅವಕಾಶ ಕಲ್ಪಿಸುವ ಪ್ರಸ್ತಾವವಿದೆ ಎಂದರು.


ಕಾಯ್ದೆಗೆ ತಿದ್ದುಪಡಿ ಕುರಿತು ಕಾನೂನು ಇಲಾಖೆಯು ಪ್ರಸ್ತಾವ ನೀಡಲಿದೆ. ಆ ಬಗ್ಗೆ ಸಮಿತಿಯ ಮುಂದಿನ ಸಭೆಯಲ್ಲಿ ಚರ್ಚಿಸಿ, ಕಾಯ್ದೆ ತಿದ್ದುಪಡಿಗೆ ಶಿಫಾರಸುಗಳನ್ನು ಮಾಡಲಾಗುವುದು ಎಂದು ಸಚಿವರು ತಿಳಿಸಿದರು.

ನಗರದಲ್ಲಿ ಇಂದು

ಎನ್.ಎಸ್. ಹೇಮಾ ದತ್ತಿ ಉಪನ್ಯಾಸ ಹಾಗೂ ಪ್ರಶಸ್ತಿ ಪ್ರದಾನ: ಕೆ.ಎಸ್. ಲತಾಕುಮಾರಿ, ಉಪನ್ಯಾಸಕರು: ಪ್ರೀತಿ ಶ್ರೀನಿವಾಸನ್, ಗೌರವ ಅತಿಥಿ: ಶ್ರೀನಿವಾಸ ಗರುಡಾಚಾರ್, ಉಪಸ್ಥಿತಿ: ವಿ.ಪಿ. ಮಹೇಂದ್ರ, ಆಯೋಜನೆ: ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಲಿಟಿ, ಸ್ಥಳ: ಇಂಡಿಯಾ ಕ್ಯಾಂಪಸ್ ಕ್ರುಸೇಡ್ ಫಾರ್ ಕ್ರೈಸ್ಟ್, ಹೆಣ್ಣೂರು ಮುಖ್ಯ ರಸ್ತೆ, ಲಿಂಗಾರಾಜಪುರ, ಬೆಳಿಗ್ಗೆ 10

ಅನುದಾನಿತ ಶಾಲಾ ಕಾಲೇಜುಗಳ ನೌಕರರ ರಾಜ್ಯ ಸಮಾವೇಶ: ಉದ್ಘಾಟನೆ: ಬಿ.ಸಿ. ನಾಗೇಶ್, ಉಪಸ್ಥಿತಿ: ವೈ.ಎ. ನಾರಾಯಣಸ್ವಾಮಿ, ಮುಖ್ಯ ಅತಿಥಿಗಳು: ಬಸವರಾಜ ಹೊರಟ್ಟಿ, ಪುಟ್ಟಣ್ಣ, ಮರಿತಿಬ್ಬೇಗೌಡ, ಎಸ್.ವಿ. ಸಂಕನೂರು, ಆಯನೂರು ಮಂಜುನಾಥ್, ಎಸ್.ಎಲ್. ಭೋಜೇಗೌಡ, ಪ್ರಕಾಶ್ ಹುಕ್ಕೇರಿ, ಶಶಿಲ್ ನಮೋಶಿ, ಅಧ್ಯಕ್ಷತೆ: ಡಿ.ಸಿ. ಗೋಪಿನಾಥ್, ಆಯೋಜನೆ: ಕರ್ನಾಟಕ ರಾಜ್ಯ ಅನುದಾನಿತ ಶಾಲಾ ಕಾಲೇಜುಗಳ ನೌಕರರ ಸಂಘ, ಸ್ಥಳ: ಶಿಕ್ಷಕರ ಸದನ, ಕೆ.ಜಿ. ರಸ್ತೆ, ಬೆಳಿಗ್ಗೆ 11.30

ಕನ್ನಡ ಚಿಂತನೆ: 'ಕನ್ನಡ ಹೋರಾಟ ಮತ್ತು ಕಾರ್ಮಿಕ ಸಂಘಗಳ ಪುನಶ್ಚೇತನ', ಉಪನ್ಯಾಸಕರು: ಚಕ್ಕೆರೆ ಶಿವಶಂಕರ್, ಅಧ್ಯಕ್ಷತೆ: ಎಂ. ತಿಮ್ಮಯ್ಯ, ಉಪಸ್ಥಿತಿ: ಚಳವಳಿ ರಾಮಕೃಷ್ಣ, ಆಯೋಜನೆ: ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ, ಕನ್ನಡ ಸಂಘಗಳ ಒಕ್ಕೂಟ, ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5



ಎಸ್.ಎಲ್. ಭೈರಪ್ಪ

ಚಿಂತನಾ ಗೋಷ್ಠಿ: 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ-2022' ಜಾರಿ ಬಗ್ಗೆ: ಭಾಗವಹಿಸುವವರು: ವೀರಭದ್ರ ಚನ್ನಮಲ್ಲ ಸ್ವಾಮೀಜಿ, ಶಿವರುದ್ರ ಸ್ವಾಮೀಜಿ, ಜೆ.ಸಿ. ಮಾಧುಸ್ವಾಮಿ, ವಿ. ಸುನೀಲ್ ಕುಮಾರ್, ಬಿ.ಸಿ. ನಾಗೇಶ್, ಎಚ್.ಕೆ. ಪಾಟೀಲ, ಚಂದ್ರಶೇಖರ ಕಂಬಾರ, ಎಸ್.ಎಲ್. ಭೈರಪ್ಪ, ದೊಡ್ಡರಂಗೇಗೌಡ, ಅರಳಿ ನಾಗರಾಜ, ಎಚ್.ಎಸ್. ನಾಗಮೋಹನದಾಸ್, ಪ್ರಧಾನ ಗುರುದತ್ತ, ಅಧ್ಯಕ್ಷತೆ: ಮಹೇಶ ಜೋಶಿ, ಆಯೋಜನೆ ಹಾಗೂ ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 11

ವಿ.ವಿ ಆವರಣದಲ್ಲಿ ರಾತ್ರಿಯಿಡೀ ಪ್ರತಿಭಟನೆ ● ವಿ.ಸೋಮಣ್ಣ, ಎಸ್.ಟಿ. ಸೋಮಶೇಖರ್ ಭೇಟಿ

ಪ್ರತಿಭಟನೆ ಕೈಬಿಟ್ಟ ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ



ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳು, 'ಆವರಣದಲ್ಲಿ ಖಾಸಗಿ ವಾಹನಗಳ ಸಂಚಾರ ನಿಷೇಧಿಸಿ' ಎಂದು ಘೋಷಣೆ ಕೂಗಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: 'ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಖಾಸಗಿ ವಾಹನಗಳ ಸಂಚಾರ ನಿಷೇಧಿಸಬೇಕು' ಎಂದು ಒತ್ತಾಯಿಸಿ ಸೋಮವಾರದಿಂದ ಆರಂಭಿಸಿದ್ದ ಪ್ರತಿಭಟನೆಯನ್ನು ವಿದ್ಯಾರ್ಥಿಗಳು ಮಂಗಳವಾರ ಅಂತ್ಯಗೊಳಿಸಿದರು.

ಜ್ಞಾನಭಾರತಿ ಆವರಣದಲ್ಲಿ ಬಿಎಂಟಿಸಿ ಬಸ್ ಮೈ ಮೇಲೆ ಹರಿದು ಎಂ.ಎಸ್ಸಿ ವಿದ್ಯಾರ್ಥಿನಿ ಶಿಲ್ಪಶ್ರೀ (22) ತೀವ್ರ ಗಾಯಗೊಂಡಿದ್ದರು. ಅಪಘಾತದಿಂದ ಆಕ್ರೋಶಗೊಂಡಿದ್ದ ವಿದ್ಯಾರ್ಥಿಗಳು, ಆವರಣದ ಪ್ರಮುಖ ರಸ್ತೆಗಳಲ್ಲಿ ವಾಹನಗಳ ಸಂಚಾರ ತಡೆದು ಪ್ರತಿಭಟನೆ ಆರಂಭಿಸಿದ್ದರು. ಇದರಿಂದಾಗಿ ಅಕ್ಕ-ಪಕ್ಕದ ಪ್ರದೇಶಗಳ ಸಾರ್ವಜನಿಕರ ಓಡಾಟಕ್ಕೆ ತೊಂದರೆ ಉಂಟಾಗಿತ್ತು.

ಕುಲಪತಿ ಡಾ. ಎಸ್.ಎಂ. ಜಯಕರ್ ಹಾಗೂ ಬಿಎಂಟಿಸಿ ಹಿರಿಯ ಅಧಿಕಾರಿಗಳು ಮನವೊಲಿಸಿದರೂ ವಿದ್ಯಾರ್ಥಿಗಳು ಪ್ರತಿಭಟನೆ ಕೈ ಬಿಟ್ಟಿರಲಿಲ್ಲ. ರಾತ್ರಿಯಿಡೀ ಪ್ರತಿಭಟನೆ ಮುಂದುವರಿಸಿದ್ದರು. ಮಂಗಳವಾರ ಬೆಳಿಗ್ಗೆಯೂ ಪ್ರತಿಭಟನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿ ಒಕ್ಕೂಟ ಹಾಗೂ ಶಿಕ್ಷಕರ ಪರಿಷತ್ ಸಹ ಪ್ರತಿಭಟನೆಗೆ ಬೆಂಬಲ ನೀಡಿತ್ತು. ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದರು.

ಮಂಗಳವಾರವೂ ರಸ್ತೆಯಲ್ಲಿ ಕುಳಿತಿದ್ದ ವಿದ್ಯಾರ್ಥಿಗಳು, 'ಜ್ಞಾನಭಾರತಿ ಆವರಣದಲ್ಲಿ ಬಿಎಂಟಿಸಿ ಬಸ್ ಹಾಗೂ ಇತರೆ ಎಲ್ಲ ಖಾಸಗಿ ವಾಹನಗಳ ಸಂಚಾರ ನಿರ್ಬಂಧಿಸಬೇಕು. ಬೇಡಿಕೆ ಈಡೇರುವವರೆಗೂ ಪ್ರತಿಭಟನೆ ಕೈಬಿಡುವುದಿಲ್ಲ' ಎಂದು ಪಟ್ಟು ಹಿಡಿದಿದ್ದರು.

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಸಚಿವರಾದ ವಿ.ಸೋಮಣ್ಣ ಹಾಗೂ ಎಸ್.ಟಿ. ಸೋಮಶೇಖರ್, 'ವಿದ್ಯಾರ್ಥಿಗಳ ಬೇಡಿಕೆ ಈಡೇರಿಸುವ ಬಗ್ಗೆ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರು ನಮ್ಮ ಜೊತೆ ಮಾತನಾಡಿದ್ದಾರೆ. ಸದ್ಯಕ್ಕೆ ಪ್ರತಿಭಟನೆ ಹಿಂಪಡೆಯಿರಿ. ವಾಹನಗಳ ಸಂಚಾರ ನಿರ್ಬಂಧಿಸುವ ಬಗ್ಗೆ ಚರ್ಚೆ ನಡೆಸಿ, ಕೆಲವೇ ದಿನಗಳಲ್ಲಿ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಹೇಳಿದರು.

ಇದಕ್ಕೆ ಒಪ್ಪಿದ ವಿದ್ಯಾರ್ಥಿಗಳು, 'ಕೊಟ್ಟ ಭರವಸೆ ಈಡೇರಿಸಬೇಕು. ಇಲ್ಲದಿದ್ದರೆ, ಪುನಃ ಪ್ರತಿಭಟನೆ ಆರಂಭಿಸಲಾಗುವುದು' ಎಂದು ಎಚ್ಚರಿಸಿ ಪ್ರತಿಭಟನೆ ಕೈಬಿಟ್ಟರು.

'ವಿದ್ಯಾರ್ಥಿನಿ ಆರೋಗ್ಯ ಸ್ಥಿತಿ ಗಂಭೀರ'

'ಅಪಘಾತದಲ್ಲಿ ಗಾಯಗೊಂಡಿರುವ ಶಿಲ್ಪಶ್ರೀ ಅವರನ್ನು ತೀವ್ರ ನಿಗಾ ಘಟಕದಲ್ಲಿ ಇರಿಸಲಾಗಿದೆ. ವೆಂಟಿಲೇಟರ್ ಅಳವಡಿಸಿ ಚಿಕಿತ್ಸೆ ನೀಡಲಾಗುತ್ತಿದ್ದು, ಆರೋಗ್ಯ ಸ್ಥಿತಿ ಗಂಭೀರವಾಗಿದೆ' ಎಂದು ಫೋರ್ಟಿಸ್ ಆಸ್ಪತ್ರೆ ವೈದ್ಯರು ತಿಳಿಸಿದ್ದಾರೆ.

ಮಾರ್ಷಲ್, ಬಿಎಂಟಿಎಫ್‌ಗೆ ಮನವಿ: ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್

ಒತ್ತುವರಿ ತೆರವು: ಪೊಲೀಸರ ನೆರವು

ಪ್ರಜಾವಾಣಿ ವಾರ್ತೆ



ಕೆ.ಆರ್.ಪುರ ಕ್ಷೇತ್ರದ ಬಸವನಪುರ ವಾರ್ಡಿನ ಎಸ್.ಆರ್. ಬಡಾವಣೆಯಲ್ಲಿ ಮನೆಯೊಂದರ ಗೋಡೆಯನ್ನು ತೆರವು ಮಾಡಲಾಯಿತು

ಬೆಂಗಳೂರು: 'ಒತ್ತುವರಿ ತೆರವಿನ ಸಂದರ್ಭದಲ್ಲಿ ಸ್ಥಳೀಯ ಪೊಲೀಸರಿಂದ ಬಿಬಿಎಂಪಿ ಅಧಿಕಾರಿಗಳಿಗೆ ರಕ್ಷಣೆ ನೀಡುವಂತೆ ಪೊಲೀಸ್ ವರಿಷ್ಠರಿಗೆ ಮನವಿ ಮಾಡಿಕೊಳ್ಳಲಾಗುವುದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಒತ್ತುವರಿ ತೆರವಿನ ಸಂದರ್ಭದಲ್ಲಿ ಸ್ಥಳೀಯ ಪೊಲೀಸರು ಬಿಬಿಎಂಪಿ ಅಧಿಕಾರಿಗಳಿಗೆ ನೆರವಾಗುತ್ತಿಲ್ಲ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ತುಷಾರ್ ಗಿರಿನಾಥ್, 'ಈ ಹಿಂದೆ ಕಂದಾಯ ಇಲಾಖೆಯವರು ಸಹಾಯ ಮಾಡುತ್ತಿಲ್ಲ ಎನ್ನಲಾಗುತ್ತಿತ್ತು. ಇದೀಗ ಪೊಲೀಸರ ಬಗ್ಗೆ ಹೇಳಲಾಗುತ್ತಿದೆ. ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿ ಅಗತ್ಯ ನೆರವು ಕೋರಲಾಗುವುದು' ಎಂದರು.

'ಬಿಎಂಟಿಎಫ್‌ನಲ್ಲಿ ಹೆಚ್ಚಿನ ಸಿಬ್ಬಂದಿ ಇಲ್ಲ. ಆದರೂ, ಅವರಿಂದ ಸಾಧ್ಯವಾದಷ್ಟು ರಕ್ಷಣೆಯನ್ನು ಪಡೆಯಲಾಗುತ್ತದೆ. ನಮ್ಮಲ್ಲಿರುವ ಮಾರ್ಷಲ್‌ಗಳು ಕೂಡ ಒತ್ತುವರಿ ತೆರವಿನ ಸಂದರ್ಭದಲ್ಲಿ ನೆರವಾಗುತ್ತಿದ್ದಾರೆ' ಎಂದರು.

ತೆರವು: ಬಿಬಿಎಂಪಿ ಮಹದೇವಪುರ ವಲಯದಲ್ಲಿ ಶೀಲವಂತನಕೆರೆ ಹಾಗೂ ಕೆ.ಆರ್.ಪುರ ವಿಭಾಗದ ಎಸ್.ಆರ್. ಲೇಔಟ್‌ನಲ್ಲಿ ಒತ್ತುವರಿ ತೆರವು ಕಾರ್ಯಾಚರಣೆ ಮಂಗಳವಾರ ನಡೆಯಿತು.

ಶೀಲವಂತನಕೆರೆಯ ಬಳಿಯ ಅಸೆಂಟ್ ಗಾರ್ಡೇನಿಯ ಹಿಂಭಾಗ ಸುಮಾರು 130 ಮೀಟರ್ ಉದ್ದದ ಕಾಂಪೌಂಡ್ ತೆರವುಗೊಳಿಸಲಾಗಿದೆ. ಕೆ.ಆರ್.ಪುರ ವಿಭಾಗ ಬಸವನಪುರ ವಾರ್ಡ್ ಎಸ್.ಆರ್ ಲೇಔಟ್‌ನಲ್ಲಿ ಸುಮಾರು 80 ಮೀಟರ್ ಉದ್ದದ ಮಳೆ ನೀರುಗಾಲುವೆಗೆ ಸ್ಥಳದಲ್ಲಿ ಆರು ಆರ್.ಸಿ.ಸಿ ಮನೆ ಹಾಗೂ ಒಂದು ಶೀಟಿನ ಮನೆಗಳಿವೆ. ಈ ಪೈಕಿ ಎರಡು ಮನೆಗಳ ಗೋಡೆ ಹಾಗೂ ಮೆಟ್ಟಿಲುಗಳ ಭಾಗವನ್ನು ತೆರವುಗೊಳಿಸಲಾಗಿದೆ. ಎರಡು ಅಂತಸ್ತಿನ ಕಟ್ಟಡವನ್ನು ಮಳೆ ನೀರುಗಾಲುವೆಯ ಮೇಲೆ ನಿರ್ಮಾಣ ಮಾಡಿದ್ದು, ಮಾರ್ಕಿಂಗ್ ಮಾಡಿರುವ ಭಾಗದವರೆಗೆ ಗೋಡೆ ತೆರವು ಮಾಡಲು ಮುಂದಾದಾಗ ಮನೆಯ ಮಾಲಿಕರೇ ಸ್ವತಃ ತೆರವುಗೊಳಿಸುವುದಾಗಿ ತಿಳಿಸಿದರು. ಅದಕ್ಕೆ ಅಧಿಕಾರಿಗಳು ಸಮ್ಮತಿ ನೀಡಿ, ತ್ವರಿತ ತೆರವಿಗೆ ಸೂಚಿಸಿದ್ದಾರೆ. ಮನೆಯ ಗೋಡೆ ಭಾಗ ಹಾಗೂ ಕಾಂಪೌಂಡ್ ತೆರವುಗೊಳಿಸಲಾಗಿದೆ. ಒಂದು ಶೆಡ್ ಗೋಡೆ ಭಾಗವನ್ನು ತೆರವುಗೊಳಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

'ವ್ಯವಸ್ಥೆ ವಿರುದ್ಧ ಎಲ್ಲೆಡೆ ಅಸಮಾಧಾನ'

ಪಿ.ಜಿ.ಆರ್. ಸಿಂಧ್ಯಾ ಅವರಿಗೆ 'ಜೆ.ಪಿ.ಪ್ರಶಸ್ತಿ' ಪ್ರದಾನ ಮಾಡಿದ ಮೇಧಾ ಪಾಟ್ಕರ್

ಪ್ರಜಾವಾಣಿ ವಾರ್ತೆ



ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಜಯಪ್ರಕಾಶ್ ನಾರಾಯಣ್–121 ಸಮಾರಂಭದಲ್ಲಿ ಸಾಮಾಜಿಕ ಕಾರ್ಯಕರ್ತೆ ಮೇಧಾ ಪಾಟ್ಕರ್ ಅವರು ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ ಅವರಿಗೆ 'ಜೆ.ಪಿ.ಪ್ರಶಸ್ತಿ' ಪ್ರದಾನ ಮಾಡಿದರು. ಎಂ.ವಿ. ಗಣೇಶ್, ಬಿ.ಆರ್.ಪಾಟೀಲ್, ಬಿ.ಎಲ್.ಶಂಕರ್, ದಯಾನಂದ್ ಕೋಲಾರ, ಕೆ.ವಿ.ನಾಗರಾಜ ಮೂರ್ತಿ ಇದ್ದರು.

ಬೆಂಗಳೂರು: 'ಆಡಳಿತ ನಡೆಸುತ್ತಿರುವ ಸರ್ಕಾರಗಳು ಬಡತನ ನಿರ್ಮೂಲನೆಯತ್ತ ಚಿತ್ತ ಹರಿಸದೆ ಮಂದಿರ, ಮಸೀದಿಯತ್ತ ಓಡುತ್ತಿವೆ. ಸದ್ಯದ ಪರಿಸ್ಥಿತಿಯಲ್ಲಿ ಈ ವ್ಯವಸ್ಥೆಯ ಬಗ್ಗೆ ಎಲ್ಲೆಡೆ ಅಸಮಾಧಾನವಿದೆ' ಎಂದು ಸಾಮಾಜಿಕ ಕಾರ್ಯಕರ್ತೆ ಮೇಧಾ ಪಾಟ್ಕರ್ ಹೇಳಿದರು.

ಭಾರತ ಯಾತ್ರಾ ಕೇಂದ್ರ, ಲೋಕನಾಯಕ ಜೆ.ಪಿ. ವಿಚಾರ ವೇದಿಕೆ ಮಂಗಳವಾರ ಹಮ್ಮಿಕೊಂಡಿದ್ದ ಜಯಪ್ರಕಾಶ್‌ನಾರಾಯಣ್–121ಸಮಾರಂಭದಲ್ಲಿ ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯಾ ಅವರಿಗೆ 'ಜೆ.ಪಿ.ಪ್ರಶಸ್ತಿ' ಪ್ರದಾನ ಮಾಡಿ ಅವರು ಮಾತನಾಡಿದರು.

'ಬಡತನ ನಿರ್ಮೂಲನೆಗೆ ಪ್ರಾಮಾಣಿಕ ಪ್ರಯತ್ನಗಳು ನಡೆಯುತ್ತಿಲ್ಲ. ಕೋವಿಡ್ ನಂತರವಂತೂ ಈ ಅಂತರ ಹೆಚ್ಚಾಗಿದೆ. ಮತ್ತೊಂದು ಕಡೆ ಭಾರತದ ಶ್ರೀಮಂತರು ವಿಶ್ವದ ಪಟ್ಟಿಯಲ್ಲಿ ಸ್ಥಾನ ಪಡೆಯುತ್ತಿದ್ದಾರೆ. ಅವರಿಗೆ ಕೇಂದ್ರ ಸರ್ಕಾರದ ಸಂಪೂರ್ಣ ಸಹಕಾರವಿದೆ. ಜಮೀನು, ಅರಣ್ಯ, ನದಿ ಪಾತ್ರಗಳನ್ನೂ ಅವರಿಗೆ ಧಾರೆ ಎರೆಯಲಾಗುತ್ತಿದೆ. ಅದಕ್ಕಾಗಿ ಪ್ರಜಾಪ್ರಭುತ್ವವನ್ನೇ ಬಲಿ ಕೊಡಲಾಗುತ್ತಿದೆ' ಎಂದು ಕಳವಳ ವ್ಯಕ್ತಪಡಿಸಿದರು.

'ವ್ಯವಸ್ಥೆ ಪ್ರಶ್ನಿಸುವ ನಿಷ್ಠೂರತೆ, ಸವಾಲುಗಳನ್ನು ಹಾಕುವ ದೃಢತೆಯನ್ನು ಸಾಮಾನ್ಯ ಜನರೂ ಬೆಳೆಸಿಕೊಳ್ಳಬೇಕು. ಮತದಾನದ ಹಕ್ಕು ಚಲಾಯಿಸುವುದಷ್ಟೇ ಜನರು ಸೀಮಿತವಾಗಬಾರದು, ಅಧಿಕಾರಕ್ಕೇರಿದ ಸರ್ಕಾರ, ನಮ್ಮ ಸುತ್ತಲ ಸಮಾಜ ಹೇಗೆ ಸಾಗುತ್ತಿದೆ ಎನ್ನುವ ಅರಿವು ಹೊಂದಬೇಕು. ಜನರು ಪ್ರಶ್ನಿಸುವ, ಹೋರಾಟ ಮಾಡುವ ಮನೋಭಾವ ಕಳೆದುಕೊಳ್ಳಬಾರದು' ಎಂದು ಸಲಹೆ ನೀಡಿದರು.

'ಬಳ್ಳಾರಿಯಲ್ಲಿ 25 ಸಾವಿರ ಕೂಲಿ ಕಾರ್ಮಿಕರು ಸಂಕಷ್ಟ ಎದುರಿಸುತ್ತಿದ್ದಾರೆ. ಸರ್ಕಾರ ಅದನ್ನು ಹಳೆಯ ಸಮಸ್ಯೆ ಎನ್ನುತ್ತದೆ. ರಾಮಮಂದಿರ ವಿವಾದ ಹೊಸ ಸಮಸ್ಯೆಯೇ? ಮಂದಿರ ಸಮಸ್ಯೆ ಬಗೆಹರಿಸುವ ಮನಸ್ಸು ಮಾಡುವ ಸರ್ಕಾರಗಳಿಗೆ ಕೂಲಿ ಕಾರ್ಮಿಕರ ಸಮಸ್ಯೆಗಳು ಗೌಣವಾಗಿವೆಯೇ' ಎಂದು ಪ್ರಶ್ನಿಸಿದರು.

'ರಾಹುಲ್ ಗಾಂಧಿ ಹಮ್ಮಿಕೊಂಡಿರುವ ಭಾರತ್ ಜೋಡೊ ಯಾತ್ರೆಯ ಘೋಷಣೆಗಳು ಹಿಂದೆ ನಾವೆಲ್ಲ ಬಳಸಿದವುಗಳು. ಅವರ ಯಾತ್ರೆ ರಾಜಕೀಯ ಕಾರಣಗಳಿಗಾಗಿ ನಡೆಯುತ್ತಿದೆ. ಜನರು ಅಂತಹ ಸಣ್ಣಸಣ್ಣ ಯಾತ್ರೆಗಳನ್ನು ತಮ್ಮ ಮಟ್ಟದಲ್ಲೇ ನಡೆಸಬೇಕು. ಸ್ಥಳೀಯ ಸಮಸ್ಯೆಗಳ ಬಗ್ಗೆ ಗಮನ ಸೆಳೆಯಬೇಕು' ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕರ್ನಾಟಕ ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್. ಶಂಕರ್, 'ಜಯಪ್ರಕಾಶ್ ನಾರಾಯಣ್ ಅವರದು ನಿಸ್ವಾರ್ಥ ಚಳವಳಿ. ಅವರ ಹೋರಾಟದ ಪ್ರವಾಹದಲ್ಲಿ ಈಜಿದ ಎಲ್ಲರೂ ರಾಜಕಾರಣದಲ್ಲಿ ಬೆಳೆದರು. ಆದರೆ, ಜೆಪಿ ಮಾತ್ರ ಎಂದೂ ಅಧಿಕಾರ ಬಯಸಲಿಲ್ಲ' ಎಂದು ಸ್ಮರಿಸಿದರು.

ಮಾಜಿ ಶಾಸಕ ಬಿ.ಆರ್.ಪಾಟೀಲ್ ಅಧ್ಯಕ್ಷತೆ ವಹಿಸಿದ್ದರು. ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಪಿ.ನಾಡಗೌಡ, ಸಾಮಾಜಿಕ ಹೋರಾಟಗಾರ ಎಚ್. ಕೆ.ವಿವೇಕಾನಂದ ಉಪಸ್ಥಿತರಿದ್ದರು.

ಚಾವಣಿ ಕುಸಿದು ಇಬ್ಬರು ಕಾರ್ಮಿಕರು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ ಠಾಣೆ ವ್ಯಾಪ್ತಿಯ ಹೂಡಿ ಬಳಿ ಶಿಥಿಲಗೊಂಡಿದ್ದ ಕೊಠಡಿಯೊಂದರ ಚಾವಣಿ ಕುಸಿದು ಬಿದ್ದು ಇಬ್ಬರು ಕಾರ್ಮಿಕರು ಮೃತಪಟ್ಟಿದ್ದಾರೆ.

'ಬಿಹಾರದ ಅರ್ಮಾನ್ (28) ಹಾಗೂ ಜೈನುದ್ದೀನ್ (37) ಮೃತರು. ಮಂಗಳವಾರ ನಸುಕಿನಲ್ಲಿ ಸಂಭವಿಸಿದ ಘಟನೆಯಲ್ಲಿ ಮೂವರು ಕಾರ್ಮಿಕರು ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಪೊಲೀಸರು ಹೇಳಿದರು.

'ಹೂಡಿ ಗ್ರಾಫೈಟ್ ಇಂಡಿಯಾ ಕಂಪನಿ ಬಳಿ ಹಳೇ ಕಟ್ಟಡವಿದ್ದು, ಅದರ ತೆರವು ಕೆಲಸಕ್ಕೆಂದು ಕಾರ್ಮಿಕರು ಬಂದಿದ್ದರು. ಕಟ್ಟಡವನ್ನು ತೆರವು ಮಾಡುತ್ತ, ಅವಶೇಷ ಸಾಗಿಸುವ ಕೆಲಸ ಮಾಡುತ್ತಿದ್ದರು. ಕಟ್ಟಡದ ಎದುರಿನ ಖುಲ್ಲಾ ಜಾಗದಲ್ಲಿ ತಾತ್ಕಾಲಿಕ ಶೆಡ್ ಹಾಕಿಕೊಂಡು ಕಾರ್ಮಿಕರು ಉಳಿದುಕೊಂಡಿದ್ದರು. ರಾತ್ರಿಯೂ ಅಲ್ಲಿಯೇ ಮಲಗುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

ಮಳೆ ಬಂದಿದ್ದರಿಂದ ಕೊಠಡಿಯಲ್ಲಿ ನಿದ್ದೆ: 'ಕಟ್ಟಡದ ಆವರಣದಲ್ಲಿ ಶಿಥಿಲಗೊಂಡಿರುವ ಕೊಠಡಿ ಇದ್ದು, ಮಳೆ ಬಂದಾಗ ಅಲ್ಲಿಯೇ ಕಾರ್ಮಿಕರು ಮಲಗುತ್ತಿದ್ದರು. ಸೋಮವಾರ ರಾತ್ರಿ ಎಂದಿನಂತೆ ಖುಲ್ಲಾ ಜಾಗದಲ್ಲಿ ಐವರು ಕಾರ್ಮಿಕರು ಮಲಗಿದ್ದರು. ಜೋರು ಮಳೆ ಬಂದಿದ್ದರಿಂದ, ಕೊಠಡಿಯೊಳಗೆ ಹೋಗಿ ಮಲಗಿಕೊಂಡಿದ್ದರು' ಎಂದು ಪೊಲೀಸರು ಹೇಳಿದರು.

'ಮಂಗಳವಾರ ನಸುಕಿನಲ್ಲಿ ಕಟ್ಟಡದ ಅವಶೇಷ, ಕೊಠಡಿಯ ಚಾವಣಿ ಮೇಲೆ ಬಿದ್ದಿತ್ತು. ಚಾವಣಿಯಡಿ ಐವರು ಕಾರ್ಮಿಕರು ಸಿಲುಕಿದ್ದರು. ಮಾಹಿತಿ ತಿಳಿಯುತ್ತಿದ್ದಂತೆ ಅಗ್ನಿಶಾಮಕ ದಳದ ಸಿಬ್ಬಂದಿ ಜತೆ ಸ್ಥಳಕ್ಕೆ ಹೋಗಿ ಕಾರ್ಯಾಚರಣೆ ನಡೆಸಲಾಯಿತು. ಮೂವರು ಕಾರ್ಮಿಕರನ್ನು ರಕ್ಷಿಸಲಾಯಿತು. ಅರ್ಮಾನ್ ಹಾಗೂ ಜೈನುದ್ದೀನ್ ಸ್ಥಳದಲ್ಲೇ ಮೃತಪಟ್ಟಿದ್ದರು. ಮೃತದೇಹವನ್ನು ಹೊರಗೆ ತೆಗೆದು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಯಿತು' ಎಂದರು.

ಚಿತ್ರಾವಳಿ



ಅಂತರರಾಷ್ಟ್ರೀಯ ಹೆಣ್ಣು ಮಕ್ಕಳ ದಿನ ಪ್ರಯುಕ್ತ ಬ್ರಿಟಿಷ್ ಹೈಕಮಿಷನ್ ಆಯೋಜಿಸಿದ್ದ 'ಒಂದು ದಿನ ಡೆಪ್ಯುಟಿ ಹೈ ಕಮಿಷನರ್ ಸ್ಪರ್ಧೆಯಲ್ಲಿ ವಿಜೇತರಾದ ಪಿಇಎಸ್ ವಿಶ್ವವಿದ್ಯಾಲಯದ ಮೂರನೇ ವರ್ಷದ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ವಿದ್ಯಾರ್ಥಿನಿ ಮೇಧಾ ಕೊಪ್ಪಂ ಅವರಿಗೆ ಮಂಗಳವಾರ ಪಿಇಎಸ್ ವಿಶ್ವವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬ್ರಿಟಿಷ್ ಡೆಪ್ಯುಟಿ ಹೈಕಮಿಷನರ್ ಡಾ. ಆಂಡ್ರ್ಯೂ ಫ್ಲೆಮಿಂಗ್ ಅವರು ಪ್ರಮಾಣಪತ್ರ ನೀಡಿ ಗೌರವಿಸಿದರು. ಕುಲಪತಿ ಡಾ.ಜೆ. ಸೂರ್ಯಪ್ರಸಾದ್, ವಿದ್ಯಾರ್ಥಿ ವಿಭಾಗದ ಡೀನ್ ಡಾ.ವಿ. ಕೃಷ್ಣ ಇದ್ದರು.



ಜಯನಗರದ ನ್ಯಾಷನಲ್ ಕಾಲೇಜಿನಲ್ಲಿ ಸೋಮವಾರ ಸುಸಜ್ಜಿತ 'ಕಂಪ್ಯೂಟಿಂಗ್ ಮತ್ತು ಕೊಲಾಬರೇಷನ್' ಪ್ರಯೋಗಾಲಯವನ್ನು ಭಾರತೀಯ ಜೀವವಿಮಾ ನಿಗಮದ ದಕ್ಷಿಣ ಕೇಂದ್ರವಲಯದ ಪ್ರಾಂತೀಯ ವ್ಯವಸ್ಥಾಪಕ ಎಂ. ಜಗನ್ನಾಥ್ ಉದ್ಘಾಟಿಸಿದರು. ನ್ಯಾಷನಲ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ. ಎ.ಎಚ್. ರಾಮರಾವ್, ಕಾರ್ಯದರ್ಶಿ ಡಾ. ಪಿ. ಸದಾನಂದ ಮಯ್ಯ, ಪ್ರೊ.ಎಸ್.ಎನ್. ನಾಗರಾಜ ರೆಡ್ಡಿ ಇದ್ದರು. ಭಾರತೀಯ ಜೀವ ವಿಮಾ ನಿಗಮದ ಆರ್ಥಿಕ ಸಹಾಯದಿಂದ ಈ ಪ್ರಯೋಗಾಲಯ ಸ್ಥಾಪಿಸಲಾಗಿದ್ದು, 50 ಕಂಪ್ಯೂಟರ್‌ಗಳನ್ನು ಅಳವಡಿಸಲಾಗಿದೆ.



ನಗರದ ರಾಜು ಕ್ಷತ್ರೀಯ ಸಂಘಟನೆಯ 'ಮಹಿಳಾ ವೇದಿಕೆ'ಯ ಉದ್ಘಾಟನಾ ಕಾರ್ಯಕ್ರಮದಲ್ಲಿ ವೇದಿಕೆ ಅಧ್ಯಕ್ಷೆ ಇಂದಿರಾ ನಾಗರಾಜ್, ಸಂಘದ ಅಧ್ಯಕ್ಷ ಎನ್. ಗಣೇಶ್ ರಾಜು, ಕರ್ನಾಟಕ ಕ್ಷತ್ರಿಯ ಫೆಡರೇಷನ್‌ನ ಗೌರವ ಅಧ್ಯಕ್ಷ ಡಾ. ಎ. ರಾಧಾಕೃಷ್ಣ ರಾಜು, ಫೆಡರೇಷನ್ ಅಧ್ಯಕ್ಷ ಕೆ. ಶ್ಯಾಮರಾಜು, ಟ್ರಸ್ಟಿ ಎ.ಸಿ. ಚಂದ್ರಶೇಖರ್ ರಾಜು, ಪ್ರಧಾನ ಕಾರ್ಯದರ್ಶಿ ಸಿ. ಚಂದ್ರಶೇಖರ್ ರಾಜು, ಖಜಾಂಚಿ ಸಿಎ ವರದರಾಜು ಪಾಲ್ಗೊಂಡಿದ್ದರು.

ಸಂಕ್ಷಿಪ್ತ ಸುದ್ದಿ

ವೈಟ್ ಟೀಕ್ ಮಳಿಗೆ ಆರಂಭ

ಬೆಂಗಳೂರು: ಏಷ್ಯನ್ ಪೇಂಟ್ಸ್ ಮಾಲೀಕತ್ವದ, ಐಷಾರಾಮಿ ದೀಪಗಳ ಬ್ರ್ಯಾಂಡ್ ಆಗಿರುವ 'ದಿ ವೈಟ್ ಟೀಕ್ ಕಂಪನಿ'ಯು ಜಯನಗರದಲ್ಲಿ ಮಳಿಗೆಯನ್ನು ಆರಂಭಿಸಿದೆ.

ಈ ಅತ್ಯಾಧುನಿಕ ಮಳಿಗೆಯನ್ನು ಏಷ್ಯನ್ ಪೇಂಟ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಅಮಿತ್ ಸಿಂಗಲ್ ಮಂಗಳವಾರ ಉದ್ಘಾಟಿಸಿದರು.

ಇದು ದೇಶದಲ್ಲಿ ದಿ ವೈಟ್ ಟೀಕ್ ಕಂಪನಿಯ 13ನೆಯ ಮಳಿಗೆ. ಬೆಂಗಳೂರಿನಲ್ಲಿ ಮೂರನೆಯ ಮಳಿಗೆ. ಆಲಂಕಾರಿಕ ದೀಪಗಳ ಸಂಗ್ರಹ ಇಲ್ಲಿ ಇದೆ. ದೀಪ ಹೇಗೆ ಕಾಣಿಸುತ್ತದೆ ಎಂಬುದನ್ನು ಖರೀದಿಗೆ ಮೊದಲು ನೋಡುವ ಅವಕಾಶ ಇಲ್ಲಿ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಜಲಮಂಡಳಿ: 13ಕ್ಕೆ ನೀರಿನ ಅದಾಲತ್

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ವತಿಯಿಂದ ವಿವಿಧ ಉಪವಿಭಾಗಗಳಲ್ಲಿ ಇದೇ 13ರಂದು ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 9.30ರಿಂದ 11 ಗಂಟೆಯವರೆಗೆ ಅದಾಲತ್ ನಡೆಯಲಿದೆ ಎಂದು ಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ದೂರು ನೀಡಲು ಸಹಾಯವಾಣಿ 1916ಗೆ ಕರೆ ಮಾಡಬಹುದು. ವಾಟ್ಸ್‌ಆ್ಯಪ್ ಸಂಖ್ಯೆ 8762228888ಗೆ.

ಪ್ರತಿ ವರ್ಷ ಸರಾಸರಿ 1,688 ಹೊಸ ಪ್ರಕರಣಗಳು ಪತ್ತೆ

ನಗರದಲ್ಲಿ ಸ್ತನ ಕ್ಯಾನ್ಸರ್ ಪ್ರಕರಣ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬದಲಾದ ಜೀವನ ಶೈಲಿ, ಪಾಶ್ಚಿಮಾತ್ಯ ಆಹಾರ ಪದ್ಧತಿ, ಧೂಮಪಾನದಂತಹ ವ್ಯಸನದಿಂದ ನಗರದಲ್ಲಿ ಸ್ತನ ಕ್ಯಾನ್ಸರ್ ಪ್ರಕರಣಗಳು ಹೆಚ್ಚಳವಾಗುತ್ತಿವೆ. ಪ್ರತಿ ವರ್ಷ ಸರಾಸರಿ 1,688 ಹೊಸ ಪ್ರಕರಣಗಳು ಪತ್ತೆಯಾಗುತ್ತಿವೆ' ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಕಳವಳ ವ್ಯಕ್ತಪಡಿಸಿದೆ.

ಸಂಸ್ಥೆಯು ಸ್ತನ ಕ್ಯಾನ್ಸರ್ ಮಾಸಾಚರಣೆಯ ಪ್ರಯುಕ್ತ ಈ ತಿಂಗಳು ವಿವಿಧೆಡೆ ಸ್ತನ ಕ್ಯಾನ್ಸರ್ ತಪಾಸಣಾ ಶಿಬಿರಗಳನ್ನು ಹಮ್ಮಿಕೊಂಡಿದೆ. ಈ ಶಿಬಿರಗಳಲ್ಲಿ ರೋಗ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಲಾಗುತ್ತಿದೆ.

'ನಗರದಲ್ಲಿ ಸದ್ಯ ಸುಮಾರು 4,558 ಸ್ತನ ಕ್ಯಾನ್ಸರ್ ಪ್ರಕರಣಗಳಿವೆ. ಮಹಿಳೆಯರಲ್ಲಿ ಕಾಣಿಸಿಕೊಳ್ಳುತ್ತಿರುವ ಒಟ್ಟಾರೆ ಕ್ಯಾನ್ಸರ್ ಪ್ರಕರಣಗಳಲ್ಲಿ ಶೇ 28 ರಷ್ಟು ಸ್ತನ ಕ್ಯಾನ್ಸರ್ ಪ್ರಕರಣಗಳಾಗಿವೆ. ಸಂಸ್ಥೆಯಲ್ಲಿ ಪ್ರತಿವರ್ಷ ಸುಮಾರು 800 ಸ್ತನ ಕ್ಯಾನ್ಸರ್ ಪ್ರಕರಣಗಳು ಹೊಸದಾಗಿ ವರದಿಯಾಗುತ್ತಿವೆ. ಈ ಕಾಯಿಲೆಯನ್ನು ಬೇಗ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಿದಲ್ಲಿ ರೋಗ ಗುಣಪಡಿಸಲು ಸಾಧ್ಯ. ಆದರೆ, ಸ್ತನ ಕ್ಯಾನ್ಸರ್ ಪೀಡಿತರಲ್ಲಿ ಶೇ 50ಕ್ಕಿಂತ ಅಧಿಕ ರೋಗಿಗಳು 3ನೇ ಅಥವಾ 4ನೇ ಹಂತದಲ್ಲಿ ದಾಖಲಾಗುತ್ತಿದ್ದಾರೆ' ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ. ರಾಮಚಂದ್ರ ತಿಳಿಸಿದ್ದಾರೆ.

ದ್ವಿತೀಯ ಸ್ಥಾನ: 'ದೇಶದಲ್ಲಿ ಪ್ರತಿ ವರ್ಷ ಸುಮಾರು 1,78,000 ಸ್ತನ ಕ್ಯಾನ್ಸರ್ ಪ್ರಕರಣಗಳು ಪತ್ತೆಯಾಗುತ್ತಿವೆ. ರಾಜ್ಯದಲ್ಲಿ 9,800ಕ್ಕೂ ಅಧಿಕ ಪ್ರಕರಣಗಳು ವರದಿಯಾಗುತ್ತಿವೆ. ಸದ್ಯ 30 ಸಾವಿರ ಸ್ತನ ಕ್ಯಾನ್ಸರ್ ಪ್ರಕರಣಗಳಿವೆ ಎಂದು ಅಂದಾಜಿಸಲಾಗಿದೆ. ದೇಶದಲ್ಲಿ ಅತೀ ಹೆಚ್ಚು ಕ್ಯಾನ್ಸರ್ ಪ್ರಕರಣಗಳು ವರದಿಯಾಗುತ್ತಿರುವ ಮಹಾನಗರಗಳಲ್ಲಿ ಬೆಂಗಳೂರು ದ್ವಿತೀಯ ಸ್ಥಾನದಲ್ಲಿದೆ. ಚೆನ್ನೈನಲ್ಲಿ ಅಧಿಕ ಪ್ರಕರಣಗಳು ವರದಿಯಾಗುತ್ತಿವೆ' ಎಂದು ಹೇಳಿದ್ದಾರೆ.


'ಆರಂಭಿಕ ಹಂತದಲ್ಲಿ ಕಾಯಿಲೆ ಪತ್ತೆಯಾದರೆ ಗುಣಪಡಿಸುವ ಸಾಧ್ಯತೆ ಶೇ 90 ರಷ್ಟು ಇರುತ್ತದೆ. ಪಾಶ್ಚಿಮಾತ್ಯ ದೇಶಗಳಿಗೆ ಹೋಲಿಸಿದರೆ ದೇಶದಲ್ಲಿ ಸ್ತನ ಕ್ಯಾನ್ಸರ್‌ನಿಂದ ಬದುಕುಳಿಯುವಿಕೆಯ ಪ್ರಮಾಣ ಕಡಿಮೆ ಇದೆ. ಅಮೆರಿಕದಲ್ಲಿ ಶೇ 89ರಷ್ಟು ಮತ್ತು ಇಂಗ್ಲೆಂಡ್‌ನಲ್ಲಿ ಶೇ 82ರಷ್ಟು ಬದುಕುಳಿಯುವ ಸಾಧ್ಯತೆಯಿದೆ. ಈ ಪ್ರಮಾಣ ದೇಶದಲ್ಲಿ ಶೇ 65 ರಿಂದ ಶೇ 70 ರಷ್ಟಿದೆ' ಎಂದು ತಿಳಿಸಿದ್ದಾರೆ.

ಸ್ತನ ಕ್ಯಾನ್ಸರ್ ಲಕ್ಷಣಗಳು

- ಸ್ತನದಲ್ಲಿ ಊತ
- ಸ್ತನ ಅಥವಾ ತೊಟ್ಟುಗಳಲ್ಲಿ ನೋವು
- ತೊಟ್ಟು ಒಳಕ್ಕೆ ಹೋಗುವುದು
- ತೊಟ್ಟುಗಳಿಂದ ಹಳದಿ ಅಥವಾ ಹಸಿರು ಮಿಶ್ರಿತ ದ್ರವರೂಪ ಸ್ರವಿಸುವುದು
- ಸ್ತನ ಚರ್ಮ ಅಥವಾ ತೊಟ್ಟುಗಳು ಕೆಂಪಾಗುವುದು
- ಚರ್ಮದಲ್ಲಿ ಅಸಹಜತೆ ಅಥವಾ ಮಬ್ಬಾಗಿಸುವಿಕೆ
- ತೊಟ್ಟುಗಳ ಬಳಿ ಅಥವಾ ಸ್ತನ ಪ್ರದೇಶದಲ್ಲಿ ಗಡ್ಡೆ ಕಾಣಿಸಿಕೊಳ್ಳುವುದು
- ಕಂಕುಳಲ್ಲಿ ಗಡ್ಡೆ
- ಸ್ತನದ ಆಕಾರದಲ್ಲಿ ಬದಲಾವಣೆ
- ತೊಟ್ಟುಗಳಿಂದ ರಕ್ತದ ಹನಿ ಒಸರುವುದು
- ಮೂಳೆ ನೋವು

ಸ್ತನ ಕ್ಯಾನ್ಸರ್ ತಡೆಗಟ್ಟುವಿಕೆ

- ಧೂಮಪಾನ ವ್ಯಸನ ಬಿಡಬೇಕು
- ಮದ್ಯಸೇವನೆ ನಿಯಂತ್ರಣದಲ್ಲಿ ಇರಬೇಕು
- ವ್ಯಾಯಾಮ ಮಾಡಬೇಕು
- ನಿಯಮಿತ ಪರೀಕ್ಷೆಗೆ ಒಳಗಾಗಬೇಕು





ರೋಗ ಉಲ್ಬಣಗೊಂಡ ಬಳಿಕ ಚಿಕಿತ್ಸೆಗೆ ಬರುತ್ತಾರೆ. ಪ್ರಾರಂಭಿಕ ಹಂತದಲ್ಲೇ ಸ್ತನ ಕ್ಯಾನ್ಸರ್ ಇರುವುದನ್ನು ಪತ್ತೆ ಮಾಡಿ, ಚಿಕಿತ್ಸೆ ಒದಗಿಸಿದಲ್ಲಿ ಕಾಯಿಲೆ ಗುಣಪಡಿಸಲು ಸಾಧ್ಯ.

ಡಾ.ಸಿ. ರಾಮಚಂದ್ರ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

ಈದ್ ಮಿಲಾದ್ ಮೆರವಣಿಗೆಯಲ್ಲಿ ಮಾರಕಾಸ್ತ್ರ: 18 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈದ್ ಮಿಲಾದ್ ಹಬ್ಬದ ಮೆರವಣಿಗೆಯಲ್ಲಿ ಮಾರಕಾಸ್ತ್ರ ಹಿಡಿದು ನೃತ್ಯ ಮಾಡಿ ಸಾರ್ವಜನಿಕರಲ್ಲಿ ಭಯವನ್ನುಂಟು ಮಾಡಿದ್ದ ಆರೋಪದಡಿ ಮುಸ್ಲಿಂ ಸಮುದಾಯದ 18 ಮಂದಿಯನ್ನು ಸಿದ್ದಾಪುರ ಪೊಲೀಸರು ಬಂಧಿಸಿದ್ದಾರೆ.

'ಸೋಮೇಶ್ವರನಗರದ 7ನೇ ಅಡ್ಡರಸ್ತೆಯಲ್ಲಿ ಅ. 9ರಂದು ರಾತ್ರಿ ಮೆರವಣಿಗೆ ನಡೆಸಿದ್ದ ಕೆಲ ಮುಸ್ಲಿಂ ಯುವಕರು ಮಾರಕಾಸ್ತ್ರ ಹಿಡಿದು ನೃತ್ಯ ಮಾಡಿದ್ದರು. ಇದರ ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದವು. ಅದೇ ವಿಡಿಯೊ ಆಧರಿಸಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ವಿಡಿಯೊವನ್ನು ಪುರಾವೆಯನ್ನಾಗಿ ಪರಿಗಣಿಸಿ ಹಲವರ ಹೇಳಿಕೆ ಪಡೆಯಲಾಗಿದೆ. ಮೆರವಣಿಗೆಯಲ್ಲಿ ನೃತ್ಯ ಮಾಡಿದ್ದ 18 ಮಂದಿಯನ್ನು ಬಂಧಿಸಲಾಗಿದ್ದು, ಇದರಲ್ಲಿ 13 ಬಾಲಕರಿದ್ದಾರೆ' ಎಂದರು.

ಪ್ರಚೋದನಾಕಾರಿ ಹೇಳಿಕೆ ಸಂಗೀತಕ್ಕೆ ನೃತ್ಯ: 'ಹಿಂದೂ ಸಮುದಾಯದ ಬಗ್ಗೆ ಅಸಾದುದ್ದೀನ್ ಓವೈಸಿ ನೀಡಿದ್ದ ಪ್ರಚೋದನಾ ಹೇಳಿಕೆಗೆ ಯುವಕರು ಸಂಗೀತ ರೂಪ ನೀಡಿದ್ದರು. ಅದನ್ನೇ ಡಿ.ಜೆ (ಡಿಸ್ಕ್ ಜಾಕಿ) ಸಂಗೀತದ ಮೂಲಕ ಹಚ್ಚಿಕೊಂಡು ಯುವಕರು ನೃತ್ಯ ಮಾಡಿದ್ದರು. ಲಾಂಗ್, ಮಚ್ಚು, ಡ್ರ್ಯಾಗರ್ ಸಹ ಪ್ರದರ್ಶಿಸಿದ್ದರು. ರಸ್ತೆ ಅಕ್ಕ-ಪಕ್ಕದಲ್ಲಿ ನಿಂತಿದ್ದವರಿಗೆ ತೋರಿಸಿ ಬೆದರಿಸಿದ್ದರು. ಇದೇ ದೃಶ್ಯಗಳು ವಿಡಿಯೊದಲ್ಲಿವೆ' ಎಂದು ಪೊಲೀಸರು ತಿಳಿಸಿದರು.

'ಅಕ್ರಮ ಕೂಟ, ಧಾರ್ಮಿಕ ಭಾವನೆಗಳಿಗೆ ಧಕ್ಕೆ, ಮಹಿಳೆಯರ ಗೌರವಕ್ಕೆ ಧಕ್ಕೆ ಆರೋಪ ಹಾಗೂ ಅಕ್ರಮ ಶಸ್ತ್ರಾಸ್ತ್ರ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಮತ್ತಷ್ಟು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ಹೇಳಿದರು.

'ಮಕ್ಕಳು ಅಮಾಯಕರು'

ಯುವಕರನ್ನು ಪೊಲೀಸರು ಬಂಧಿಸಿದ ಸುದ್ದಿ ತಿಳಿಯುತ್ತಿದ್ದಂತೆ ಪೋಷಕರು ಸಿದ್ದಾಪುರ ಠಾಣೆಗೆ ಬಂದು ಮಾಹಿತಿ ಪಡೆದುಕೊಂಡರು.

'ನಮ್ಮ ಮಕ್ಕಳು ಅಮಾಯಕರು. ಯಾವ ತಪ್ಪು ಮಾಡಿಲ್ಲ. ಅವರನ್ನು ಬಿಟ್ಟು ಬಿಡಿ' ಎಂದು ಕೋರಿದರು. ಪೊಲೀಸರು, 'ಪುರಾವೆಗಳ ಸಮೇತ ಯುವಕರನ್ನು ಬಂಧಿಸಲಾಗಿದೆ. ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗಿದೆ' ಎಂದು ಹೇಳಿ ಕಳುಹಿಸಿದರು. ಮುಂಜಾಗ್ರತಾ ಕ್ರಮವಾಗಿ ಠಾಣೆ ಎದುರು ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿತ್ತು.

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷ ಆನೂರು ಅನಂತಕೃಷ್ಣ ಶರ್ಮ ಹೇಳಿಕೆ

‘ಅಕಾಡೆಮಿ ವಿಂಗಡಣೆ: ಸರ್ಕಾರಕ್ಕೆ ಅಹವಾಲು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸುಗಮ ಸಂಗೀತ ಹಾಗೂ ನೃತ್ಯದವರು ಪ್ರತ್ಯೇಕ ಅಕಾಡೆಮಿ ಸ್ಥಾಪನೆಗೆ ಆಗ್ರಹಿಸುತ್ತಿದ್ದಾರೆ. ಅಕಾಡೆಮಿ ವಿಂಗಡಣೆಗೆ ಸಂಬಂಧಿಸಿದಂತೆ ಕಲಾವಿದರ ಅಹವಾಲನ್ನು ಸರ್ಕಾರದ ಗಮನಕ್ಕೆ ತರಲಾಗಿದೆ’ ಎಂದು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷ ಆನೂರು ಅನಂತಕೃಷ್ಣ ಶರ್ಮ ತಿಳಿಸಿದರು.

ಅಕಾಡೆಮಿಯು ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಸಮಾರಂಭದಲ್ಲಿ ಸಂಗೀತ ಮತ್ತು ನೃತ್ಯ ಸಾಧಕರಿಗೆ 2022–23ನೇ ಸಾಲಿನ ‘ಕರ್ನಾಟಕ ಕಲಾಶ್ರೀ’ ಪ್ರಶಸ್ತಿಗಳನ್ನು ಪ್ರದಾನ ಮಾಡಿ, ಮಾತನಾಡಿದರು.

‘ಅಕಾಡೆಮಿಯನ್ನು ವಿಂಗಡಿಸಿ, ವಾರ್ಷಿಕ ಅನುದಾನವನ್ನು ಅಷ್ಟೇ ನೀಡಿದರೆ ಕಷ್ಟ. ಪ್ರತ್ಯೇಕವಾಗಿ ಅನುದಾನ ಬಿಡುಗಡೆ ಮಾಡಿದಲ್ಲಿ ವಿವಿಧ ಕಾರ್ಯ-ಯೋಜನೆಗಳನ್ನು ಹಮ್ಮಿಕೊಳ್ಳಲು ಸಾಧ್ಯವಾಗುತ್ತದೆ. ಅಕಾಡೆಮಿ ವಿಂಗಡಣೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಂಗೀತ–ನೃತ್ಯ ಕ್ಷೇತ್ರದ ಸಾಧಕರನ್ನು ಗುರುತಿಸಿ, ಗೌರವಿಸಬಹುದು ಎನ್ನುವುದು ಕಲಾವಿದರ ಆಗ್ರಹ’ ಎಂದರು.

ಸಂಗೀತ ಕಲಾವಿದೆ ವಸಂತ ಮಾಧವಿ, ‘ಸಂಗೀತದ ವಿವಿಧ ಪ್ರಕಾರಗಳ ಜತೆಗೆ ನೃತ್ಯವೂ ಅಕಾಡೆಮಿಯಡಿ ಬರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಾಧಕರನ್ನು ಗುರುತಿಸಿ, ಗೌರವಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಅಕಾಡೆಮಿಯನ್ನು ವಿಂಗಡಿಸಬೇಕು. ಇಲ್ಲವಾದಲ್ಲಿ ಕಲಾ ಸಾಧಕರು ಜೀವನದ ಕಡೆಯ ದಿನಗಳವರೆಗೂ ಪ್ರಶಸ್ತಿಗೆ ಕಾಯಬೇಕಾಗುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಪ್ರಶಸ್ತಿಗಳನ್ನು ನೀಡಿದರೆ ಕಲೆ ಹಾಗೂ ಕಲಾವಿದರು ಬೆಳೆಯುತ್ತಾರೆ’ ಎಂದರು.

ನೃತ್ಯ ಕಲಾವಿದೆ ಉಷಾ ದಾತಾರ್, ‘ರಾಜ್ಯೋತ್ಸವದಂತಹ ಪ್ರಶಸ್ತಿಗಳಿಗೆ ಅರ್ಜಿ ಸಲ್ಲಿಸುವ ವ್ಯವಸ್ಥೆ ಸರಿಯಲ್ಲ. ಇದರಿಂದ ಕಲೆ ಮತ್ತು ಕಲಾವಿದರಿಗೆ ಅವಮಾನ ಮಾಡಿದಂತೆ ಆಗಲಿದೆ. ಕಲಾವಿದರ ಸಾಧನೆಯನ್ನು ಸರ್ಕಾರ, ಅಕಾಡೆಮಿಗಳೇ ಗುರುತಿಸಿ ಗೌರವಿಸಬೇಕು’ ಎಂದು ತಿಳಿಸಿದರು.



ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ ಬಲಕ್ಕೆ) ಕಲಾವಿದರಾದ ಸಿ.ಆರ್. ರಾಮಚಂದ್ರ ಅವರು ‘ಕರ್ನಾಟಕ ಕಲಾಶ್ರೀ ಗೌರವ ಪ್ರಶಸ್ತಿ’, ಪಿ.ಕೆ. ದಾಮೋದರಂ, ಸಿ.ಎ. ನಾಗರಾಜ ಹಾಗೂ ಎಂ. ನಾರಾಯಣ ಅವರು ‘ಕರ್ನಾಟಕ ಕಲಾಶ್ರೀ’ ಪ್ರಶಸ್ತಿ ಸ್ವೀಕರಿಸಿದರು. ಅಕಾಡೆಮಿ ಅಧ್ಯಕ್ಷ ಆನೂರು ಅನಂತಕೃಷ್ಣ ಶರ್ಮ, ಸಂಗೀತ ಕಲಾವಿದೆ ವಸಂತ ಮಾಧವಿ, ನೃತ್ಯ ಕಲಾವಿದೆ ಉಷಾದಾತಾರ್ ಮತ್ತು ಅಕಾಡೆಮಿ ಸದಸ್ಯರ ಜತೆಗೆ ‘ಕರ್ನಾಟಕ ಕಲಾಶ್ರೀ’ ಗೌರವ ಪ್ರಶಸ್ತಿ ಸ್ವೀಕರಿಸಿದ ಗೀತಾ ಸರಳಾಯ, ‘ಕರ್ನಾಟಕ ಕಲಾಶ್ರೀ’ ವಾರ್ಷಿಕ ಪ್ರಶಸ್ತಿ ಪುರಸ್ಕೃತ ಎಂ.ಪಿ. ಹೆಗಡೆ ಪಡಿಗೆರೆ, ಮಹಾದೇವಪ್ಪ ನಿಂಗಪ್ಪ ಹಳ್ಳಿ, ಹನುಮಂತಪ್ಪ ಬ. ತಿಮ್ಮಾಪೂರ, ಫಯಾಜ್ ಖಾನ್, ರೋಹಿಣಿ ಇಮಾರತಿ, ಪುಷ್ಪಾ ಕೃಷ್ಣಮೂರ್ತಿ, ಪುರುಷೋತ್ತಮ, ಸಿದ್ರಾಮಪ್ಪ ಪೊಲೀಸ್ ಪಾಟೀಲ್, ಮಧುರಾ ರವಿಕುಮಾರ್, ಶೀಲಾ ನಾಯ್ಡು, ಅನಂತ ನಾರಾಯಣ, ಚಂದ್ರಶೇಖರ ಕೆದಿಲಾಯ, ಪ್ರವೀಣ್ ಡಿ. ರಾವ್ ಹಾಗೂ ಪುಸ್ತಕ ಬಹುಮಾನ ಪುರಸ್ಕೃತೆ ಜಯದೇವಿ ಜಂಗಮಶೆಟ್ಟಿ ಇದ್ದಾರೆ – ಪ್ರಜಾವಾಣಿ ಚಿತ್ರ

18 ಸಾಧಕರಿಗೆ ‘ಕರ್ನಾಟಕ ಕಲಾಶ್ರೀ’ ಪ್ರಶಸ್ತಿ ಪ್ರದಾನ

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ 2022–23ನೇ ಸಾಲಿನ ‘ಕರ್ನಾಟಕ ಕಲಾಶ್ರೀ’ ಗೌರವ ಪ್ರಶಸ್ತಿಯನ್ನು ಗಾಯಕ ಸಿ.ಆರ್. ರಾಮಚಂದ್ರ ಹಾಗೂ ನೃತ್ಯ ಗುರು ಗೀತಾ ಸರಳಾಯ ಅವರಿಗೆ ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಯು ₹ 50 ಸಾವಿರ ನಗದು ಒಳಗೊಂಡಿದೆ. ಕರ್ನಾಟಕ ಸಂಗೀತ ಕ್ಷೇತ್ರದಲ್ಲಿನ ಸಾಧನೆಗೆ ಸಿ.ಎ. ನಾಗರಾಜ, ಎಂ. ನಾರಾಯಣ, ಹಾಗೂ ಪಿ.ಕೆ. ದಾಮೋದರಂ, ಹಿಂದೂಸ್ತಾನಿ ಸಂಗೀತ ಕ್ಷೇತ್ರದಲ್ಲಿನ ಸಾಧನೆಗೆ ಎಂ.ಪಿ. ಹೆಗಡೆ ಪಡಿಗೆರೆ, ಮಹಾದೇವಪ್ಪ ನಿಂಗಪ್ಪ ಹಳ್ಳಿ, ಹನುಮಂತಪ್ಪ ಬ. ತಿಮ್ಮಾಪೂರ ಹಾಗೂ ಫಯಾಜ್ ಖಾನ್ ಅವರಿಗೆ ‘ಕರ್ನಾಟಕ ಕಲಾಶ್ರೀ’ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನೃತ್ಯ ಕ್ಷೇತ್ರದಲ್ಲಿನ ಸಾಧನೆಗೆ ರೋಹಿಣಿ ಇಮಾರತಿ, ಪುಷ್ಪಾ ಕೃಷ್ಣಮೂರ್ತಿ, ಪುರುಷೋತ್ತಮ, ಸುಗಮ ಸಂಗೀತ ಕ್ಷೇತ್ರದ ಸಾಧನೆಗೆ ಸಿದ್ರಾಮಪ್ಪ ಪೊಲೀಸ್ ಪಾಟೀಲ್, ಮಧುರಾ ರವಿಕುಮಾರ್, ಕಥಾಕೀರ್ತನೆಗೆ ಶೀಲಾ ನಾಯ್ಡು, ಗಮಕ ವಿಭಾಗದಲ್ಲಿ ಅನಂತ ನಾರಾಯಣ, ಚಂದ್ರಶೇಖರ ಕೆದಿಲಾಯ ಹಾಗೂ ಪ್ರವೀಣ್ ಡಿ. ರಾವ್ ಅವರಿಗೆ ಕರ್ನಾಟಕ ಕಲಾಶ್ರೀ’ ವಾರ್ಷಿಕ ಪ್ರಶಸ್ತಿ ನೀಡಿ, ಗೌರವಿಸಲಾಯಿತು. ಜಯದೇವಿ ಜಂಗಮಶೆಟ್ಟಿ ಹಾಗೂ ‘ನೃತ್ಯಶಾಸ್ತ್ರ ಮಂಜರಿ’ ಕೃತಿಗೆ ಪ್ರೊ.ಕೆ. ರಾಮಮೂರ್ತಿ ರಾವ್ ಅವರಿಗೆ ಪುಸ್ತಕ ಬಹುಮಾನ ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಗಳು ಹಾಗೂ ಬಹುಮಾನವು ತಲಾ ₹ 25 ಸಾವಿರ ನಗದು ಒಳಗೊಂಡಿವೆ.

ಸುದ್ದಿ 2 ನಿಮಿಷ

ನ.7 ರಿಂದ ದತ್ತಮಾಲಾ ಅಭಿಯಾನ

ಚಿಕ್ಕಮಗಳೂರು: ಶ್ರೀರಾಮ ಸೇನೆ ವತಿಯಿಂದ ನ.7 ರಿಂದ 13ರವರೆಗೆ ದತ್ತಮಾಲಾ ಅಭಿಯಾನ ನಡೆಯಲಿದೆ ಎಂದು ಶ್ರೀರಾಮ ಸೇನೆ ರಾಜ್ಯ ಘಟಕದ ಕಾರ್ಯಾಧ್ಯಕ್ಷ ಗಂಗಾಧರ್ ಕುಲಕರ್ಣಿ ತಿಳಿಸಿದರು.

ನ.7 ರಂದು ದತ್ತಮಾಲಾಧಾರಣೆ, 10 ರಂದು ದತ್ತ ದೀಪೋತ್ಸವ, 12 ರಂದು ಪಡಿ ಸಂಗ್ರಹ ಸಂಗ್ರಹ, 13 ಕ್ಕೆ ಶೋಭಾಯಾತ್ರೆ, ದತ್ತಪೀಠದಲ್ಲಿ ದತ್ತಪಾದುಕೆ ದರ್ಶನ, ಧಾರ್ಮಿಕ ಸಭೆ, ಹೋಮಹವನ ಜರುಗಲಿವೆ. ಅಭಿಯಾನದಲ್ಲಿ ಮಹಾರಾಷ್ಟ್ರದ ಹಿಂದೂ ರಾಷ್ಟ್ರ ಸೇನಾ ಸಮಿತಿಯ ಧನಂಜಯ್ ದೇಸಾಯಿ, ಸಾವರ್ಕರ್ ಮೊಮ್ಮಗ ಸಾತ್ಯಕಿ ಸಾವರ್ಕರ್ ಪಾಲ್ಗೊಳ್ಳುವ ಸಾಧ್ಯತೆ ಇದೆ ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ಹೆಣ್ಣು ಮಕ್ಕಳ ಹಕ್ಕುಗಳ ರಕ್ಷಣೆ ಅಗತ್ಯ’



ಬೆಂಗಳೂರು: ಹೆಣ್ಣು ಮಕ್ಕಳ ಹಕ್ಕುಗಳಿಗೆ ಹೋರಾಟ ಅನಿವಾರ್ಯ. ಪ್ರಸ್ತುತ ಸನ್ನಿವೇಶದಲ್ಲಿ ಅವರ ಸುರಕ್ಷತೆ ಮತ್ತು ರಕ್ಷಣೆಗೆ ಪ್ರಾಮುಖ್ಯತೆ ನೀಡಬೇಕು ಎಂದು ಬೋಸ್ಕೊ ಕಾರ್ಯನಿರ್ವಾಹಕ ನಿರ್ದೇಶಕ ವರ್ಗೀಸ್ ಪಲ್ಲಿಪುರಂ ಹೇಳಿದರು.

ಬೋಸ್ಕೊ ರೈನ್ಬೊ ಹೋಂನಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಅಂತರರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಹೆಣ್ಣುಹಕ್ಕುಗಳ ಕುರಿತು ನಾಗರಿಕ ಸಮಾಜ ಜವಾಬ್ದಾರಿ ನಿಭಾಯಿಸಬೇಕು. ಅವರ ಶಿಕ್ಷಣ ಮತ್ತು ಸಮಗ್ರ ಅಭಿವೃದ್ಧಿಗೆ ಒತ್ತು ನೀಡಬೇಕು. ಸರ್ಕಾರ, ಸ್ವಯಂಸೇವಾ ಸಂಸ್ಥೆಗಳ ಜತೆಗೆ, ಸಮುದಾಯದ ಸಹಭಾಗಿತ್ವವೂ ಇರಬೇಕು. ಎಲ್ಲರ ಸಹಕಾರ, ರಚನಾತ್ಮಕ ಕಾರ್ಯಗಳ ಮೂಲಕ ಹಕ್ಕುಗಳ ಸಂರಕ್ಷಣೆ ಸಾಧ್ಯ ಎಂದರು. ಸರ್ಕಾರಿ ಬಾಲಕಿಯರ ಮಂದಿರದ ಅಧೀಕ್ಷಕಿ ಮುಮ್ತಾಜ್ ಹುಂಟಿಯಾರ್, ಮಕ್ಕಳ ಕಲ್ಯಾಣ ಸಮಿತಿ ಹಿರಿಯ ಸಹಾಯಕ ನಿರ್ದೇಶಕಿ ಆಶಾ, ಅಲಮೀನ್ ಶಿಕ್ಷಣ ಮಹಾ ವಿದ್ಯಾಲಯದ ಪ್ರಾಂಶುಪಾಲರಾದ ಎಚ್. ಆರ್.ಸುಧಾ, ವಿಲ್ಸನ್ ಗಾರ್ಡನ್ ಠಾಣೆ ಇನ್‌ಸ್ಪೆಕ್ಟರ್ ಎ.ರಾಜು, ಸರೋಜಾ, ಜೆನ್ನಿ ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೂ ಮೊದಲು ಹಕ್ಕುಗಳ ಸಂರಕ್ಷಣೆ ಕುರಿತು ಜಾಥಾ ನಡೆಸಲಾಯಿತು.

ಬಾಬಾಬುಡನ್‌ಗಿರಿ : ಪೂಜಾವಿಧಿ ಯಥಾಸ್ಥಿತಿ

ಬೆಂಗಳೂರು: ಚಿಕ್ಕಮಗಳೂರು ಜಿಲ್ಲೆಯ ಶ್ರೀ ಗುರು ದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ದರ್ಗಾದಲ್ಲಿ ಹಿಂದೂ ಮತ್ತು ಮುಸ್ಲಿಂ ಧರ್ಮಗಳ ಸಂಪ್ರದಾಯಗಳಂತೆ ಪೂಜಾ ವಿಧಿ ವಿಧಾನ ನೆರವೇರಿಸಲು ಅವಕಾಶ ಕಲ್ಪಿಸಿ ರಾಜ್ಯ ಸಚಿವ ಸಂಪುಟ ಕೈಗೊಂಡಿರುವ ನಿರ್ಣಯಕ್ಕೆ ಮೌಲ್ವಿ ಸೈಯದ್ ಗೌಸ್ ಮೊಹಿದ್ದೀನ್ ಎತ್ತಿರುವ ಆಕ್ಷೇಪಣೆಗೆ ಪ್ರತಿ ಆಕ್ಷೇಪಣೆ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಮೂರು ವಾರಗಳ ಕಾಲಾವಕಾಶ ನೀಡಿದೆ.

ಈ ಕುರಿತಂತೆ ಮೌಲ್ವಿ ಸೈಯದ್ ಗೌಸ್ ಮೊಹಿದ್ದೀನ್ ಸಲ್ಲಿಸಿರುವ ಮೇಲ್ಮನವಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, ‘ಸಚಿವ ಸಂಪುಟ ನಿರ್ಣಯಕ್ಕೆ ಮೇಲ್ಮನವಿದಾರರು ಆಕ್ಷೇಪಣೆ ಸಲ್ಲಿಸಿದ್ದಾರೆ. ಇದಕ್ಕೆ ಸರ್ಕಾರ ಪ್ರತಿ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡಬೇಕು’ ಎಂದರು.

ಇದನ್ನು ಪರಿಗಣಿಸಿದ ನ್ಯಾಯಪೀಠ ಮೂರು ವಾರಗಳಲ್ಲಿ ಪ್ರತಿ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆ ಮುಂದೂಡಿತು. ‘ಮುಂದಿನ ವಿಚಾರಣೆ ವರೆಗೂ ಪ್ರಕರಣದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಬೇಕು" ಎಂದು ನ್ಯಾಯಪೀಠ ಇದೇ ವೇಳೆ ನಿರ್ದೇಶಿಸಿದೆ.

‘ಹಿಂದೂ ಧಾರ್ಮಿಕ ಮತ್ತು ಧರ್ಮದಾಯ ದತ್ತಿ ಕಾಯ್ದೆ-1997 ಅನ್ನು ಹೈಕೋರ್ಟ್ ರದ್ದುಪಡಿಸಿದೆ. ಹಾಗಾಗಿ, ಸಚಿವ ಸಂಪುಟದ ನಿರ್ಣಯದಂತೆ ದತ್ತಾತ್ರೇಯ ಪೀಠದಲ್ಲಿ ಮುಸ್ಲಿಂ ಮತ್ತು ಹಿಂದೂ ಸಂಪ್ರದಾಯದಂತೆ ಪೂಜಾ ವಿಧಿ ವಿಧಾನ ನಡೆಸಲು ಮುಜಾವರ್ ಹಾಗೂ ಅರ್ಚಕರನ್ನು ನೇಮಿಸಲು ಸಾಧ್ಯವಾಗುವುದಿಲ್ಲ’ ಎಂದು ಮೇಲ್ಮನವಿದಾರರು ಆಕ್ಷೇಪಣೆಯಲ್ಲಿ ವಿವರಿಸಿದ್ದಾರೆ.

ಚಂದಾಪುರ ಕೆರೆ ಪ್ರದೇಶದ ಮ್ಯಾಪಿಂಗ್

ಎನ್‌ಜಿಟಿಗೆ ಕರ್ನಾಟಕ ಸರ್ಕಾರ ಮುಖ್ಯ ಕಾರ್ಯದರ್ಶಿ ಪ್ರಮಾಣಪತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಚಂದಾಪುರ ಕೆರೆಯ ಜಲಾನಯನ ಪ್ರದೇಶದ ಮ್ಯಾಪಿಂಗ್ ನಡೆಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ (ಎನ್‌ಜಿಟಿ) ತಿಳಿಸಿದ್ದಾರೆ.

ಚಂದಾಪುರ ಕೆರೆಯ ಮಾಲಿನ್ಯದ ಬಗ್ಗೆ ಎನ್‌ಜಿಟಿ ವಿಚಾರಣೆ ನಡೆಸುತ್ತಿದ್ದು, ಕೊಳಚೆ ನೀರು ಜಲಕಾಯಕ್ಕೆ ಸೇರದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳ ಬಗ್ಗೆ ಮುಖ್ಯ ಕಾರ್ಯದರ್ಶಿ ಅವರು ಎನ್‌ಜಿಟಿಗೆ ಪ್ರಮಾಣಪತ್ರ ಸಲ್ಲಿಸಿದ್ದಾರೆ.

ಜಲಾನಯನ ಪ್ರದೇಶದ ನಕ್ಷೆ ಹಾಗೂ ನೈಸರ್ಗಿಕ ಚರಂಡಿಗಳ ಹರಿವಿನ ವಿವರಗಳನ್ನು ಕರ್ನಾಟಕ ರಾಜ್ಯ ದೂರಸಂವೇದಿ ಅನ್ವಯಿಕ ಕೇಂದ್ರದಿಂದ ಪಡೆಯಲಾಗಿದೆ. ಭೂಮಾಪನಾ ಇಲಾಖೆಯ ಉಪ ನಿರ್ದೇಶಕರು ಜಲಾನ ಯನ ಪ್ರದೇಶದ ಟೋಟಲ್ ಸ್ಟೇಷನ್ ಸರ್ವೆ ನಡೆಸುತ್ತಿದ್ದಾರೆ. ಎನ್‌ಜಿಟಿ ನಿರ್ದೇ ಶನದ ಪ್ರಕಾರ, ಮ್ಯಾಪಿಂಗ್ ಪ್ರಕ್ರಿಯೆ ಈ ತಿಂಗಳ ಅಂತ್ಯದೊಳಗೆ ಪೂರ್ಣಗೊಳ್ಳಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಚಂದಾಪುರ ಕೆರೆಗೆ ಕೊಳಚೆ ನೀರು ಸೇರದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಗೆ ಸೂಚಿಸಲಾಗಿದೆ.

ಕೆರೆಯಲ್ಲಿ ಮಾಲಿನ್ಯ ಪ್ರಮಾಣ ತಗ್ಗಿಸಲು ಕಡಿಮೆ ವೆಚ್ಚದ ಯೋಜನಾ ಮಾದರಿಯ ವರದಿ ನೀಡುವಂತೆ ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳಲ್ಲಿ ಕೋರಲಾಗಿದೆ ಎಂದು ಅವರು ಹೇಳಿದ್ದಾರೆ.

ಜಲಾನಯನ ಪ್ರದೇಶದಲ್ಲಿರುವ ಕೈಗಾರಿಕೆಗಳ ಪರಿಸರ ಲೆಕ್ಕಪರಿಶೋಧನೆ ನಡೆಸಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸೂಚಿಸಲಾಗಿದೆ. ಬೆಂಗಳೂರಿನ ಆರ್.ವಿ. ಎಂಜಿನಿಯರಿಂಗ್ ಕಾಲೇಜಿಗೆ ಈ ಹೊಣೆ ವಹಿಸಲಾಗಿದೆ ಎಂದು ತಿಳಿಸಿದ್ದಾರೆ.

ಆನೇಕಲ್ ತಾಲ್ಲೂಕಿನ 69 ಕೆರೆಗಳನ್ನು ತುಂಬಿಸಲು ಸಣ್ಣ ನೀರಾವರಿ ಇಲಾಖೆಯು ಏತ ನೀರಾವರಿ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಈ ಯೋಜನೆಗೆ ಈ ವರ್ಷದ ಏಪ್ರಿಲ್‌ನಲ್ಲಿ ಚಾಲನೆ ನೀಡಲಾಗಿದೆ ಎಂದು ಅವರು ಹೇಳಿದ್ದಾರೆ.

ಚಂದಾಪುರ ಕೆರೆಯ ಜಲಾನಯನ ಪ್ರದೇಶದ ಎಲ್ಲ ಕೆರೆಗಳ ಪುನರುಜ್ಜೀವನಕ್ಕೆ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಲಾಗುತ್ತಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಹೆಬ್ಬಗೋಡಿ ನಗರಸಭೆಯಲ್ಲಿ ₹153 ಕೋಟಿ ವೆಚ್ಚದಲ್ಲಿ ಹಾಗೂ ಬೊಮ್ಮಸಂದ್ರ ಪುರಸಭೆಯಲ್ಲಿ ₹109 ಕೋಟಿ ವೆಚ್ಚದಲ್ಲಿ ಭೂಗತ ಒಳಚರಂಡಿ ವ್ಯವಸ್ಥೆ ರೂಪಿಸಲು ಕ್ರಿಯಾಯೋಜನೆ ಸಿದ್ಧಪಡಿಸಲಾಗಿದೆ. ನಾಲ್ಕು ಸ್ಥಳೀಯ ಸಂಸ್ಥೆಗಳಲ್ಲಿ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಜಾಗ ಒದಗಿಸಲಾಗಿದೆ ಎಂದು ಅವರು ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

ಚಂದಾಪುರ ಕೆರೆಯ ಜಲಾನಯನ ಪ್ರದೇಶದಲ್ಲಿರುವ 17 ಕೈಗಾರಿಕೆಗಳನ್ನು ಮುಚ್ಚಲು ಮಾಲಿನ್ಯ ನಿಯಂತ್ರಣ ಮಂಡಳಿ ನಿರ್ದೇಶನ ನೀಡಿದೆ ಎಂದೂ ಅವರು ಮಾಹಿತಿ ನೀಡಿದ್ದಾರೆ.

ಆರ್‌ಟಿಐ: ₹ 1 ಕೋಟಿ ದಂಡ ವಿಧಿಸಿದ ರಾಜ್ಯ ಮಾಹಿತಿ ಆಯೋಗ

ನವದೆಹಲಿ: ಮಾಹಿತಿ ಹಕ್ಕು ಕಾಯ್ದೆಯಡಿ (ಆರ್‌ಟಿಐ) ಸಲ್ಲಿಕೆಯಾದ ಅರ್ಜಿಗಳಿಗೆ ಪ್ರತಿಯಾಗಿ ಮಾಹಿತಿ ನೀಡದ ಪ್ರಕರಣಗಳಿಗೆ ಸಂಬಂಧಿಸಿ, 2021ರ ಜುಲೈ 1ರಿಂದ ಕಳೆದ ಜೂನ್ ವರೆಗಿನ ಅವಧಿ ಯಲ್ಲಿ ಕರ್ನಾಟಕದಲ್ಲಿ ಒಟ್ಟು ₹ 1.04 ಕೋಟಿ ದಂಡ ವಿಧಿಸಲಾಗಿದೆ.

1,265 ಪ್ರಕರಣಗಳಿಗೆ ಸಂಬಂಧಿಸಿ ಕರ್ನಾಟಕ ರಾಜ್ಯ ಮಾಹಿತಿ ಆಯೋಗ ವಿಧಿಸಿರುವ ಈ ದಂಡದ ಮೊತ್ತವು, ದೇಶದಲ್ಲಿ ವಿಧಿಸಲಾದ ಒಟ್ಟು ದಂಡದ ಮೂರನೇ ಒಂದರಷ್ಟು ಎಂದು ಸತರ್ಕ ನಾಗರಿಕ ಸಂಘಟನೆ (ಎಸ್‌ಎನ್‌ಎಸ್) ಬಿಡುಗಡೆ ಮಾಡಿರುವ ವರದಿಯಲ್ಲಿ ಹೇಳಲಾಗಿದೆ.

ಮಾಹಿತಿ ನೀಡದೇ, ಆರ್‌ಟಿಐ ಕಾಯ್ದೆ ಉಲ್ಲಂಘನೆ ಮಾಡಿದ್ದಕ್ಕಾಗಿ ದೇಶದಾದ್ಯಂತ 5,805 ಪ್ರಕರಣಗಳಿಗೆ ಸಂಬಂಧಿಸಿ ಒಟ್ಟು ₹ 3.12 ಕೋಟಿ ದಂಡ ವಿಧಿಸಲಾಗಿದೆ. ಒಟ್ಟು ಪ್ರಕರಣಗಳ ಪೈಕಿ ಶೇ 5ರಷ್ಟು ಪ್ರಕರಣಗಳಲ್ಲಿ ಮಾತ್ರ ದಂಡ ವಿಧಿಸಲಾಗಿದೆ ಎಂದೂ ವರದಿಯಲ್ಲಿ ವಿವರಿಸಲಾಗಿದೆ.

ದಂಡ ಸಂಗ್ರಹದಲ್ಲಿ ಎರಡನೇ ಸ್ಥಾನದಲ್ಲಿರುವ ಮಧ್ಯಪ್ರದೇಶದಲ್ಲಿ, ತಪ್ಪಿತಸ್ಥ ಅಧಿಕಾರಿಗಳಿಗೆ ಒಟ್ಟು ₹ 47.50 ಲಕ್ಷ ದಂಡ ವಿಧಿಸಲಾಗಿದೆ.

ಓಲಾ, ಉಬರ್ ಆಟೊ ಸೇವೆ ಸ್ಥಗಿತ

ಒಂದನೇ ಪುಟದಿಂದ

’ಆ್ಯಪ್‌ನಲ್ಲಿ ಆಟೊ ಸೇವೆ ನೀಡುವ ಸಂಬಂಧ ಅನುಮತಿ ಕೋರಿ ಅರ್ಜಿ ಸಲ್ಲಿಸಲಾಗುವುದು ಎಂದು ಕಂಪನಿ ಪ್ರತಿನಿಧಿಗಳು ತಿಳಿಸಿದ್ದಾರೆ. ಅರ್ಜಿ ಸಲ್ಲಿಸಿದರೆ ಅದನ್ನು ಸರ್ಕಾರಕ್ಕೆ ರವಾನಿಸಲಾಗುವುದು. ಬಳಿಕ ಈ ವಿಷಯದಲ್ಲಿ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ’ ಎಂದು ಸ್ಪಷ್ಟಪಡಿಸಿದರು.

‘ಒಂದೂವರೆ ವರ್ಷದಿಂದ ಈ ಕಂಪನಿಗಳ ಪರವಾನಗಿ ನವೀಕರಣ ಆಗಿಲ್ಲ. ಈ ವಿಷಯದಲ್ಲಿ ಹೈಕೋರ್ಟ್ ತಡೆಯಾಜ್ಞೆ ನೀಡಿರುವುದರಿಂದ ಇಡೀ ಆ್ಯಪ್ ರದ್ದುಗೊಳಿಸಲು ಸಾಧ್ಯವಿಲ್ಲ. ಇಂದಿನ ಸಭೆಯ ನಡಾವಳಿಯನ್ನೂ ಹೈಕೋರ್ಟ್‌ಗೆ ಸಲ್ಲಿಸಲಾಗುವುದು. ಬೈಕ್ ಸೇವೆ ವಿಷಯವ ನ್ಯಾಯಾಲಯದ ಮುಂದಿದೆ’ ಎಂದರು.

ನಿರ್ದಾಕ್ಷಿಣ್ಯ ಕ್ರಮಕ್ಕೆ ಸಾರಿಗೆ ಇಲಾಖೆ ಹಿಂದೇಟು: ಹಲವು ಸುತ್ತಿನ ಮಾತುಕತೆ, ಮೌನಕ್ಕೆ ಶರಣಾದ ಅಗ್ರಿಗೇಟರ್ ಕಂಪನಿಗಳ ಪ್ರತಿನಿಧಿಗಳು, ನಿರ್ದಾಕ್ಷಿಣ್ಯ ಕ್ರಮಕ್ಕೆ ಅಧಿಕಾರಿಗಳ ಹಿಂದೇಟು...

ಸಾರಿಗೆ ಇಲಾಖೆಯಲ್ಲಿ ಮಂಗಳವಾದ ನಡೆದ ಈ ನಾಟಕೀಯ ಬೆಳವಣಿಗಳು ಅಧಿಕಾರಿಗಳ ಮೇಲಿರುವ ರಾಜಕೀಯ ಒತ್ತಡದ ಅನುಮಾನ ಹುಟ್ಟಿಸಿದವು.

ಸಭೆಯಲ್ಲಿಯೂ ಕಂಪನಿಗಳ ಪ್ರತಿನಿಧಿಗಳಿಗೆ ಖಡಕ್ ಎಚ್ಚರಿಕೆ ನೀಡದೆ ಆಟೊ ಸೇವೆ ಒದಗಿಸುವ ಸಂಬಂಧ ಅರ್ಜಿ ನೀಡಿದರೆ ಸರ್ಕಾರಕ್ಕೆ ರವಾನೆ ಮಾಡಲಾಗುವುದು ಎಂದು ಆಯುಕ್ತರು ಹೇಳಿದರೆ, ಆಟೊರಿಕ್ಷಾಗಳಿಗೆ ಜಿಲ್ಲಾಡಳಿತ ನಿಗದಿ ಮಾಡಿರುವ ದರದ ಜತೆಗೆ ಜಿಎಸ್‌ಟಿ ಮೊತ್ತ ಸೇರಿಸಿ ಸೇವೆ ಮುಂದುವರಿಸಲು ಅವಕಾಶ ನೀಡುವ ಬಗ್ಗೆ ಚರ್ಚೆಗಳು ನಡೆದವು.

‘ಜಿಎಸ್‌ಟಿ ಜತೆಗೆ ಕನ್ವಿನಿಯನ್ಸ್ ಶುಲ್ಕ ವಿಧಿಸುವ ಬಗ್ಗೆಯೂ ಕಂಪನಿಗಳ ಪ್ರತಿನಿಧಿಗಳು ಪ್ರಸ್ತಾಪಿಸಿದ್ದಾರೆ. ಈ ವಿಷಯದಲ್ಲೂ ಸರ್ಕಾರವೇ ತೀರ್ಮಾನ ಕೈಗೊಳ್ಳಲಿದೆ’ ಎಂದು ಹೇಳಿದರು. ಆ ಮೂಲಕ ಆಟೊ ಸೇವೆ ಮತ್ತೆ ಆರಂಭವಾಗಲಿದೆ ಎಂಬ ಸುಳಿವನ್ನೂ ಅವರು ನೀಡಿದರು.

ಬಳಿಕ ನಡೆದ ಸುದ್ದಿಗೋಷ್ಠಿಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಸಾರಿಗೆ ಆಯುಕ್ತರು, ಅನಧಿಕೃತವಾಗಿ ಆಟೊ ಸೇವೆ ಒದಗಿಸಲು ಸಾರಿಗೆ ಇಲಾಖೆಯೇ ಅನುಮತಿ ನೀಡಲಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಲಾಗದೆ ಇಕ್ಕಟ್ಟಿಗೆ ಸಿಲುಕಿದರು.

ರಾಜಕೀಯ ಒತ್ತಡ ಇರುವುದು ಮೇಲ್ನೋಟಕ್ಕೆ ಕಂಡು ಬಂದರೂ ಅವರು ಬಹಿರಂಗವಾಗಿ ಒಪ್ಪಿಕೊಳ್ಳಲಿಲ್ಲ. ಆದರೆ, ಆ್ಯಪ್‌ಗಳಲ್ಲಿ ಆಟೊ ಸೇವೆ ಸ್ಥಗಿತಗೊಳಿಸುವಂತೆ ಕಂಪನಿ ಪ್ರತಿನಿಧಿಗಳಿಗೆ ಖಡಕ್ ಸೂಚನೆ ನೀಡಲು ತಡಕಾಡಿದರು. ಪದೇ ಪದೇ ಸಾರಿಗೆ ಸಚಿವರಿಗೆ ಕರೆ ಮಾಡಲು ಪ್ರಯತ್ನಿಸುತ್ತಿದ್ದರು. ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗಳಿಗೆ ಉತ್ತರಿಸಲಾಗದೆ ಅಧಿಕಾರಿಗಳ ಜತೆ ಮತ್ತೊಂದು ಸುತ್ತಿನ ಸಭೆ ನಡೆಸಿದರು. ಕೊನೆಗೂ ‘ನಾಳೆಯಿಂದ ಆಟೊ ಸೇವೆ ಸ್ಥಗಿತಗೊಳಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿಕೆ ನೀಡಿದರು.

ಬಳಿಕ 3 ಕಂಪನಿಗಳ ಪ್ರತಿನಿಧಿಗಳ ಜತೆ ಆಯುಕ್ತರು ಮತ್ತೊಂದು ಸುತ್ತಿನ ಸಭೆ ನಡೆಸಿದರು. ಆಟೊ ಸೇವೆ ಸ್ಥಗಿತಗೊಳಿಸಲು ಒಪ್ಪಿಕೊಂಡಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು. ಆದರೆ, ಈ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಲು ಕಂಪನಿಗಳ ಪ್ರತಿನಿಧಿಗಳು ನಿರಾಕರಿಸಿದರು. ಮಾಧ್ಯಮ ಪ್ರತಿನಿಧಿಗಳು ಹಿಂದೆ ಬಿದ್ದರೂ ತುಟಿ ಬಿಚ್ಚಲಿಲ್ಲ.

‘₹5 ಸಾವಿರ ದಂಡ: ಚಾಲಕರಿಗಲ್ಲ’

ಅನಧಿಕೃತವಾಗಿ ಆ್ಯಪ್‌ಗಳಲ್ಲಿ ಆಟೊ ಸೇವೆ ಬಳಕೆ ಮಾಡಲು ಅವಕಾಶ ನೀಡಿದರೆ ಪ್ರತಿ ಆಟೊರಿಕ್ಷಾಕ್ಕೆ ತಲಾ ₹5 ಸಾವಿರದಂತೆ ದಂಡ ವಿಧಿಸಲಾಗುವುದು. ಆದರೆ, ಚಾಲಕರಿಗೆ ದಂಡ ವಿಧಿಸುವುದಿಲ್ಲ, ಆ್ಯಪ್ ಮುನ್ನಡೆಸುವ ಅಗ್ರಿಗೇಟರ್ ಕಂಪನಿಗಳಿಗೆ ದಂಡ ಬೀಳಲಿದೆ ಎಂದು ಟಿಎಚ್‌ಎಂ ಕುಮಾರ್ ಸ್ಪಷ್ಟಪಡಿಸಿದರು.

ಆ್ಯಪ್ ಚಾಲ್ತಿಯಲ್ಲಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದರೆ ಅದನ್ನು ಆಧರಿಸಿ ದಂಡ ವಿಧಿಸಲಾಗುವುದು. ದಂಡದ ಮೊತ್ತವನ್ನು ಆ ಕಂಪನಿಗಳಿಂದ ವಸೂಲಿ ಮಾಡಲಾಗುವುದು ಎಂದರು.

‘ಒಂದು ಬಾರಿ ದಂಡ ಹಾಕಿ ಸುಮ್ಮನವಾಗುವುದಿಲ್ಲ. ಪ್ರತಿ ದಿನವೂ ದೂರುಗಳನ್ನು ಪರಿಶೀಲಿಸಿ ₹5 ಸಾವಿರದಂತೆ ದಂಡ ಹಾಕಲಾಗುವುದು. ಅದೆಲ್ಲದಕ್ಕೂ ಮುಂಚೆ ಆಟೊ ಸೇವೆಯನ್ನು ಆ್ಯಪ್‌ನಿಂದ ತೆಗೆಸಲು ಕ್ರಮ ಕೈಗೊಳಲಾಗುವುದು’ ಎಂದು ಹೇಳಿದರು.

ಸಾರ್ವಜನಿಕರು ದೂರು ನೀಡಲು ಸಹಾಯವಾಣಿ ತೆರೆಯಲಾಗಿದೆ. 9449863429 / 9449863426 ಸಂಖ್ಯೆಗೆ ದಾಖಲೆಗಳ ಸಹಿತ ವಾಟ್ಸ್ ಆ್ಯಪ್ ಮಾಡಬೇಕು ಎಂದು ಅವರು ತಿಳಿಸಿದರು.

‘ಆಟೊ ಸೇವೆ ಗೊತ್ತಿರಲೇ ಇಲ್ಲ’

‘ಅಗ್ರಿಗೇಟರ್ ಕಂಪನಿಗಳು ಆಟೊ ಸೇವೆಯನ್ನೂ ನೀಡುತ್ತಿರುವುದು ಗೊತ್ತಿರಲೇ ಇಲ್ಲ’ ಎಂದು ಸಾರಿಗೆ ಆಯುಕ್ತ ಕುಮಾರ್ ಹೇಳಿದರು.

‘ಈವರೆಗೆ ಅನಧಿಕೃತವಾಗಿ ಆಟೊ ಸೇವೆ ನೀಡುತ್ತಿರುವ ಕಂಪನಿಗಳ ವಿರುದ್ಧ ಕ್ರಮ ಏನು’ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಈ ಆ್ಯಪ್‌ಗಳಲ್ಲಿ ಆಟೊ ಸೇವೆಯೂ ಇರುವುದು ಗೊತ್ತಿರಲಿಲ್ಲ. ಮೂರು ದಿನಗಳಿಂದ ಮಾಧ್ಯಮಗಳಲ್ಲಿ ಪ್ರಕಟವಾದ ಬಳಿಕ ತಿಳಿಯಿ ತು’ ಎಂದರು.

‘ಟ್ಯಾಕ್ಸಿ ಸೇವೆಗೆ ನಿಗದಿಗಿಂತ ಎರಡು–ಮೂರು ಪಟ್ಟು ದರ ಪಡೆಯುತ್ತಿರುವ ಬಗ್ಗೆ ಈಗಲೂ ಮಾಹಿತಿ ಇಲ್ಲ. ಮಾಧ್ಯಮಗಳಲ್ಲಿ ಪ್ರಕಟವಾಗಿರುವ ವಿಷಯ ಗೊತ್ತಿಲ್ಲ. ಈಗ ನೀವು ಹೇಳಿದ್ದೀರಿ, ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು’ ಎಂದು ಉತ್ತರಿಸಿದರು.



ದೀಪಾವಳಿ ಸಿದ್ಧತೆ

ದೀಪಾವಳಿ ಹಬ್ಬದ ಪ್ರಯುಕ್ತ ನಗರದ ಗಾಂಧಿ ಬಜಾರ್ ರಸ್ತೆ ಬದಿಯಲ್ಲಿ ಮಹಿಳೆಯರು ಮಂಗಳವಾರ ದೀಪಗಳನ್ನು ಖರೀದಿಸಿದರು – ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಭೋಪಾಲ್ ದುರಂತ: ಹೆಚ್ಚುವರಿ ಪರಿಹಾರಕ್ಕೆ ಆಗ್ರಹ

ನವದೆಹಲಿ (ಪಿಟಿಐ): ಭೋಪಾಲ್ ಅನಿಲ ದುರಂತದ ಸಂತ್ರಸ್ತರಿಗೆ ಪರಿಹಾರ ನೀಡಲು ಅಮೆರಿಕ ಮೂಲದ ಯೂನಿಯನ್ ಕಾರ್ಬೈಡ್ ಕಾರ್ಪೊರೇಷನ್ ಸಂಸ್ಥೆಯ ಉತ್ತರಾಧಿಕಾರಿ ಸಂಸ್ಥೆಗಳಿಂದ ₹7,844 ಕೋಟಿ ಹೆಚ್ಚುವರಿ ಮೊತ್ತವನ್ನು ಆಗ್ರಹಿಸುವ ಅರ್ಜಿಯನ್ನು ಕೇಂದ್ರ ಸರ್ಕಾರ ಮುಂದುವರೆಸಲಿದೆ ಎಂದು ಸುಪ್ರೀಂ ಕೋರ್ಟ್‌ಗೆ ತಿಳಿಸಲಾಯಿತು.

₹38.86 ಸಾವಿರ ಕೋಟಿ ಪರಿಹಾರ ನೀಡಬೇಕೆಂದು ಈ ಮೊದಲು ಒಪ್ಪಂದವಾಗಿತ್ತು. ಅದರ ಮೇಲೆ ₹7,844 ಕೋಟಿ ಹೆಚ್ಚುವರಿಯಾಗಿ ನೀಡುವಂತೆ ಕೇಂದ್ರ ಸರ್ಕಾರ ಮನವಿ ಮಾಡಿದೆ.

ಬೌದ್ಧ ಧರ್ಮ ಸ್ವೀಕಾರ: ಹಿಂದೂ ಧರ್ಮ ತ್ಯಜಿಸುವ ಸಂಕೇತದ ರೂಪದಲ್ಲಿ ಫೋಟೊ ವಿಸರ್ಜನೆ

ಹಿಂದೂ ದೇವರ ಚಿತ್ರಗಳ ವಿಸರ್ಜನೆ

ಸುರಪುರ (ಯಾದಗಿರಿ ಜಿಲ್ಲೆ): ನಗರದ ಗೋಲ್ಡರ್ ಕೇವ್ ಬುದ್ಧ ವಿಹಾರದಲ್ಲಿ ಅ.14ರಂದು ನಡೆಯುವ ಬೌದ್ಧ ಧಮ್ಮ ದೀಕ್ಷಾ ಕಾರ್ಯಕ್ರಮದಲ್ಲಿ ಬುದ್ಧ ವಿಹಾರ ಟ್ರಸ್ಟ್‌ನ ಪದಾಧಿಕಾರಿಗಳು ಸೇರಿ 500ಕ್ಕೂ ಹೆಚ್ಚು ಮಂದಿ ಬೌದ್ಧ ಧರ್ಮ ಸ್ವೀಕರಿಸುವರು. ಹಿಂದೂ ಧರ್ಮ ತ್ಯಜಿಸುವ ಸಂಕೇತದ ರೂಪದಲ್ಲಿ ಸೋಮವಾರ ಟ್ರಸ್ಟ್‌ನ ಪದಾಧಿಕಾರಿಗಳು ಹಿಂದೂ ದೇವರ ಚಿತ್ರಗಳನ್ನು ಕೃಷ್ಣಾ ನದಿಯಲ್ಲಿ ವಿಸರ್ಜಿಸಿದರು.

‘ಮನೆಯಲ್ಲಿ ಪೂಜಿಸುತ್ತಿದ್ದ ವೆಂಕಟರಮಣ, ಸಾಯಿಬಾಬಾ ಮೂರ್ತಿ, ಲಕ್ಷ್ಮಿ, ಸರಸ್ವತಿ, ಗಣಪತಿ ಮುಂತಾದ ದೇವರ ಚಿತ್ರಗಳನ್ನು ತಿಂಥಣಿ ಸೇತುವೆಗೆ ಒಯ್ದು, ಅಲ್ಲಿಂದ ನದಿಯಲ್ಲಿ ವಿಸರ್ಜಿಸಿರುವೆ’ ಎಂದು ಟ್ರಸ್ಟ್‌ನ ಅಧ್ಯಕ್ಷ ವೆಂಕಟೇಶ ಹೊಸಮನಿ ತಿಳಿಸಿದರು.

‘ಬೌದ್ಧ ಧರ್ಮ ಸ್ವೀಕಾರಕ್ಕೆ ನನ್ನ ಪತ್ನಿ ಶಿವಮೊಗ್ಗೆಮ್ಮ ಮತ್ತು ಮೂವರ ಮಕ್ಕಳ ಸಂಪೂರ್ಣ ಒಪ್ಪಿಗೆ ಇದೆ’ ಎಂದರು.

‘ಮಹಾರಾಷ್ಟ್ರದ ನಾಗಪುರದಲ್ಲಿ 1956ರ ಅ. 14ರಂದು ಡಾ.ಅಂಬೇಡ್ಕರ್ ಅವರು ನಾಗಪುರದಲ್ಲಿ 5 ಲಕ್ಷ ಅನುಯಾಯಿಗಳ ಜೊತೆ ಬೌದ್ಧ ಧರ್ಮ ಸ್ವೀಕರಿಸಿದ್ದರು. ಈ ಪುಣ್ಯ ದಿನದಂದೇ ನಾವೆಲ್ಲರೂ ಬೌದ್ಧ ಧರ್ಮ ಸ್ವೀಕರಿಸುತ್ತೇವೆ ಎಂದರು.

ಟ್ರಸ್ಟ್ ಉಪಾಧ್ಯಕ್ಷ ನಾಗಣ್ಣ ಕಲ್ಲದೇವನಹಳ್ಳಿ, ಪ್ರಮುಖರಾದ ಮಾಳಪ್ಪ ಕಿರದಳ್ಳಿ, ಭೀಮಣ್ಣ ಕಟ್ಟಿಮನಿ ಇದ್ದರು.



ಯಾದಗಿರಿ ಜಿಲ್ಲೆಯ ಸುರಪುರ ಸಮೀಪದ ತಿಂಥಣಿ ಸೇತುವೆ ಬಳಿ ವೆಂಕಟೇಶ ಹೊಸಮನಿ ಅವರು ಮತ್ತು ಇತರರು ಹಿಂದೂ ದೇವರ ಚಿತ್ರಗಳನ್ನು ವಿಸರ್ಜಿಸಿದರು

ಸಂಕ್ಷಿಪ್ತ ಸುದ್ದಿ

ಜನವರಿಯಲ್ಲಿ ಬೆಂಗಳೂರಿನಲ್ಲಿ ಪಥಸಂಚಲನ

ನವದೆಹಲಿ: ವಾರ್ಷಿಕ ‘ಆರ್ಮಿ ಡೇ’ ಅಂಗವಾಗಿ ಬರುವ ಜ.15ರಂದು ಬೆಂಗಳೂರಿನಲ್ಲಿ ಪಥಸಂಚಲನ ಕಾರ್ಯ ಕ್ರಮ ನಡೆಯಲಿದೆ ಎಂದು ಸೇನೆಯ ವಕ್ತಾರ ತಿಳಿಸಿದ್ದಾರೆ.

ರಾಷ್ಟ್ರ ರಾಜಧಾನಿಯಿಂದ ಹೊರಗೆ ಈ ಕಾರ್ಯಕ್ರಮ ಆಯೋಜಿಸಬೇಕು ಎಂಬ ಕೇಂದ್ರ ಸರ್ಕಾರದ ನಿರ್ಧಾರದಂತೆ, ಈ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಲೆಫ್ಟಿನೆಂಟ್ ಜನರಲ್ ಕೆ.ಎಂ. ಕಾರಿಯಪ್ಪ ಅವರನ್ನು ಭಾರತೀಯ ಸೇನೆಯ ಮೊದಲ ಕಮಾಂಡರ್–ಇನ್–ಚೀಫ್ ಆಗಿ ನೇಮಕ ಮಾಡಿದ್ದರ ಗೌರವಾರ್ಥ ಪ್ರತಿ ವರ್ಷ ದೆಹಲಿಯ ದಂಡುಪ್ರದೇಶದಲ್ಲಿ ಆರ್ಮಿ ಡೇ ಕಾರ್ಯಕ್ರಮವನ್ನು ನಡೆಸಲಾಗುತ್ತದೆ.

ಲೋಕಾಯುಕ್ತ ವಿರುದ್ಧ ಪಿಐಎಲ್

ಬೆಂಗಳೂರು: ‘ಪ್ರಥಮ ವರ್ತಮಾನ ವರದಿ’ (ಎಫ್‌ಐಆರ್) ದಾಖಲಾದ 24 ಗಂಟೆಗಳಲ್ಲಿ ಅದನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಲೋಕಾಯುಕ್ತಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಲಾಗಿದೆ.

ವಕೀಲ ಎಸ್. ಉಮಾಪತಿ ಸಲ್ಲಿಸಿರುವ ಈ ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದ್ದು, ಅರ್ಜಿಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮತ್ತು ಲೋಕಾಯುಕ್ತ ಎಡಿಜಿಪಿ ಅವರನ್ನು ಪ್ರತಿವಾದಿಗಳನ್ನಾಗಿ ಕಾಣಿಸಲಾಗಿದೆ.

ಮುಂದಿನ ಮೇ 6ರಂದು ಚಾರ್ಲ್ಸ್ ಪಟ್ಟಾಭಿಷೇಕ

ಲಂಡನ್ (ಪಿಟಿಐ): ಬ್ರಿಟನ್ ರಾಜ 3ನೇ ಚಾರ್ಲ್ಸ್ ಅವರ ಪಟ್ಟಾಭಿಷೇಕ ಸಮಾರಂಭ ವೆಸ್ಟ್‌ಮಿನ್‌ಸ್ಟರ್ ಅಬೆಯಲ್ಲಿ ಮುಂದಿನ ವರ್ಷ ಮೇ 6ರಂದು ನಡೆಯಲಿದೆ ಎಂದು ಬಕಿಂಗ್‌ಹ್ಯಾಮ್ ಅರಮನೆ ಮಂಗಳವಾರ ಘೋಷಿಸಿದೆ.

ಕಳೆದ ತಿಂಗಳು ರಾಣಿ 2ನೇ ಎಲಿಜಬೆತ್ ಅವರು ನಿಧನರಾದ ನಂತರ, 73 ವರ್ಷದ ಚಾರ್ಲ್ಸ್ ಅವರು ರಾಜ ಆಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಮುಂದಿನ ವರ್ಷ ನಡೆಯುವ ಸಮಾರಂಭದಲ್ಲಿ ಅವರು ಅಧಿಕೃತವಾಗಿ ಅಧಿಕಾರದ ಗದ್ದುಗೆ ಏರಲಿದ್ದಾರೆ. ಚಾರ್ಲ್ಸ್ ಅವರ ಪತ್ನಿ ಕೆಮಿಲಾ ಅವರು ರಾಣಿ ಪಟ್ಟಕ್ಕೆ ಏರಲಿದ್ದಾರೆ ಎಂದೂ ಅರಮನೆ ಮೂಲಗಳು ಹೇಳಿವೆ.

ಕಕ್ಷೆ ಬದಲಿಸಿದ ‘ಡಾರ್ಟ್’ ಗಗನನೌಕೆ

ಕೇಪ್ ಕೆನವೆರಲ್ (ಎಪಿ): ಕ್ಷುದ್ರಗ್ರಹಗಳೊಂದಿಗೆ ಡಿಕ್ಕಿ ಹೊಡೆಯುವ ಪ್ರಯೋಗಕ್ಕಾಗಿ ನಾಸಾ ಉಡಾವಣೆ ಮಾಡಿದ್ದ ಗಗನನೌಕೆ, ಯಶಸ್ವಿಯಾಗಿ ಕ್ಷುದ್ರಗ್ರಹದ ಕಕ್ಷೆಯನ್ನು ಬದಲಿಸಿದೆ ಎಂದು ಅಮೆರಿಕ ಬಾಹ್ಯಾಕಾಶ ಸಂಸ್ಥೆ ನಾಸಾ ಮಂಗಳವಾರ ಹೇಳಿದೆ.

ಭವಿಷ್ಯದಲ್ಲಿ ಭೂಮಿಯತ್ತ ಬರುವ ಆಕಾಶಕಾಯಗಳ ಪಥವನ್ನು ಬದಲಿಸಲು ಸಾಧ್ಯವೇ ಎಂಬುದನ್ನು ಪರೀಕ್ಷಿಸಲು ನಾಸಾ ಈ ಗಗನನೌಕೆಯನ್ನು ಉಡಾವಣೆ ಮಾಡಿದೆ. ಎರಡು ವಾರಗಳ ಹಿಂದೆ, ಕ್ಷುದ್ರಗ್ರಹವೊಂದಕ್ಕೆ ‘ಡಾರ್ಟ್’ ಗಗನನೌಕೆ ಡಿಕ್ಕಿ ಹೊಡೆದಿತ್ತು. ಇದರ ಪರಿಣಾಮ, ವ್ಯೋಮದಲ್ಲಿ ಕ್ಷುದ್ರಗ್ರಹದ ದೂಳು ಹಾಗೂ ಕಲ್ಲುಗಳ ಚೂರುಗಳು ಸಾವಿರಾರು ಕಿ.ಮೀ. ಉದ್ದಕ್ಕೆ ಹರಡಿದ್ದವು.

ಕೆ.ಆರ್.ಪೇಟೆ ಕುಂಭಮೇಳಕ್ಕೆ 6 ಲಕ್ಷ ಮಂದಿ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕಿನ ಅಂಬಿಗರಹಳ್ಳಿ-ಸಂಗಾಪುರ- ಪುರ ಗ್ರಾಮಗಳ ಬಳಿ ಕಾವೇರಿ, ಹೇಮಾವತಿ ಮತ್ತು ಲಕ್ಷ್ಮಣ-ತೀರ್ಥ ನದಿಗಳ ಸಂಗಮ ಸ್ಥಾನದಲ್ಲಿ ಇದೇ 13ರಿಂದ 16ರವರೆಗೆ ನಡೆಯುವ ಕುಂಭಮೇಳದಲ್ಲಿ ಆರು ಲಕ್ಷ ಜನರು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ಅಬಕಾರಿ ಸಚಿವ ಕೆ.ಗೋಪಾಲಯ್ಯ ತಿಳಿಸಿದರು.

ಕುಂಭಮೇಳದ ಸಿದ್ಧತೆ ಕುರಿತು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಅವರು ಸ್ಥಳೀಯ ಶಾಸಕರೂ ಆದ ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ ಅವರೊಂದಿಗೆ ಮಂಗಳವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.


ಗೋಪಾಲಯ್ಯ

ಮಲೆ ಮಹದೇಶ್ವರ ಬೆಟ್ಟದಿಂದ ಹೊರಟಿರುವ ಮೂರು ಜ್ಯೋತಿ ರಥಗಳು ಗುರುವಾರ ಸಂಗಮ ಸ್ಥಳ ತಲುಪಲಿವೆ. ಆ ದಿನ ಜಿಲ್ಲಾ ಉತ್ಸವದ ಉದ್ಘಾಟನೆಯೊಂದಿಗೆ ಕುಂಭಮೇಳ ಆರಂಭವಾಗಲಿದೆ. ನೂತನವಾಗಿ ನಿರ್ಮಿಸಿರುವ ಮಾದೇಶ್ವರ ದೇವಸ್ಥಾನ-ವನ್ನೂ ಅದೇ ದಿನ ಉದ್ಘಾಟಿಸಲಾಗುವುದು. ಧರ್ಮಸ್ಥಳದ ಧರ್ಮಾಧಿಕಾರಿ, ರಾಜ್ಯಸಭಾ ಸದಸ್ಯ ಡಿ.ವೀರೇಂದ್ರ ಹೆಗ್ಗಡೆ ಅವರು ಶುಕ್ರವಾರ ಕುಂಭಮೇಳ ಉದ್ಘಾಟಿಸುವರು. ಶನಿವಾರ ಧಾರ್ಮಿಕ ಸಭೆ ನಡೆಯಲಿದೆ. ಭಾನುವಾರ ಸಮಾರೋಪ ಸಮಾರಂಭದಲ್ಲಿ ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ಆದಿಚುಂಚನಗಿರಿ ಮಠದ ನಿರ್ಮಲಾ-ನಂದನಾಥ ಸ್ವಾಮೀಜಿ ನೇತೃತ್ವದಲ್ಲಿ ಕುಂಭಮೇಳ ಆಯೋಜಿಸಲಾಗಿದೆ. ರಾಜ್ಯ ಸರ್ಕಾರ ₹ 2 ಕೋಟಿ ಒದಗಿಸಿದ್ದು, ಉಳಿದ ವೆಚ್ಚವನ್ನು ದಾನಿಗಳ ನೆರವಿನಿಂದಲೇ ಭರಿಸಲಾಗುವುದು ಎಂದು ತಿಳಿಸಿದರು.

ಸ್ವಾಮೀಜಿಗಳು, ಸಾಧು, ಸಂತರಿಗೆ ಪ್ರತ್ಯೇಕ ಸ್ನಾನಘಟ್ಟ ನಿರ್ಮಿಸಲಾಗಿದೆ. 200ಕ್ಕೂ ಹೆಚ್ಚು ಬಯೊ ಶೌಚಾಲಯ ಒದಗಿಸಲಾಗಿದೆ. 200 ಮಂದಿ ಸಾಧುಗಳ ವಾಸ್ತವ್ಯಕ್ಕೆ ಟೆಂಟ್ ವ್ಯವಸ್ಥೆ ಆಗಿದೆ. ಎರಡು ಸಾವಿರಕ್ಕೂ ಹೆಚ್ಚು ಪೊಲೀಸರನ್ನು ಭದ್ರತೆಗೆ ನಿಯೋಜಿಸಿದ್ದು, ನುರಿತ ಈಜುಗಾರರನ್ನೂ ನಿಯೋಜಿಸಲಾಗುವುದು ಎಂದು ಅವರು ಹೇಳಿದರು.

ಹಿಂದುಳಿದ ವರ್ಗಗಳ ಮೀಸಲಾತಿ ಹೆಚ್ಚಿಸಲು ಒತ್ತಾಯ

ಬೆಂಗಳೂರು: ‘ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಪ್ರಮಾಣ ಹೆಚ್ಚಿಸಿರುವುದು ಸ್ವಾಗತಾರ್ಹ. ಅದೇ ರೀತಿ ಹಿಂದುಳಿದ ವರ್ಗಗಳ ಮೀಸಲಾತಿ ಪ್ರಮಾಣವನ್ನೂ ಹೆಚ್ಚಿಸಬೇಕು’ ಎಂದು ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ಆಗ್ರಹಿಸಿದೆ.

ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇ 32ರಷ್ಟು ಮೀಸಲಾತಿ ದೊರಕುತ್ತಿದೆ. ಒಟ್ಟು ಜನಸಂಖ್ಯೆಯಲ್ಲಿ ಈ ಎರಡೂ ವರ್ಗಗಳ ಜನಸಂಖ್ಯೆ ಶೇ 35ಕ್ಕಿಂತ ಹೆಚ್ಚಿದೆ ಎಂದು ಒಕ್ಕೂಟದ ಅಧ್ಯಕ್ಷ ಕೆ.ಎಂ. ರಾಮಚಂದ್ರಪ್ಪ, ಪ್ರಧಾನ ಕಾರ್ಯದರ್ಶಿ ಎಣ್ಣೆಗೆರೆ ಆರ್.ವೆಂಕಟರಾಮಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂತರಾಜು ಅಧ್ಯಕ್ಷತೆಯ ಹಿಂದುಳಿದ ವರ್ಗಗಳ ಆಯೋಗ ನಡೆಸಿದ ಸಮೀಕ್ಷೆ ಅಂಕಿ-ಅಂಶ ಆಧರಿಸಬೇಕು. ಪ್ರವರ್ಗ -1ರ ಮೀಸಲಾತಿ ಪ್ರಮಾಣವನ್ನು ಶೇ 4ರಿಂದ ಶೇ 10ಕ್ಕೆ ಮತ್ತು ಪ್ರವರ್ಗ 2ಎ ಮೀಸಲಾತಿ ಪ್ರಮಾಣವನ್ನು ಶೇ 15ರಿಂದ ಶೇ 22ಕ್ಕೆ ಹೆಚ್ಚಿಸಬೇಕು ಒತ್ತಾಯಿಸಿದ್ದಾರೆ.

ನಿಜಾಮುದ್ದೀನ್ ರೈಲಿಗೆ ಸವಾಯಿ ಗಂಧರ್ವರ ಹೆಸರು: ಭರವಸೆ

ಧಾರವಾಡ: ‘ಹುಬ್ಬಳ್ಳಿ-ನಿಜಾಮುದ್ದೀನ್ ರೈಲ್ ಅನ್ನು ಪಂಡಿತ್ ಸವಾಯಿ ಗಂಧರ್ವ (ರಾಮಚಂದ್ರ ಕುಂದಗೋಳ್ಕರ್) ರೈಲು ಎಂದು ನಾಮಕರಣ ಮಾಡಲು ಕ್ರಮ ಕೈಗೊಳ್ಳಲಾಗುವುದು’ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಭರವಸೆ ನೀಡಿದರು.

ಧಾರವಾಡದ ನವೀಕೃತ ರೈಲು ನಿಲ್ದಾಣವನ್ನು ಮಂಗಳವಾರ ಲೋಕಾ-ರ್ಪಣೆಗೊಳಿಸಿದ ಸಂದರ್ಭದಲ್ಲಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಬೇಡಿಕೆಗಳಿಗೆ ಅವರು ಪ್ರತಿಕ್ರಿಯಿಸಿದರು.

‘ವಂದೇ ಭಾರತ್ ರೈಲು ಧಾರವಾಡದಿಂದ ಹೊರಡುವಂತೆ ಫೆಬ್ರುವರಿ ನಂತರ ಅನುಷ್ಠಾನಗೊಳಿಸಲಾಗುವುದು. ವಾರಾಣಸಿಗೆ ವಾರಕ್ಕೆ ಎರಡು ಬಾರಿ ರೈಲು ಸಂಚರಿಸುವಂತೆ ಮಾಡಲು ಇತರ ರೈಲುಗಳ ಸಮಯ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು’ ಎಂದರು.

ಶಬರಿಮಲೆಗೆ ಹೋಗುವ ಭಕ್ತರ ಅನುಕೂಲಕ್ಕಾಗಿ ಹುಬ್ಬಳ್ಳಿಯಿಂದ ಶೀಘ್ರ ರೈಲು ಸೇವೆ ಆರಂಭಿಸಲಾಗುವುದು ಎಂದರು.

ಹುಬ್ಬಳ್ಳಿ- ಅಂಕೋಲಾ ಯೋಜನೆಗೆ ಬದ್ಧ: ‘ಹುಬ್ಬಳ್ಳಿ- ಅಂಕೋಲಾ ರೈಲು ಮಾರ್ಗವು ಈ ಭಾಗದ ಆರ್ಥಿಕ ಬೆಳವಣಿಗೆಗೆ ಅತ್ಯಂತ ಮಹತ್ವದ್ದಾಗಿದೆ. ಆದರೆ ಇದಕ್ಕೆ ಪರಿಸರವಾದಿ-ಗಳ ವಿರೋಧದಿಂದಾಗಿ ಪ್ರಕರಣ ನ್ಯಾಯಾಲಯದಲ್ಲಿದೆ. ಪಶ್ಚಿಮ ಘಟ್ಟಗಳ ಪರಿಸರಕ್ಕೆ ಯಾವುದೇ ಧಕ್ಕೆಯಾಗದಂತೆ ಯೋಜನೆಯನ್ನು ಅನುಷ್ಠಾನಗೊಳಿಸಲು ಬದ್ಧ’ ಎಂದರು.

ವೇದಿಕೆ ಕುಸಿತ: ಕಾರ್ಯಕ್ರಮಕ್ಕೆ ಸುಮಾರು ಮೂರು ಸಾವಿರ ಜನರನ್ನು ಸೇರಿಸುವ ನಿಟ್ಟಿನಲ್ಲಿ ಸೋಮವಾರ ಸಂಜೆ ಬೃಹತ್ ಪೆಂಡಾಲ್, ದೊಡ್ಡ ಎಲ್ಇಡಿ ಪರದೆ, ಹವಾನಿಯಂತ್ರಿತ ಸಾಧನಗಳನ್ನು ಅಳವಡಿಸಲಾಗಿತ್ತು. ಆದರೆ, ಸೋಮವಾರ ರಾತ್ರಿ ಸುರಿದ ಮಳೆಗೆ ಇಡೀ ಪೆಂಡಾಲ್ ಕುಸಿದು ಬಿದ್ದಿತ್ತು. ಬೆಳಿಗ್ಗೆ ಧಾರವಾಡ ರೈಲು ನಿಲ್ದಾಣದ ಪ್ಲಾಟ್‌ಫಾರ್ಮ್ 1ರಲ್ಲಿ ವೇದಿಕೆ ನಿರ್ಮಿಸಿ ಕಾರ್ಯಕ್ರಮ ನಡೆಸಲಾಯಿತು.

ಅಕ್ರಮ ಆಸ್ತಿ: ಎ. ರಾಜಾ ವಿರುದ್ಧ ಚಾರ್ಜ್‌ಶೀಟ್

ನವದೆಹಲಿ (ಪಿಟಿಐ): ಕೇಂದ್ರ ಸಚಿವರಾಗಿದ್ದ ಅವಧಿಯಲ್ಲಿ ಡಿಎಂಕೆ ಮುಖಂಡ ಎ. ರಾಜಾ ಅವರು ₹ 5.53 ಕೋಟಿಯಷ್ಟು ಅಕ್ರಮ ಆಸ್ತಿ ಗಳಿಸಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಸಿಬಿಐ ಅವರ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಿದೆ.

ರಾಜಾ ಅವರ ನಿಕಟವರ್ತಿ ಸಿ. ಕೃಷ್ಣಮೂರ್ತಿ ಎಂಬುವವರು 2007ರಲ್ಲಿ ಕೋವೈ ಶೆಲ್ಟರ್ಸ್ ಪ್ರಮೋಟರ್ಸ್ ಎಂಬ ಕಂಪನಿ ಸ್ಥಾಪಿಸಿದ್ದರು. ಅದೇ ವರ್ಷ ಗುರುಗ್ರಾಮ ಮೂಲದ ರಿಯಲ್ ಎಸ್ಟೇಟ್ ಕಂಪನಿಯೊಂದು ಕಾಂಚೀಪುರಂನಲ್ಲಿ ಜಮೀನು ಖರೀದಿಗೆಂದು ₹ 4.56 ಕೋಟಿ ಮೊತ್ತದ ಕಮಿಷನ್ ನೀಡಿತ್ತು ಎಂದೂ ಚೆನ್ನೈನ ವಿಶೇಷ ಸಿಬಿಐ ನ್ಯಾಯಾಲಯಕ್ಕೆ ಸಲ್ಲಿಸಿರುವ ಚಾರ್ಜ್‌ಶೀಟ್‌ನಲ್ಲಿ ಆರೋಪಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಹೈಕೋರ್ಟ್ ಕಟಕಟೆಯಲ್ಲಿ ಸಂಸದ ಪ್ರಜ್ವಲ್ ರೇವಣ್ಣ

ಬೆಂಗಳೂರು: ‘ವಾಸ್ತವ ಆದಾಯ ಬಚ್ಚಿಟ್ಟು ಸುಳ್ಳುಪ್ರಮಾಣ ಪತ್ರ ಸಲ್ಲಿಸಿ ಲೋಕಸಭಾ ಚುನಾವಣೆಯಲ್ಲಿ ಹಾಸನ ಕ್ಷೇತ್ರದಿಂದ ಗೆದ್ದಿರುವ ಪ್ರಜ್ವಲ್ ರೇವಣ್ಣ ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು’ ಎಂದು ಕೋರಿರುವ ಅರ್ಜಿಗೆ ಸಂಬಂಧಿಸಿದ ಪ್ರಕರಣ ಮಂಗಳವಾರ ಹೈಕೋರ್ಟ್‌ನಲ್ಲಿ ನಡೆಯಿತು. ಪ್ರಜ್ವಲ್ ಅವರು ವಿಚಾರಣೆ ಎದುರಿಸಿದರು.

ಪ್ರಜ್ವಲ್ ರೇವಣ್ಣ ವಿರುದ್ಧ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಜಯ-ಗೊಂಡಿದ್ದ ಎ.ಮಂಜು ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ಈ ವೇಳೆ ಕಟಕಟೆಯಲ್ಲಿ ನಿಂತು ಪ್ರಮಾಣ ಮಾಡಿ ಮುಖ್ಯ ವಿಚಾರಣೆ ಎದುರಿಸಿದ ಪ್ರಜ್ವಲ್ ರೇವಣ್ಣ, ಹಿರಿಯ ವಕೀಲ ಉದಯ ಹೊಳ್ಳ ಮತ್ತು ಕೇಶವ ರೆಡ್ಡಿ ಅವರ ಪ್ರಶ್ನೆಗಳಿಗೆ ಉತ್ತರಿಸಿದರು.

ಉತ್ತರ ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆಯನ್ನು ಇದೇ 15ಕ್ಕೆ ಮುಂದೂಡಿದೆ. ‘ಆದಾಯ ತೆರಿಗೆ ವಿವರಗಳಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ದಾಖಲೆ ಸುಳ್ಳು ಅಂಕಿ ಅಂಶಗಳಿಂದ ಕೂಡಿದೆ’ ಎಂಬುದು ಅರ್ಜಿದಾರರ ವಾದ.

ಫಾತಿಮಾಗೆ ಛಂದ ಪುಸ್ತಕ ಬಹುಮಾನ





ಬೆಂಗಳೂರು: ಈ ಸಾಲಿನ ‘ಛಂದ ಪುಸ್ತಕ ಬಹುಮಾನ’ಕ್ಕೆ ಫಾತಿಮಾ ರಲಿಯಾ ಅವರ ಕತೆಗಳ ಹಸ್ತಪ್ರತಿ ಆಯ್ಕೆಯಾಗಿದೆ. ದಕ್ಷಿಣ ಕನ್ನಡದ ಪೆರ್ನೆ ಗ್ರಾಮದ ಕತೆಗಾರ್ತಿ ಫಾತಿಮಾ, ಸದ್ಯ ಉಡುಪಿ ಜಿಲ್ಲೆಯ ಹೆಜಮಾಡಿಯಲ್ಲಿ ವಾಸವಿದ್ದಾರೆ. ಇವರು ಎಂಬಿಎ ಪದವೀಧರರು.

ಸ್ಪರ್ಧೆಯಲ್ಲಿ 93 ಕತೆಗಾರರು ಭಾಗವಹಿಸಿದ್ದರು. ಸಿನಿಮಾ ನಿರ್ದೇಶಕ ಗಿರೀಶ ಕಾಸರವಳ್ಳಿ ಅವರು ತೀರ್ಪುಗಾರರಾಗಿದ್ದರು. ಆಯ್ಕೆಯಾದ ಕತೆಗಾರರಿಗೆ ₹ 40 ಸಾವಿರ ನಗದು, ಫಲಕ ನೀಡಲಾಗುತ್ತದೆ. ಬಹುಮಾನಿತ ಹಸ್ತಪ್ರತಿಯ ಪುಸ್ತಕವನ್ನು ನವೆಂಬರ್ ತಿಂಗಳಲ್ಲಿ ಪ್ರಕಟಿಸಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಉದ್ಯೋಗ ವಾಣಿ

ತಂತ್ರಜ್ಞಾನ





ಆಧುನಿಕ 'ಸ್ಮಾರ್ಟ್' ಒಡವೆಗಳು

ಸುಧೀರ ಎಚ್. ಎಸ್.

ಇಂದಿನ ಸ್ಮಾರ್ಟ್‌ಯುಗದಲ್ಲಿ ನಮ್ಮ ಸುತ್ತಮುತ್ತ ಸಾಕಷ್ಟು ಪ್ರಮಾಣದಲ್ಲಿ ಬಹುತೇಕ ಎಲ್ಲ ಉಪಕರಣಗಳು ಸ್ಮಾರ್ಟ್ ಆಗುತ್ತಿವೆ. ಮನೆಯೊಳಗೆ ಬಳಸುವ ಉಪಕರಣಗಳಿಂದ ಹಿಡಿದು ಕಾರ್ಖಾನೆಗಳ ತನಕ ಸ್ಮಾರ್ಟ್ ಉಪಕರಣಗಳು ಬಳಕೆಗೆ ಬಂದಿವೆ. ಈಗಾಗಲೇ ದೀಪಗಳು, ಫ್ಯಾನ್, ಟಿ.ವಿ ಮತ್ತು ರಸ್ತೆಗಳಲ್ಲಿ ಸಿಗ್ನಲ್‌ಗಳು ಸಹ ಸ್ಮಾರ್ಟ್ ಆಗಿವೆ.

ಸ್ಮಾರ್ಟ್ ವಾಚ್‌ಗಳು ಕೂಡ ಪ್ರಚಲಿತವಾಗಿವೆ. ಸ್ಮಾರ್ಟ್ ವಾಚ್ ಧರಿಸಿದವರು ಒಂದು ದಿನದಲ್ಲಿ ಎಷ್ಟು ಹೆಜ್ಜೆ ನಡೆದರು, ಎಷ್ಟು ಕ್ಯಾಲೋರಿ ಕರಗಿಸಿದರು, ಎಷ್ಟು ಹೊತ್ತು ನಿಂತಿದ್ದರು, ರಕ್ತದಲ್ಲಿ ಎಷ್ಟು ಆಮ್ಲಜನಕ ಇದೆ, ಆಟವಾಡಿದಾಗ ಅಥವಾ ವ್ಯಾಯಾಮ ಮಾಡಿದಾಗ ಹೃದಯದ ಬಡಿತ ಹೇಗಿತ್ತು ಮತ್ತು ಎಷ್ಟು ಹೊತ್ತು ನಿದ್ದೆ ಮಾಡಿದೆ ಎಂದೆಲ್ಲ ಮಾಹಿತಿಯನ್ನು ಕಲೆ ಹಾಕುತ್ತದೆ.

ಇಂತಹ ಉಪಕರಣಗಳು 'ಸ್ಮಾರ್ಟ್' ಎಂದು ಹೇಳಲು ಅವು ಸಂಗ್ರಹಿಸಿದ ಮಾಹಿತಿಯನ್ನು ತ್ವರಿತವಾಗಿ ಅಥವಾ ನಿಯಮಿತವಾಗಿ ಅಂತರ್ಜಾಲದಲ್ಲಿ ರವಾನಿಸಿ, ನಿಗದಿತ ಕಡೆ ಅದನ್ನು ಇರಿಸಿ, ಬೇಕಾದಾಗ ಸೂಕ್ತವಾಗಿ ಅದನ್ನು ವಿಶ್ಲೇಷಿಸಲು ಅನುವು ಆಗುವುದಕ್ಕೆ ಹೇಳಬಹುದು. ಕೆಲವೊಮ್ಮೆ ಹೀಗೆ ವಿಶ್ಲೇಷಿಸಿ ಕೆಲವು ಅವಶ್ಯಕ ನಿರ್ಧಾರಗಳನ್ನು ತೆಗೆದುಕೊಂಡು ಮುಂದಿನ ಪೂರ್ವನಿಯೋಜಿತ ಕಾರ್ಯಗಳನ್ನು ಕೈಗೊಳ್ಳಲು ಪೂರಕವಾಗಬಹುದು.

ಉದಾಹರಣೆಗೆ, ಹೃದಯದ ಬಡಿತದಲ್ಲಿ ನಿರ್ದಿಷ್ಟ ಮಟ್ಟಕ್ಕಿಂತ ಏನಾದರೂ ವ್ಯತ್ಯಾಸವಾದರೆ ಸ್ಮಾರ್ಟ್ ವಾಚ್ ಧರಿಸಿದವರಿಗೆ ಅಲರ್ಟ್ ಕೊಡುತ್ತದೆ. ಜೊತೆಗೆ ನಿರ್ದಿಷ್ಟ ವ್ಯಕ್ತಿಗಳಿಗೂ ಕರೆ / ಮೆಸೇಜ್ ಕೂಡ ಮಾಡುವುದು. ಇಂತಹ ಸ್ಮಾರ್ಟ್ ವಾಚ್ ಧರಿಸಿದವರು ಅಕಸ್ಮಾತ್ತಾಗಿ ಹೃದಯಾಘಾತಕ್ಕೆ ತುತ್ತಾದರೆ, ತುರ್ತುಚಿಕಿತ್ಸೆ ಪಡೆಯಬೇಕೆಂದು ಕೂಡ ಅದೇ ಸೂಚನೆಯನ್ನು ಕೊಡಬಹುದು.

ಇಂಥ ಮಾಹಿತಿಗಳನ್ನು ಈಗಾಗಲೇ ಟಿ.ವಿ ಅಥವಾ ಸಾಮಾಜಿಕ ಜಾಲತಾಣಗಳಿಂದ ತಿಳಿದಿರಬಹುದು. ಈಗ ಇಷ್ಟನ್ನೂ ಮೀರಿ ಈ ಸ್ಮಾರ್ಟ್ ಉಪಕರಣಗಳು ಒಂದು ಹೆಜ್ಜೆ ಮುಂದೆ ಸಾಗಿದೆ.

ನಿತ್ಯದ ಔಷಧ ತೆಗೆದುಕೊಳ್ಳುವುದನ್ನು ನೀವು ಎಂದಾದರೂ ತಪ್ಪಿಸಿದ್ದೀರಾ? ಒಮ್ಮೊಮ್ಮೆ ತಪ್ಪಿದಾಗ ಇನ್ನು ಮುಂದೆ ಸರಿಯಾಗಿ ತೆಗೆದುಕೊಳ್ಳುವೆವು ಎಂದು ನಾವೇ ಸಮಾಧಾನ ಮಾಡಿಕೊಂಡಿರಬಹುದು. ಆದರೆ ಔಷಧದ ಒಂದು ಡೋಸ್‌ನ ವ್ಯತ್ಯಯದಿಂದ ಅನೇಕ ಸಂದರ್ಭಗಳಲ್ಲಿ ಗಂಭೀರವಾಗಿಲ್ಲದಿದ್ದರೂ, ದೀರ್ಘಕಾಲದ ಕಾಯಿಲೆಗಳಿಗೆ ತುತ್ತಾದವರು ಗಂಭೀರ ಸಮಸ್ಯೆಗಳನ್ನು ಎದುರಿಸಬಹುದು.


ಸಮಯಕ್ಕೆ ಸರಿಯಾಗಿ ಔಷಧವನ್ನು ಪಡೆಯಲು ಕೆಲವಡೆ ಚುಚ್ಚುಮದ್ದುಗಳನ್ನು ನೀಡುವ ಕೌಶಲದ ಕೊರತೆಯೂ ಕಾಡಬಹುದು. ಅಥವಾ ಸ್ವಾಭಾವಿಕವಾಗಿ ಮರೆತು ತೆಗೆದುಕೊಳ್ಳಲು ಸಾಧ್ಯವಾಗದಿಬಹುದು. ಆದರೆ ಈಗ ತಂತ್ರಜ್ಞಾನದ ಸಹಾಯದಿಂದ ಇಂತಹ ಸನ್ನಿವೇಶಗಳಿಂದ ಮುಕ್ತಿ ಪಡೆದು ಔಷಧಿಯನ್ನು ಸರಿಯಾದ ಡೋಸಿನಲ್ಲಿ ತೆಗೆದುಕೊಳ್ಳಲು ಸೂಕ್ತ ಸಾಧನಗಳು ಸಿದ್ಧವಾಗುತ್ತಿವೆ. ಅವೇ ಧರಿಸಬಹುದಾದ ಸಾಧನಗಳು - ಧರಿಕೆಗಳು (ವೇರಬಲ್ಸ್) ಮತ್ತು ಅಳವಡಿಸಬಹುದಾದ ಸಾಧನಗಳು - ಅಳವಡಿಕೆಗಳು (ಇಂಪ್ಲಾಂಟ್ಸ್). ಈ ಸ್ಮಾರ್ಟ್ ಉಪಕರಣಗಳನ್ನು 'ಆಧುನಿಕ ಒಡವೆಗಳು' ಎಂದರೆ ತಪ್ಪಾಗದು. ಇವು ದೇಹದ ಅಗತ್ಯತೆ ಮತ್ತು ಪೂರ್ವ ನಿರ್ಧಾರಿತ ವೇಳಾಪಟ್ಟಿಗೆ ಅನುಗುಣವಾಗಿ ನಿಗದಿತ ಔಷಧಗಳ ಸೇವನೆಯನ್ನು ಸ್ವಯಂಚಾಲಿತವಾಗಿ ನಿರ್ವಹಿಸಬಹುದು.

ಸಾಂಪ್ರದಾಯಿಕ ಔಷಧ ವಿತರಣಾ ವ್ಯವಸ್ಥೆಗಳಲ್ಲಿ ಗಮನಿಸಲಾದ ಅನಗತ್ಯ ಪುನರಾವರ್ತಿತ ಡೋಸಿಂಗನ್ನು ಕಡಿಮೆ ಮಾಡಲು ಧರಿಕೆಗಳು ಮತ್ತು ಇಂಪ್ಲಾಂಟ್‌ಗಳು ಸಹಾಯ ಮಾಡುತ್ತವೆ. ಇವು ಅಗತ್ಯವಿರುವ ಪ್ರಮಾಣದ ಔಷಧವನ್ನು ನಿಯಂತ್ರಿತ ರೀತಿಯಲ್ಲಿ ಬಿಡುಗಡೆ ಮಾಡುವವು. ಆಗ ಔಷಧಗಳು ದೀರ್ಘಕಾಲದವರೆಗೆ ಕಾರ್ಯನಿರ್ವಹಿಸುತ್ತವೆ, ಮತ್ತು ದೇಹದ ಮೇಲೆ ಯಾವುದೇ ಅಡ್ಡಪರಿಣಾಮಗಳನ್ನು ತಪ್ಪಿಸಬಹುದು. ಮಾತ್ರವಲ್ಲ, ಸಕಾಲಿಕ ಔಷಧಸೇವನೆಯ ವ್ಯತ್ಯಯವನ್ನೂ ಈ ಸಾಧನಗಳು ತಪ್ಪಿಸಬಹುದು.

ಔಷಧಗಳನ್ನು ಮೌಖಿಕವಾಗಿ ಸೇವಿಸಿದಾಗ ಅಥವಾ ರಕ್ತನಾಳಕ್ಕೆ ಚುಚ್ಚುಮದ್ದನ್ನು ಬಳಸಿದಾಗ, ಔಷಧವು ಉದ್ದೇಶಿಸದ ದೇಹದ ಕೆಲವು ಭಾಗಗಳ ಮೂಲಕವೂ ಅನಗತ್ಯವಾಗಿ ಹಾದುಹೋಗುತ್ತದೆ. ದೇಹದಲ್ಲಿಯ ಈ ರೀತಿಯ ಸಾಂಪ್ರದಾಯಿಕ ರೀತಿಯ ಔಷಧ ವಿತರಣೆಯು ಕೆಲವು ಸಮಸ್ಯೆಗಳನ್ನು ಉಂಟುಮಾಡುತ್ತದೆ. ಉದಾಹರಣೆಗೆ, ರೋಗಿಗೆ ಪುನರಾವರ್ತಿತ ಪ್ರಮಾಣಗಳು ಬೇಕಾಗಬಹುದು; ಅಥವಾ ಔಷಧದ ವಿತರಣೆಯ ಗುರಿಪ್ರದೇಶವನ್ನು ಹೊರತುಪಡಿಸಿ ದೇಹದ ಭಾಗಗಳಿಗೆ ತಲುಪಿ ಅಡ್ಡಪರಿಣಾಮಗಳನ್ನು ಉಂಟುಮಾಡಬಹುದು. ಆದರೆ ಇಂಪ್ಲಾಂಟ್‌ಗಳು ನೇರವಾಗಿ ಉದ್ದೇಶಿತ ಪ್ರದೇಶ ಮತ್ತು ಅಂಗಕ್ಕೆ ಔಷಧಗಳನ್ನು ತಲುಪಿಸುತ್ತದೆ. ಅಡ್ಡಪರಿಣಾಮಗಳ ಸಾಧ್ಯತೆಯನ್ನೂ ಕಡಿಮೆ ಮಾಡಬಹುದು. ಉದಾಹರಣೆಗೆ, ಸ್ತನಕ್ಯಾನ್ಸರ್ ಅಥವಾ ಬಾಯಿಯ ಕ್ಯಾನ್ಸರ್‌ನ ರೋಗಿಗಳಲ್ಲಿ ಇವು ನಿರ್ದಿಷ್ಟ ಗಡ್ಡೆಯ ಸ್ಥಳಕ್ಕೆ ಮಾತ್ರವೇ ಔಷಧವನ್ನು ತಲುಪಿಸುತ್ತವೆ. ಹೀಗಾಗಿ ಈ ವಿಧಾನವು ಸಾಂಪ್ರದಾಯಿಕ ಕೀಮೋಥೆರಪಿಯಲ್ಲಿ ಕಂಡುಬರುವ ಪ್ರತಿಕೂಲ ಪ್ರತಿಕ್ರಿಯೆಗಳನ್ನು ಕಡಿಮೆ ಮಾಡುತ್ತದೆ.

ಅನೇಕರು ಮಧುಮೇಹದ ನಿರ್ವಹಣೆಗಾಗಿ ಇನ್ಸುಲಿನನ್ನು ಪಡೆಯಲು ಇನ್ಸುಲಿನ್ ಪಂಪ್‌ಗಳು, ಚುಚ್ಚುಮದ್ದಿನ ಪೆನ್ನುಗಳು ಅಥವಾ ಮೈಕ್ರೊನೀಡಲ್ ಪ್ಯಾಚ್‌ಗಳನ್ನು ಬಳಸುತ್ತಾರೆ. ಸುಧಾರಿತ ಸ್ವಯಂಚಾಲಿತ ಎಲೆಕ್ಟ್ರೋಥರ್ಮಲ್ ಪ್ಯಾಚ್ ಚರ್ಮದ ಮೂಲಕ ಇನ್ಸುಲಿನ್ ಅನ್ನು ನೀಡುತ್ತದೆ; ಇದು ಮೈಕ್ರೊನೀಡಲ್ ಪ್ಯಾಚ್‌ಗಳಿಗಿಂತ ಪರಿಣಾಮಕಾರಿ. ತಪ್ಪಾದ ಮತ್ತು ಅನಿಯಮಿತ ಡೋಸಿಂಗ್ ಸಮಸ್ಯೆಯನ್ನೂ ಇವುಗಳಿಂದ ತಪ್ಪಿಸಬಹುದಾಗಿದೆ.

ದೇಹದ ಚಲನೆ, ಬೆವರು, ಕಣ್ಣೀರು ಅಥವಾ ಹೊರಗಿನ ಬೆಳಕು, ಕಾಂತೀಯ ಬಲ ಅಥವಾ ಅಲ್ಟ್ರಾಸೌಂಡ್‌ನಂತಹ ಬಾಹ್ಯ ಪ್ರಚೋದಕಗಳಿಗೆ ಅನುಗುಣವಾಗಿ ಔಷಧ ಬಿಡುಗಡೆಯ ಪ್ರಮಾಣವನ್ನು ಈ ಧರಿಕೆಗಳು ಮತ್ತು ಅಳವಡಿಕೆಗಳ ಮೂಲಕ ನಿರ್ವಹಿಸಬಹುದು. ವೈರ್‌ಲೆಸ್ ಸಂವಹನವನ್ನು ಬಳಸಿಕೊಂಡು ನಿಯಂತ್ರಿಸಬಹುದಾದ ಸ್ಮಾರ್ಟ್ ಧರಿಕೆಗಳು ಮತ್ತು ಇಂಪ್ಲಾಂಟ್‌ಗಳು ಕೂಡ ಬಳಕೆಗೆ ಬರುತ್ತಿವೆ. ❖





ಆ್ಯಪಲ್ ಐಫೋನ್ 14 ಪ್ರೊ ನೋಡುವುದಕ್ಕೂ ಆಕರ್ಷಕವಾಗಿದೆ ಮತ್ತು ಹಿಂದಿನ ಫೋನ್‌ಗಳಿಗಿಂತ ಗುಣಮಟ್ಟವೂ ವೃದ್ಧಿಯಾಗಿದೆ. ಡೈನಮಿಕ್ ಐಲೆಂಡ್ ಎಂಬ ಸ್ಕ್ರೀನ್ ಮೇಲೆ ಎದ್ದುಕಾಣಿಸುವ ಜಾಗ, ಸದಾ ಕಾಲ ಆನ್ ಇರುವ ಲಾಕ್ ಸ್ಕ್ರೀನ್‌ನೊಂದಿಗೆ ಹೊಸತನವಿದೆ ಮತ್ತು ₹1,29,990 ದಿಂದ ಆರಂಭವಾಗುವ ಬೆಲೆಯಲ್ಲಿ 128ಜಿಬಿ, 256ಜಿಬಿ, 512ಜಿಬಿ ಜೊತೆಗೆ 1ಟಿಬಿ ಸ್ಟೋರೇಜ್ ಸಾಮರ್ಥ್ಯ ಇರುವ ಮಾದರಿಗಳಿವೆ.

ಆ್ಯಪಲ್ ಐಫೋನ್ 14 ಪ್ರೊ

ಅವಿನಾಶ್ ಬಿ.

ಆ್ಯಪಲ್ ಈ ವರ್ಷ ಬಿಡುಗಡೆ ಮಾಡಿರುವ ಐಫೋನ್ 14 ಸರಣಿಯ 'ಪ್ರೊ' ಆವೃತ್ತಿ ರಿವ್ಯೂಗೆ ದೊರೆತಿದ್ದು, ಎರಡು ವಾರಗಳ ಬಳಕೆಯ ಸಂದರ್ಭದಲ್ಲಿ ಗಮನಿಸಿದ ಅಂಶಗಳು ಇಲ್ಲಿವೆ.

ಐಫೋನ್ 14 ಪ್ರೊ ನೋಡಿದ ತಕ್ಷಣ ಗಮನ ಸೆಳೆಯುವುದು ಅದರ ಸ್ಕ್ರೀನ್ ಮೇಲೆ ಕ್ಯಾಪ್ಸೂಲ್ ಮಾತ್ರೆಯಾಕಾರದಲ್ಲಿರುವ 'ಡೈನಮಿಕ್ ಐಲೆಂಡ್'. ಇದು ಸೆಲ್ಫೀ ಕ್ಯಾಮೆರಾ ಇರುವ ಹಾಗೂ ಫೇಸ್ ಐಡಿ ತಂತ್ರಾಂಶ ಅಡಕವಾಗಿರುವ ಖಾಲಿ ಸ್ಥಳ. ಅಗತ್ಯಕ್ಕೆ ತಕ್ಕಂತೆ ಈ ಸ್ಥಳದ ಗಾತ್ರವೂ ಬದಲಾಗಬಲ್ಲುದು.

6.1 ಇಂಚಿನ OLED (ಸೂಪರ್ ರೆಟಿನಾ XDR) ಸ್ಕ್ರೀನ್ 120GHz ರೀಫ್ರೆಶ್ ರೇಟ್ ಇರುವುದರಿಂದ ಮತ್ತು ಅತ್ಯಾಧುನಿಕ ಐಒಎಸ್ 16ರ ಕಾರ್ಯಾಚರಣೆ ವ್ಯವಸ್ಥೆಯ ಮೂಲಕ ಅತ್ಯಂತ ಸುಲಲಿತವಾದ ಬ್ರೌಸಿಂಗ್ ಸಾಧ್ಯವಾಗುತ್ತದೆ. ಹಿಂದಿನ ಫೋನ್‌ಗಳಿಗಿಂತ ಉತ್ತಮವಾದ ಸ್ಕ್ರೀನ್ ಪ್ರಖರತೆ ಇರುವುದರಿಂದ ಹೊರಾಂಗಣದಲ್ಲಂತೂ ಕಣ್ಣಿಗೆ ಯಾವುದೇ ರೀತಿಯ ತ್ರಾಸವೂ ಇಲ್ಲದೆ ಫೋನ್‌ನಲ್ಲಿ ಕೆಲಸ ಮಾಡಬಹುದು. ಗಟ್ಟಿಯಾದ ಫ್ರೇಮ್ ಇದ್ದು, ಉತ್ತಮ ಬಿಲ್ಡ್ ಹೊಂದಿದೆ.

ಲಾಕ್ ಸ್ಕ್ರೀನ್‌ಗಿಂತ ಮಬ್ಬಾಗಿರುವ ಸ್ಕ್ರೀನ್ ಮೇಲೆ ದಿನಾಂಕ, ಸಮಯವಲ್ಲದೆ, ಈ ಬಾರಿ ಹೆಚ್ಚುವರಿ ವಿಜೆಟ್‌ಗಳನ್ನೂ (ಕ್ಯಾಲೆಂಡರ್, ಅಲಾರಂ, ಬ್ಯಾಟರಿ ಚಾರ್ಜ್ ಮುಂತಾದ ಸೀಮಿತ ವಿಜೆಟ್‌ಗಳನ್ನು) ಸೇರಿಸುವ ಆಯ್ಕೆ ನೀಡಲಾಗಿದೆ.

ಸದಾ ಕಾಲ ಆನ್ ಇರುವ ಸ್ಕ್ರೀನ್, ಆನ್ ಇದ್ದರೂ ಬ್ಯಾಟರಿ ಹೆಚ್ಚೇನೂ ವ್ಯಯವಾಗದಂತಿರುವ ತಂತ್ರಾಂಶ ಮತ್ತೊಂದು ವಿಶೇಷ. ಇದು ಲಾಕ್ ಸ್ಕ್ರೀನ್‌ನಂತೆಯೇ ಕಂಡರೂ, ಸ್ವಲ್ಪ ಕಾಲ ಬಳಸದೇ ಬಿಟ್ಟಾಗ ಬೆಳಕಿನ ಪ್ರಮಾಣ ಮಂದವಾಗುವ ಕಾರಣ, ಹೆಚ್ಚು ಬ್ಯಾಟರಿ ಚಾರ್ಜ್ ವ್ಯಯವಾಗುವುದಿಲ್ಲ.

ಅದ್ಭುತ ಕ್ಯಾಮೆರಾ

ಐಫೋನ್ ಕ್ಯಾಮೆರಾಗಳು ಎಂದಿನಂತೆಯೇ ಗಮನ ಸೆಳೆದರೆ, ಈ ವರ್ಷದ ಅಪ್‌ಗ್ರೇಡ್, ಛಾಯಾಗ್ರಹಣಪ್ರಿಯರಿಗೆ ಹೇಳಿ ಮಾಡಿಸಿದಂತಿದೆ. 48 ಮೆಗಾಪಿಕ್ಸೆಲ್ ಪ್ರಧಾನ ಕ್ಯಾಮೆರಾ ಲೆನ್ಸ್ ಇದ್ದು, ಈಗಾಗಲೇ ಚಿತ್ರ, ವಿಡಿಯೊ ಗುಣಮಟ್ಟಕ್ಕೆ ಹೆಸರು ಪಡೆದಿರುವ ಐಫೋನ್‌ಗೆ ಮತ್ತಷ್ಟು ಬಲ ಬಂದಂತಾಗಿದೆ. ಜೊತೆಗೆ, ಫ್ಲ್ಯಾಶ್ ಹಾಗೂ ಪ್ರಬಲವಾಗಿರುವ ತ್ರಿವಳಿ ಕ್ಯಾಮೆರಾ ವ್ಯವಸ್ಥೆ ಇದೆ.

ಫೋಟೊ, ವಿಡಿಯೊಗಳಂತೂ ಅತ್ಯುತ್ತಮ ಗುಣಮಟ್ಟದಲ್ಲಿ ಮೂಡಿಬರುತ್ತವೆ. 3X ಆಪ್ಟಿಕಲ್ ಝೂಮ್ ಹಾಗೂ 15X ಡಿಜಿಟಲ್ ಝೂಮ್ ವ್ಯವಸ್ಥೆಯಿದೆ. ಇಷ್ಟು ಒಳ್ಳೆಯ ಕ್ಯಾಮೆರಾ ಲೆನ್ಸ್‌ಗಳಿರುವಾಗ ಆಪ್ಟಿಕಲ್ ಝೂಮ್ ಇನ್ನಷ್ಟು ಹೆಚ್ಚು ನೀಡಬಹುದಿತ್ತು ಎಂಬ ಆಸೆ ಮೂಡಿದ್ದು ಸುಳ್ಳಲ್ಲ. ವೈಡ್ ಆ್ಯಂಗಲ್ ಪ್ರಧಾನ ಲೆನ್ಸ್ ಅತ್ಯುತ್ತಮ ಡೀಟೇಲ್ ಮತ್ತು ವರ್ಣವೈವಿಧ್ಯದ ನಿಖರತೆಗೆ ಕಾರಣವಾಗಿದ್ದರೆ, ಮ್ಯಾಕ್ರೋ ಕ್ಯಾಮೆರಾ ಲೆನ್ಸ್ ಆಗಿಯೂ ಪರಿವರ್ತನೆಯಾಗಬಲ್ಲ 12 MP ಅಲ್ಟ್ರಾ ವೈಡ್ ಆ್ಯಂಗಲ್ ಲೆನ್ಸ್, 12MP ಟೆಲಿಫೋಟೋ ಲೆನ್ಸ್ ಚಿತ್ರಗಳ ಗುಣಮಟ್ಟಕ್ಕೆ ಮತ್ತಷ್ಟು ಮೆರುಗು ನೀಡುತ್ತದೆ. ವಿಡಿಯೊ ಬಗೆಗಿನ ತಂತ್ರಾಂಶವನ್ನೂ ಉನ್ನತೀಕರಿಸಲಾಗಿದ್ದು, ಚಲನೆಯ ವೇಳೆ ಸಣ್ಣಪುಟ್ಟ ಅದುರುವಿಕೆಯನ್ನು (ಶೇಕ್) ಉತ್ತಮವಾಗಿ ನಿಭಾಯಿಸುತ್ತದೆ. ಸಿನಿಮ್ಯಾಟಿಕ್ ಮೋಡ್‌ನಲ್ಲಿ 4ಕೆ ರೆಸೊಲ್ಯುಶನ್‌ನಲ್ಲಿ ವಿಡಿಯೊ ರೆಕಾರ್ಡಿಂಗ್ ಮಾಡಬಹುದಾಗಿದೆ. ಧ್ವನಿಯೂ ಉತ್ತಮವಾಗಿ ಸೆರೆಯಾಗುತ್ತದೆ.


ಎ16 ಬಯೋನಿಕ್ ಚಿಪ್ ಸೆಟ್ ಮತ್ತು 5ಕೋರ್ ಜಿಪಿಯು ಇರುವುದರಿಂದಾಗಿ ಎಲ್ಲ ರೀತಿಯ ಕಾರ್ಯಾಚರಣೆ ಸುಲಲಿತವಾಗಿಯೂ, ವೇಗವಾಗಿಯೂ ಆಗುತ್ತದೆ. ಸಾಮಾನ್ಯ ಬಳಕೆಯಲ್ಲಿ ಎರಡು ದಿನಗಳಿಗೆ ಸಾಕಾಗುವಷ್ಟು ಬ್ಯಾಟರಿ ಚಾರ್ಜ್ ಇರುತ್ತದೆ. ಈಗ ಆರಂಭವಾಗಿರುವ 5ಜಿ ಬಳಸುವುದಕ್ಕೆ ತಂತ್ರಾಂಶ ಅಪ್‌ಗ್ರೇಡ್ ಶೀಘ್ರವೇ ಲಭ್ಯವಾಗಲಿದೆ ಎಂದು ಆ್ಯಪಲ್ ತಿಳಿಸಿದೆ.

ಒಟ್ಟಾರೆಯಾಗಿ ಹೇಳುವುದಾದರೆ, ಆ್ಯಪಲ್ ಐಫೋನ್ 14 ಪ್ರೊ ನೋಡುವುದಕ್ಕೂ ಆಕರ್ಷಕವಾಗಿದೆ ಮತ್ತು ಹಿಂದಿನ ಫೋನ್‌ಗಳಿಗಿಂತ ಗುಣಮಟ್ಟವೂ ವೃದ್ಧಿಯಾಗಿದೆ. ಸ್ಟೋರೇಜ್‌ಗೆ ಅನುಗುಣವಾಗಿ ₹1,29,990 ದಿಂದ ಆರಂಭವಾಗುವ ಬೆಲೆಯಲ್ಲಿ 128ಜಿಬಿ, 256ಜಿಬಿ, 512ಜಿಬಿ ಜೊತೆಗೆ 1ಟಿಬಿ ಸ್ಟೋರೇಜ್ ಸಾಮರ್ಥ್ಯ ಇರುವ ಮಾದರಿಗಳಿವೆ. ❖

ಸಮುದ್ರಜಲದ ಶುದ್ಧಿಗೆ ಗ್ರಾಫೀನ್

ದೀಪ್ತಿ

ವಿಶ್ವದಾದ್ಯಂತ ಶುದ್ಧ ಕುಡಿಯುವ ನೀರಿನ ಕೊರತೆ ಹೆಚ್ಚುತ್ತಿದೆ. ಜೊತೆಗೆ ಅನಾವೃಷ್ಟಿ ಮತ್ತು ಜಲಮೂಲಗಳ ಮಾಲಿನ್ಯಗಳೂ ಹೆಚ್ಚುತ್ತಿವೆ. ಹೀಗೆ ಹಲವಾರು ಸಮಸ್ಯೆಗಳಿಂದ ಬಳಲುತ್ತಿರುವ ನೂರಾರು ಕೋಟಿ ಜನರಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ವಿಜ್ಞಾನಿಗಳು ಗ್ರಾಫೀನ್ ಆಕ್ಸೈಡ್‌ನಿಂದ ತಯಾರಿಸಲಾಗಿರುವ ವಿಶೇಷ ಜರಡಿಯೊಂದನ್ನು ಅಭಿವೃದ್ಧಿ ಪಡಿಸಿದ್ದಾರೆ.



ಸಮುದ್ರ ನೀರಿನ್ನು ಈ ಜರಡಿಯಲ್ಲಿ ಶೋಧಿಸಿದಾಗ ಶುದ್ಧ ಕುಡಿಯುವ ನೀರು ದೊರೆಯುವುದನ್ನು ವಿಜ್ಞಾನಿಗಳು ಪ್ರಾತ್ಯಕ್ಷಿಕೆಯ ಮೂಲಕ ತೋರಿಸಿದ್ದಾರೆ. ಒಂದು ನ್ಯಾನೋಮೀಟರ್‌ಗಿಂತ ಕಡಿಮೆ ವ್ಯಾಸದ ರಂಧ್ರಗಳಿರುವ ಈ ಜರಡಿ, ಸಮುದ್ರದ ನೀರಿನಲ್ಲಿ ನಿರಂತರವಾಗಿ ತನ್ನ ಕೆಲಸ ಮಾಡಲು ಸಾಧ್ಯವಾಗುವಂತೆ, ಈ ಜರಡಿಗೆ 'ಎಫಾಕ್ಸಿ ರೆಸಿನ್' ಲೇಪನವನ್ನು ಮಾಡಲಾಗಿದೆ. ಕಡಿಮೆ ಬೆಲೆಯಲ್ಲಿ ಗ್ರಾಫೀನ್ ಆಕ್ಸೈಡ್ ತಯಾರಿಸುವ ವಿಧಾನವನ್ನೂ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ. ಈ ವಿಧಾನವನ್ನು ಬಳಸಿ ಜರಡಿಯನ್ನು ತಯಾರಿಸಿದರೆ ಖರ್ಚು ಕಡಿಮೆಯಾಗುತ್ತದೆ ಎನ್ನುತ್ತಿದ್ದಾರೆ, ವಿಜ್ಞಾನಿಗಳು. ಸಮುದ್ರದ ನೀರಿನಿಂದ ಕುಡಿಯುವ ನೀರನ್ನು ಪಡೆಯಲು ಹಲವಾರು ವಿಧಾನಗಳು ಬಳಕೆಯಲ್ಲಿವೆ. ಆದರೆ ಇಂತಹ ನೀರು ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಲು ಮತ್ತು ನಿರ್ವಹಿಸಲು ಹೆಚ್ಚು ಹಣ ಬೇಕಾಗುತ್ತದೆ. ಹೀಗಾಗಿ ಇಂತಹ ಶುದ್ಧೀಕರಣಗೊಂಡ ನೀರಿನ ಬೆಲೆ ದುಬಾರಿಯಾಗುತ್ತದೆ. ಸಮುದ್ರದ ನೀರನ್ನು ಗ್ರಾಫೀನ್ ಆಕ್ಸೈಡ್ ಜರಡಿಯನ್ನು ಬಳಸಿ ಶುದ್ಧ ಕುಡಿಯುವ ನೀರನ್ನಾಗಿಸುವ ಈ ವಿಧಾನದಲ್ಲಿ ದೊರೆಯುವ ಕುಡಿಯುವ ನೀರಿನ ಬೆಲೆ ಕಡಿಮೆ ಇರುತ್ತದೆ ಎಂಬುದು ವಿಜ್ಞಾನಿಗಳ ಭರವಸೆ. ❖



ಥರ್ಮೋಕೋಲ್‌ಗೆ ಬೇಕು ನಿಯಂತ್ರಣ

ಉದಯ ಶಂಕರ ಪುರಾಣಿಕ

ಪ್ಯಾಕಿಂಗ್, ತಟ್ಟೆ, ಲೋಟ, ಶಬ್ದನಿರೋಧಕಗಳು, ಮೀನು ಸಾಗಾಣಿಕೆ ಡಬ್ಬಗಳು, ಕೃತಕ ಚಾವಣಿ, ಕಲಾಕೃತಿಗಳು – ಹೀಗೆ ಹಲವಾರು ಕಡೆ ಥರ್ಮೋಕೋಲ್ ಬಳಕೆಯಾಗುತ್ತಿದೆ. ಇದು ಹಗುರವಾಗಿರುವುದರಿಂದ, ಉತ್ಪಾದನಾ ವೆಚ್ಚ ಕಡಿಮೆಯಿರುವುದರಿಂದ, ಉತ್ತಮ ಶಬ್ದನಿರೋಧಕ ಗುಣಗಳನ್ನು ಹೊಂದಿರುವುದರಿಂದ ಜನಪ್ರಿಯವಾಗುತ್ತಿದೆ. ಆದರೆ ನಾವು ಬಳಸುವ ಥರ್ಮೋಕೋಲ್‌ನಿಂದ ಉಂಟಾಗುವ ಆರೋಗ್ಯ ಮತ್ತು ಪರಿಸರ ಹಾನಿಯನ್ನು ಕುರಿತು ಜನಸಾಮಾನ್ಯರಲ್ಲಿ ಹೆಚ್ಚು ಜಾಗೃತಿ ಉಂಟಾಗಬೇಕಾಗಿದೆ.

ಪಾಲಿಸ್ಟೈರೀನ್ ಬಳಸಿ ಥರ್ಮೋಕೋಲ್ ಉತ್ಪಾದಿಸಲಾಗುತ್ತದೆ. ಒಮ್ಮೆ ಬಳಸಿದ ಥರ್ಮೋಕೋಲ್‌ನ್ನು ಮತ್ತೆ ಥರ್ಮೋಕೋಲ್ ಉತ್ಪಾದನೆಯಲ್ಲಿ ಬಳಸಲು ದುಬಾರಿಯಾಗುತ್ತದೆ ಮತ್ತು ಪುರ್ನಬಳಕೆಯ ವಿಧಾನ ಕೂಡ ಸಂಕೀರ್ಣವಾಗಿದೆ. ನೈಸರ್ಗಿಕವಾಗಿ ಥರ್ಮೋಕೋಲ್ ತ್ಯಾಜ್ಯವು ಸಂಸ್ಕರಣೆಯಾಗದ ಕಾರಣ, ವಿಶ್ವದಾದಂತ್ಯ ಹರಡಿರುವ ಟನ್‌ಗಟ್ಟಲೆ ಥರ್ಮೋಕೋಲ್ ತ್ಯಾಜ್ಯದಿಂದ ಪರಿಸರ ಮಾಲಿನ್ಯದ ಸಮಸ್ಯೆ ಉಂಟಾಗುತ್ತಿದೆ.

ಥರ್ಮೋಕೋಲ್‌ನಲ್ಲಿ ಕ್ಯಾನ್ಸರ್‌ಗೆ ಕಾರಣವಾಗುವ ಅಂಶಗಳಿರುವುದು 2002, 2014 ಈ ವರ್ಷಗಳಲ್ಲಿ ಅಂತರರಾಷ್ಟ್ರೀಯ ವಿಜ್ಞಾನಿಗಳು ನಡೆಸಿರುವ ಅಧ್ಯಯನಗಳಲ್ಲಿ ಬಹಿರಂಗವಾಗಿದೆ. ದೀರ್ಘಕಾಲ ಥರ್ಮೋಕೋಲ್ ಉತ್ಪನ್ನಗಳನ್ನು ಬಳಸುವುದರಿಂದ ರಕ್ತದ ಕ್ಯಾನ್ಸರ್ ಮೊದಲಾದ ಕಾಯಿಲೆಗಳು ಬರುವ ಸಾಧ್ಯತೆ ಇದೆ ಎಂದು ವಿಜ್ಞಾನಿಗಳು ಎಚ್ಚರಿಸಿದ್ದಾರೆ.

ಕೆಲವು ಕಡೆ ಥರ್ಮೋಕೋಲ್ ತ್ಯಾಜ್ಯವನ್ನು ಸುಡಲಾಗುತ್ತಿದೆ. ಆದರೆ ಹೀಗೆ ಮಾಡುವುದರಿಂದ ಹಾನಿಕಾರಕ ಸಿ.ಎಫ್.ಸಿ. ಅನಿಲಗಳು ಬಿಡುಗಡೆಯಾಗುತ್ತವೆ. ಅದಲ್ಲದೆ ಥರ್ಮೋಕೋಲ್ ಪೂರ್ಣವಾಗಿ ಬೂದಿಯಾಗುವುದಿಲ್ಲ. ಡಾಂಬರಿನಂತಹ ವಸ್ತು ಕೊನೆಯಲ್ಲಿ ಉಳಿಯುತ್ತದೆ ಮತ್ತು ಕೆಟ್ಟ ದುರ್ನಾತವನ್ನು ಬೀರುತ್ತದೆ. ಆದ್ದರಿಂದ ಯಾವ ಕಾರಣಕ್ಕೂ ಥರ್ಮೋಕೋಲ್ ತ್ಯಾಜ್ಯವನ್ನು ಸುಡುವ ಕೆಲಸ ಮಾಡಬೇಡಿ ಎಂದು ವಿಜ್ಞಾನಿಗಳು ಎಚ್ಚರಿಸಿದ್ದಾರೆ.

ಥರ್ಮೋಕೋಲ್ ಮಾಡಿದ ತಟ್ಟೆ, ಲೋಟ, ಚಮಚಗಳನ್ನು ಆಹಾರ-ಪಾನೀಯಗಳ ಸೇವನೆಗಾಗಿ ಬಳಸುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಇವುಗಳನ್ನು ಉಪಯೋಗಿಸಿ, ಕಸದ ಬುಟ್ಟಿಗೆ ಬಿಸಾಡಿದರೆ ಆಯಿತು, ತೊಳೆಯ ಬೇಕು ಎನ್ನುವ ಸಮಸ್ಯೆ ಇಲ್ಲ ಎನ್ನುವುದು ಒಂದು ಕಾರಣವಿರಬಹುದು. ಆದರೆ ಇಂತಹ ಉತ್ಪನ್ನಗಳನ್ನು ಬಳಸಿ ಆಹಾರಗಳನ್ನು ಅಥವಾ ಟೀ, ಕಾಫಿ ಮೊದಲಾದ ಪಾನೀಯಗಳನ್ನು ಸೇವಿಸಿದಾಗ ಥರ್ಮೋಕೋಲ್ ಹಾನಿಕಾರಕ ರಾಸಾಯನಿಕಗಳು ನಮ್ಮ ದೇಹವನ್ನು ಸೇರುತ್ತವೆ. ವಯಸ್ಕರಲ್ಲಿ ಸಂತಾನ ಸಮಸ್ಯೆಯನ್ನುಂಟುಮಾಡಿದರೆ, ಮಕ್ಕಳಲ್ಲಿ ಇದು ದೀರ್ಘಕಾಲಿನ ಮಾನಸಿಕ ಮತ್ತು ದೈಹಿಕ ಅನಾರೋಗ್ಯ ಸಮಸ್ಯೆಯನ್ನು ಉಂಟುಮಾಡಬಲ್ಲದು. ಕೆಲವರು ಥರ್ಮೋಕೋಲ್ ಡಬ್ಬಗಳಲ್ಲಿರುವ ಆಹಾರವನ್ನು, ಅದೇ ಡಬ್ಬದಲ್ಲಿರುವಂತೆ ಮತ್ತೆ ಬಿಸಿ ಮಾಡುತ್ತಾರೆ. ಇದರಿಂದಾಗಿ ಆರೋಗ್ಯಕ್ಕೆ ಹೆಚ್ಚು ಹಾನಿಯಾಗುತ್ತದೆ.

ಥರ್ಮೋಕೋಲ್ ಬಳಸಿ ಕಲಾಕೃತಿಗಳನ್ನು ತಯಾರಿಸುವವರು, ಕೃತಕ ಚಾವಣಿ ನಿರ್ಮಿಸುವವರು, ಶಬ್ದನಿರೋಧಕ ವ್ಯವಸ್ಥೆ ಮೊದಲಾದ ಕೆಲಸಗಳನ್ನು ಮಾಡುವವರು ಎಚ್ಚರಿಕೆ ವಹಿಸಬೇಕು. ಥರ್ಮೋಕೋಲ್ ಕತ್ತರಿಸುವಾಗ ಉಂಟಾಗುವ ಸೂಕ್ಷ್ಮಕಣಗಳು ಕಣ್ಣು, ಚರ್ಮ, ಶ್ವಾಸಕೋಶ, ಜೀರ್ಣಾಂಗ, ಲಿವರ್, ಮೂತ್ರಪಿಂಡ ಮತ್ತು ನರಮಂಡಲಗಳಿಗೆ ಹಾನಿ ಮಾಡಿರುವ ಉದಾಹರಣೆಗಳಿವೆ. ಹೀಗಿರುವಾಗ ಥರ್ಮೋಕೋಲ್ ಉತ್ಪನ್ನಗಳು, ಆಟಿಕೆಗಳನ್ನು ನಿಮ್ಮ ಮಕ್ಕಳಿಗೆ ಕೊಡುವ ಮೊದಲು ಒಂದು ಬಾರಿ ಯೋಚಿಸಿ.

ಥರ್ಮೋಕೋಲ್ ತ್ಯಾಜ್ಯವನ್ನು ಬಳಸಿ ಸಿ.ಡಿ. ಕವರ್‌ಗಳು. ಫೋಟೊ ಫ್ರೇಮ್‌ಗಳು ಮುಂತಾದವುಗಳನ್ನು ತಯಾರಿಸುವ ಯೋಜನೆಗಳನ್ನು ಪುಣೆ, ಥಾಣೆ ಮೊದಲಾದ ಕಡೆಯ ಪುರಸಭೆ ಅಧಿಕಾರಿಗಳು ಪ್ರಾರಂಭಿಸಿದರು. ಪ್ರತಿದಿನ ಒಂದು ಟನ್ ಥರ್ಮೋಕೋಲ್ ತ್ಯಾಜ್ಯವನ್ನು ಈ ರೀತಿ ಪರಿವರ್ತಿಸಬಹುದು; ಹೀಗೆ ತಯಾರಾದ ಉತ್ಪನ್ನಗಳಿಂದ ಸ್ಥಳೀಯ ಸಂಸ್ಥೆಗೆ ಆದಾಯ ದೊರೆಯುತ್ತದೆ ಎಂದು ಹೇಳಲಾಯಿತು. ತ್ಯಾಜ್ಯ ಥರ್ಮೋಕೋಲ್ ಬಳಸಿ ಉದ್ಯಮಗಳು ಬಳಸುವ ಅಂಟು ತಯಾರಿಸಬಹುದು ಎಂದು ಕೆಲವರು ಪ್ರಾತ್ಯಕ್ಷಿಕೆಗಳ ಮೂಲಕ ತೋರಿಸಿದ್ದಾರೆ. ಆದರೆ ನಮ್ಮ ದೇಶದ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಬೆಟ್ಟಗಳಷ್ಟು ಇರುವ ಥರ್ಮೋಕೋಲ್ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸದಿದ್ದರೆ, ಜನ ಮತ್ತು ಪರಿಸರದ ಮೇಲಾಗುವ ಹಾನಿ ಹೆಚ್ಚಾಗುತ್ತದೆ. ಸಾಧ್ಯವಾದಷ್ಟು ಥರ್ಮೋಕೋಲ್‌ನಂಥ ಉತ್ಪನ್ನಗಳ ಬಳಕೆಯನ್ನು ಸಾರ್ವಜನಿಕರು ಕಡಿಮೆ ಮಾಡುವುದರಿಂದ ಈ ಸಮಸ್ಯೆ ಸ್ವಲ್ಪ ಮಟ್ಟಿಗಾದರೂ ಕಡಿಮೆ ಮಾಡಲು ಸಾಧ್ಯವಿದೆ. ❖





ಪರಿಸರಸ್ನೇಹಿಯಲ್ಲ

ಇದರಲ್ಲಿರುವ ಹೈಡ್ರೋಫ್ಲೋರೋ ಕಾರ್ಬನ್‌ಗಳು (ಎಚ್.ಎಫ್.ಸಿ.), ಬೆನ್‌ಜೀನ್ ರಾಸಾಯನಿಕಗಳು ಆರೋಗ್ಯ ಮತ್ತು ಪರಿಸರಕ್ಕೆ ಹಾನಿಯನ್ನು ಉಂಟುಮಾಡುತ್ತವೆ. ಇನ್ನು ಡೈ-ಆಕಿನ್ಸ್‌ಗಳು ತಾಯಿ ಹೊಟ್ಟೆಯಲ್ಲಿರುವ ಭ್ರೂಣದ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ; ರೋಗನಿರೋಧಕ ಶಕ್ತಿ ಮತ್ತು ಹಾರ್ಮೋನ್‌ಗಳಲ್ಲಿ ವ್ಯತ್ಯಯವನ್ನು ಉಂಟುಮಾಡುತ್ತವೆ.

ಕೈಗಾ ಅಣು ವಿದ್ಯುತ್ ಸ್ಥಾವರದ 5, 6ನೇ ಘಟಕ: ಎನ್‌ಜಿಟಿ ದಕ್ಷಿಣ ವಲಯ ಪೀಠ ಆದೇಶ

ಪರಿಸರ ಅನುಮೋದನೆ ಅಮಾನತು

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಕೈಗಾ ಅಣು ವಿದ್ಯುತ್ ಸ್ಥಾವರದ ಐದು ಹಾಗೂ ಆರನೇ ಘಟಕಗಳಿಗೆ ನೀಡಿರುವ ಪರಿಸರ ಅನುಮೋದನೆಯನ್ನು ಅಮಾನತುಗೊಳಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ದಕ್ಷಿಣ ವಲಯ ಪೀಠ ಆದೇಶ ಹೊರಡಿಸಿದೆ.

ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಯೋಜನೆ ಅನುಷ್ಠಾನ ಮಾಡಲಾಗುತ್ತದೆ ಎಂದು ಆರೋಪಿಸಿ 'ಕೈಗಾ ಅಣು ವಿದ್ಯುತ್ ಸ್ಥಾವರದ ಐದು ಹಾಗೂ ಆರನೇ ಘಟಕ ವಿರೋಧಿ ಹೋರಾಟ ಸಮಿತಿ'ಯು ಎನ್‌ಜಿಟಿ ಮೆಟ್ಟಿಲೇರಿತ್ತು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ರಾಮಕೃಷ್ಣನ್ ಹಾಗೂ ಡಾ. ಸತ್ಯಗೋಪಾಲ್ ಕೊರ್ಲಪಾಟಿ ಅವರನ್ನು ಒಳಗೊಂಡ ಪೀಠ ಈ ಆದೇಶ ಹೊರಡಿಸಿದೆ.



ಕೈಗಾ ಅಣು ವಿದ್ಯುತ್ ಸ್ಥಾವರ

ಗುಜರಾತ್, ಮಹಾರಾಷ್ಟ್ರ, ಗೋವಾ, ಕರ್ನಾಟಕ, ಕೇರಳ, ತಮಿಳುನಾಡು ರಾಜ್ಯಗಳಲ್ಲಿ ವ್ಯಾಪಿಸಿರುವ ಪಶ್ಚಿಮ ಘಟ್ಟ ಪ್ರದೇಶದ 56,825 ಚದರ ಕಿ.ಮೀ ವಿಸ್ತೀರ್ಣವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಿ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಈಗಾಗಲೇ ಕರಡು ಅಧಿಸೂಚನೆ ಹೊರಡಿಸಿದೆ. ಕರ್ನಾಟಕದಲ್ಲೇ 20,668 ಚದರ ಕಿ.ಮೀ. ವಿಸ್ತೀರ್ಣವನ್ನು ಪರಿಸರ ಸೂಕ್ಷ್ಮವೆಂದು ಗುರುತಿಸಲಾಗಿದೆ. ಕೈಗಾ ಗ್ರಾಮ ಸಹ ಪರಿಸರ ಸೂಕ್ಷ್ಮ ಪ್ರದೇಶದೊಳಗೆ ಇದೆ ಎಂಬುದು ಅರ್ಜಿದಾರರ ವಾದ. ಈ ಎರಡು ಘಟಕಗಳ ಪ್ರದೇಶ ಪರಿಸರ ಸೂಕ್ಷ್ಮ ಪ್ರದೇಶದೊಳಗೆ ಬರುತ್ತದೆಯೆ ಎಂಬುದನ್ನು ಸಚಿವಾಲಯ ಪರಿಶೀಲಿಸಬೇಕು. ಜತೆಗೆ, ಯೋಜನೆ ಅನುಷ್ಠಾನದಿಂದ ಕೈಗಾ ಗ್ರಾಮದ ಮೇಲೆ ಏನಾದರೂ ಪರಿಣಾಮ ಆಗಲಿದೆಯೇ ಎಂಬ ಬಗ್ಗೆ ಪರಿಶೀಲಿಸಬೇಕು ಎಂದು ನ್ಯಾಯಪೀಠ ತಿಳಿಸಿದೆ.

ಘಟಕಗಳ ಆರಂಭದಿಂದ ಕಾಳಿ ನದಿ, ಅದರ ಆಸುಪಾಸಿನ ಮೇಲಾಗುವ ಪರಿಣಾಮ, ನೀರಿನ ಲಭ್ಯತೆ, ನದಿ ತೀರದ ಜನರ ಮೇಲಾಗುವ ಪರಿಣಾಮಗಳ ಕುರಿತು ಅಧ್ಯಯನ ವರದಿಯನ್ನು ಸಲ್ಲಿಸಬೇಕು. ಈ ಯೋಜನೆಯಿಂದ ಪರಿಸರ ಸೂಕ್ಷ್ಮ ಪ್ರದೇಶದ ಮೇಲಾಗುವ ತೊಂದರೆ, ಘಟಕಗಳಿಂದ ಬರುವ ಅಣು ವಿಕಿರಣಗಳಿಂದ ಜನರ ಆರೋಗ್ಯದ ಮೇಲಾಗುವ ಪರಿಣಾಮದ ಬಗ್ಗೆಯೂ ಅಧ್ಯಯನ ವರದಿ ಸಲ್ಲಿಸಬೇಕು. ಈ ಪ್ರಕ್ರಿಯೆಗಳನ್ನು ಆರು ತಿಂಗಳ ಒಳಗೆ ಪೂರ್ಣಗೊಳಿಸಬೇಕು. ಬಳಿಕ ಒಂದು ತಿಂಗಳಲ್ಲಿ ಪರಿಸರ ಅನುಮೋದನೆ ನೀಡಬೇಕೇ ಬೇಡವೇ ಎಂಬ ಬಗ್ಗೆ ಕೇಂದ್ರ ಪರಿಸರ ಸಚಿವಾಲಯ ತೀರ್ಮಾನ ನಿರ್ಣಯಿಸಬೇಕು ಎಂದೂ ಪೀಠ ತಿಳಿಸಿದೆ.

ಪರಿಸರ ಸೂಕ್ಷ್ಮ ಪ್ರದೇಶದ ಅಧಿಸೂಚನೆ ಕರಡು ಹಂತದಲ್ಲಿದ್ದು, ಈ ಬಗ್ಗೆ ಕೇಂದ್ರ ತೀರ್ಮಾನ ತೆಗೆದುಕೊಂಡಿಲ್ಲ. ಕೈಗಾದಲ್ಲಿ 1992ರಿಂದ ಘಟಕ ಇದೆ. ಈಗ ಯೋಜನೆಯನ್ನು ವಿಸ್ತರಣೆ ಮಾಡಲಾಗುತ್ತಿದೆ. ಎಲ್ಲ ಆಯಾಮಗಳನ್ನು ಪರಿಶೀಲಿಸಿ ಪರಿಸರ ಸಚಿವಾಲಯ ಪರಿಸರ ಅನುಮೋದನೆ ನೀಡಿದೆ ಎಂದು ನ್ಯೂಕ್ಲಿಯರ್ ಪವರ್ ಕಾರ್ಪೊರೇಷನ್ ಆಫ್ ಇಂಡಿಯಾದ ಪರ ವಕೀಲರು ವಾದಿಸಿದರು.

ಒಟ್ಟು ₹ 21 ಸಾವಿರ ಕೋಟಿ ವೆಚ್ಚದ ಯೋಜನೆ ಇದಾಗಿದೆ. ಇಲ್ಲಿ ತಲಾ 700 ಮೆಗಾವಾಟ್ ಸಾಮರ್ಥ್ಯದ ಎರಡು ಘಟಕಗಳ ಸ್ಥಾಪನೆಗೆ ಅಣುಶಕ್ತಿ ನಿಯಂತ್ರಣ ಮಂಡಳಿಯು ಅನುಮತಿ ನೀಡಿದೆ. ಕೇಂದ್ರ ಸಚಿವ ಸಂಪುಟವು 2017ರಲ್ಲೇ ಅನುಮೋದಿಸಿದೆ. ಈ ಘಟಕಗಳ ನಿರ್ಮಾಣ ಪೂರ್ಣಗೊಂಡ ಬಳಿಕ ಕೈಗಾದಲ್ಲಿ ಒಟ್ಟು 2,280 ಮೆಗಾವಾಟ್ ವಿದ್ಯುತ್ ಉತ್ಪಾದನೆಯಾಗಲಿದೆ. ಪ್ರಸ್ತುತ ತಲಾ 220 ಮೆಗಾವಾಟ್ ಸಾಮರ್ಥ್ಯದ ನಾಲ್ಕು ಘಟಕಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, 880 ಮೆಗಾವಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ.

ಕನ್ನಡ ಅಭಿವೃದ್ಧಿ ಮಸೂದೆ ಮರು ಮಂಡಿಸಿ: ನಾಗಾಭರಣ

ಬೆಂಗಳೂರು: ಕನ್ನಡ ಸಮಗ್ರ ಅಭಿವೃದ್ಧಿ ಮಸೂದೆಯಲ್ಲಿ ಲೋಪಗಳಿದ್ದು, ಅದನ್ನು ಬದಲಾವಣೆಗಳೊಂದಿಗೆ ವಿಧಾನಮಂಡಲದಲ್ಲಿ ಮತ್ತೆ ಮಂಡಿಸಿ, ಅಂಗೀಕಾರ ಪಡೆಯಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಆಗ್ರಹಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕನ್ನಡ ಭಾಷೆ ಬಳಕೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಲೋಪ ಎಸಗುವವರ ವಿರುದ್ಧ ಕ್ರಮ ಜರುಗಿಸುವ ಮತ್ತು ದಂಡನೆ ವಿಧಿಸುವ ಅಧಿಕಾರವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ನೀಡುವಂತೆ ಕರಡು ಮಸೂದೆ ರೂಪಿಸಿ ಸಲ್ಲಿಸಲಾಗಿತ್ತು. ಅದನ್ನು ಬದಲಿಸಿ ಮುಖ್ಯ ಕಾರ್ಯದರ್ಶಿಗೆ ನೀಡಿರುವುದು ಸರಿಯಲ್ಲ' ಎಂದರು.

'ಈಗ ಅಂಗೀಕಾರ ಪಡೆದಿರುವ ಮಸೂದೆಯಲ್ಲಿ ಕಠಿಣ ಕ್ರಮ ಕೈಗೊಳ್ಳುವ ಅಧಿಕಾರ ಕೊಟ್ಟಂತೆ ಆಗಿದೆ. ಕನ್ನಡ ಮತ್ತು ಸಂಸ್ಕೃತಿ ಸಚಿವರಿಗೆ ಅಧಿಕಾರ ನೀಡಲಾಗಿದೆ. ಅವರು ಕಾರ್ಯನಿರ್ವಹಿಸುತ್ತಲೇ ಈ ಕೆಲಸ ಮಾಡುವುದು ಕಷ್ಟ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನು ನಾಮನಿರ್ದೇಶಿತ ಕನ್ನಡ ಅಭಿವೃದ್ಧಿ ಜಾರಿ ನಿರ್ದೇಶನಾಲಯದ ಸದಸ್ಯರನ್ನಾಗಿ ಮಾಡಲಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಕನ್ನಡದ ವಿಚಾರದಲ್ಲಿ ಕಾನೂನು ಉಲ್ಲಂಘನೆ ಮಾಡುವವರಿಗೆ ಜೈಲು ಶಿಕ್ಷೆ ವಿಧಿಸುವ ಪ್ರಸ್ತಾವವೂ ನಾವು ಸಲ್ಲಿಸಿದ ಕರಡಿನಲ್ಲಿತ್ತು. ಅದನ್ನು ಬದಲಾಯಿಸಿ ರಾಜಿ ಮಾಡುವಂತಹ ಅಂಶ ಸೇರಿಸಲಾಗಿದೆ. ಆ ಮೂಲಕ ಕಾಯ್ದೆಯ ತೀವ್ರತೆಯನ್ನೇ ಕಡಿಮೆ ಮಾಡಲಾಗಿದೆ' ಎಂದು ದೂರಿದರು.

ರೈಲ್ವೆ ಹಳಿ ಮೇಲೆ ಶವ ಎಸೆಯಲು ಬಂದಿದ್ದವರು ಪೊಲೀಸರ ವಶಕ್ಕೆ

ಹಾಸನ: ಕೊಲೆ ಮಾಡಿ ಶವವನ್ನು ಶಾಂತಿಗ್ರಾಮ ಬಳಿಯ ರೈಲ್ವೆ ಹಳಿ ಮೇಲೆ ಎಸೆಯಲು ಬಂದಿದ್ದ ವೇಳೆ ಟೆಂಪೊ ವಾಹನದೊಂದಿಗೆ ಉರುಳಿ ಬಿದ್ದಿದ್ದ, ಮೂವರು ಆರೋಪಿಗಳನ್ನು ಪೊಲೀಸರು ಮಂಗಳವಾರ ಮಧ್ಯಾಹ್ನ ವಶಕ್ಕೆ ಪಡೆದರು.

'ವಾಹನದಲ್ಲಿದ್ದ ಶವ ಆನಂದ್ ಎಂಬುವವರದ್ದು ಎಂದು ಗುರುತಿಸಲಾಗಿದೆ. ಆನಂದ್ ಶಾಂತಿಗ್ರಾಮದ ಗಾಡೆನಹಳ್ಳಿ ಡಾಬಾದಲ್ಲಿ ಕೆಲಸ ಮಾಡುತ್ತಿದ್ದು, ಆರೋಪಿಗಳು ಡಾಬಾ ಪಕ್ಕದ ಪ್ರದೇಶದ ನಿವಾಸಿಗಳೆಂದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ' ಎಂದು ಎಸ್ಪಿ ಹರಿರಾಂ ಶಂಕರ್ ತಿಳಿಸಿದ್ದಾರೆ.

'ಆಂಧ್ರಪ್ರದೇಶದ ಮಹಬೂಬ್‌ನಗರದ ರಘು, ಗದಗ ಜಿಲ್ಲೆಯ ಶಶಿ, ಹೊಸಕೋಟೆಯ ರವಿಕುಮಾರ್, ಬಾಗಲಕೋಟೆಯ ರಾಜಾ ಪಾಷಾ ಬಂಧಿತರು. ಕಾರಿನಲ್ಲಿದ್ದ ಮೊದಲ ಮೂವರನ್ನು ವಶಕ್ಕೆ ಪಡೆಯಲಾಗಿದ್ದು, ಅವರ ನೀಡಿದ ಮಾಹಿತಿಯಂತೆ ರಾಜಾ ಪಾಷಾನನ್ನು ಬಂಧಿಸಲಾಗಿದೆ' ಎಂದು ಎಸ್ಪಿ ತಿಳಿಸಿದ್ದಾರೆ.



ಹಾಸನ ತಾಲ್ಲೂಕಿನ ಶಾಂತಿಗ್ರಾಮದ ಬಳಿ ರೈಲ್ವೆ ಹಳಿಯ ಮೇಲೆ ಉರುಳಿದ ಕಾರನ್ನು ಪೊಲೀಸರು ಪರಿಶೀಲಿಸಿದರು

ಆರೋಪಿಗಳು ಮೃತದೇಹವನ್ನು ಕಾರಿನಲ್ಲಿ ತಂದು, ರೈಲ್ವೆ ಹಳಿ ಮೇಲೆ ಎಸೆಯಲು ಪ್ರಯತ್ನಿಸುತ್ತಿದ್ದರು. ಆ ವೇಳೆ ಮೇಲಿನಿಂದ ಉರುಳಿದ ಕಾರು, ಶವದ ಸಮೇತ ಹಳಿಯ ಮೇಲೆ ಬಿದ್ದಿತ್ತು. ಸ್ಥಳೀಯರು ಮಾಹಿತಿ ನೀಡಿದ ಬಳಿಕ ಸ್ಥಳಕ್ಕೆ ಬಂದ ಪೊಲೀಸರು, ಕಾರಿನಲ್ಲಿ ಸಿಲುಕಿದ್ದ ಆರೋಪಿಗಳನ್ನು ವಶಕ್ಕೆ ಪಡೆದರು. ಶಾಂತಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಿಲ್ಲಾ ಪಂಚಾಯಿತಿ ಸದಸ್ಯರ ಸಂಖ್ಯೆ ಹೆಚ್ಚಳ: ಅಧಿಸೂಚನೆ

ಬೆಂಗಳೂರು: 'ಇನ್ನು ಮುಂದೆ 7 ಲಕ್ಷ ಜನಸಂಖ್ಯೆ ಇರುವ ಜಿಲ್ಲೆಯಲ್ಲಿ ಕನಿಷ್ಠ 25 ಜಿಲ್ಲಾ ಪಂಚಾಯಿತಿ ಸದಸ್ಯ ಸ್ಥಾನ, 7 ಲಕ್ಷದಿಂದ 9.50 ಲಕ್ಷ ಜನಸಂಖ್ಯೆ ಇರುವ ಜಿಲ್ಲೆಗಳಲ್ಲಿ 28 ಜಿಲ್ಲಾ ಪಂಚಾಯಿತಿ ಸದಸ್ಯ ಸ್ಥಾನಗಳಿಗೆ ಅವಕಾಶ ಕಲ್ಪಿಸುವ 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಕಾಯ್ದೆ'ಯ ಅಧಿಸೂಚನೆ ಹೊರಡಿಸಲಾಗಿದೆ.

ಸುಗ್ರೀವಾಜ್ಞೆ ಮೂಲಕ ಕಾಯ್ದೆ ಜಾರಿಯಲ್ಲಿತ್ತು. ಇತ್ತೀಚೆಗೆ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ತಿದ್ದುಪಡಿ ಮಸೂದೆಗೆ ಅಂಗೀಕಾರ ದೊರೆತಿದ್ದು, ಸುಗ್ರೀವಾಜ್ಞೆಯನ್ನು ನಿರಸನಗೊಳಿಸಲಾಯಿತು.

ತಿದ್ದುಪಡಿಯಿಂದಾಗಿ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಒಟ್ಟು ಸದಸ್ಯ ಸ್ಥಾನಗಳ ಸಂಖ್ಯೆ ಗಣನೀಯವಾಗಿ ಹೆಚ್ಚಲಿದೆ.

ಎರಡು ಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆ ಹೊಂದಿದ ತಾಲ್ಲೂಕುಗಳಲ್ಲಿ ಕನಿಷ್ಠ 12 ಚುನಾಯಿತ ಸದಸ್ಯರು ಇರಬೇಕು ಎಂದು ನಿಯಮ ರೂಪಿಸಿ ಕಾಯ್ದೆಗೆ ಕಳೆದ ಮಾರ್ಚ್‌ನಲ್ಲಿ ತಿದ್ದುಪಡಿ ಮಾಡಲಾಗಿತ್ತು. ಆದರೆ, 2 ಲಕ್ಷಕ್ಕಿಂತ ಸ್ವಲ್ಪ ಹೆಚ್ಚು ಜನಸಂಖ್ಯೆ ಇರುವ ತಾಲ್ಲೂಕು ಪಂಚಾಯಿತಿಗಳಲ್ಲಿ ಎಷ್ಟು ಸದಸ್ಯ ಸ್ಥಾನ ಇರಬೇಕೆಂದು ನಿರ್ಣಯಿಸಲು ಸಮಸ್ಯೆ ಆಗುತ್ತಿತ್ತು. ಹೊಸ ತಿದ್ದುಪಡಿಯಿಂದಾಗಿ 2.30 ಲಕ್ಷ ಜನಸಂಖ್ಯೆಗೆ 12 ಚುನಾಯಿತ ಸದಸ್ಯರು ಇರಲಿದ್ದಾರೆ. ಅಲ್ಲದೆ, ಒಂದು ಜಿಲ್ಲಾ ಪಂಚಾಯಿತಿಗೆ ತಾಲ್ಲೂಕುಗಳಿಂದ ಆಯ್ಕೆಯಾಗುವ ಸದಸ್ಯರ ಸಂಖ್ಯೆ ಪ್ರತಿ ಜಿಲ್ಲೆಯಲ್ಲಿ 20 ಇರಬೇಕು ಎಂದು ನಿಗದಿಪಡಿಸಲಾಗಿತ್ತು. ಆದರೆ, ಕಡಿಮೆ ಜನಸಂಖ್ಯೆ ಇರುವ ಜಿಲ್ಲೆಗಳಲ್ಲಿ ಸದಸ್ಯ ಸ್ಥಾನ ನಿಗದಿಪಡಿಸಲು ಸಮಸ್ಯೆ ಆಗುತ್ತಿತ್ತು.

ಹಾಲಿ ಇರುವ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಕಾಯ್ದೆ ಸೆಕ್ಷನ್ 121 ಪ್ರಕಾರ, 2 ಲಕ್ಷ ಗ್ರಾಮೀಣ ಜನಸಂಖ್ಯೆ ಇರುವ ಪ್ರತಿ ತಾಲ್ಲೂಕುಗಳಲ್ಲಿ ಪ್ರತಿ 12 ಸಾವಿರಕ್ಕೆ ಕಡಿಮೆ ಇಲ್ಲದಂತೆ ಒಬ್ಬ ತಾಲ್ಲೂಕು ಪಂಚಾಯಿತಿ ಸದಸ್ಯ ಇರಬೇಕು. ಒಂದು ಲಕ್ಷ ಮೀರಿದ ಮತ್ತು 2 ಲಕ್ಷದ ಒಳಗೆ ಜನಸಂಖ್ಯೆ ಇರುವ ತಾಲ್ಲೂಕುಗಳಲ್ಲಿ ಪ್ರತಿ 10 ಸಾವಿರ ಜನಸಂಖ್ಯೆಗೆ ಒಬ್ಬರಂತೆ ಕನಿಷ್ಠ 11 ಚುನಾಯಿತ ಸದಸ್ಯರಿರಬೇಕು. 50 ಸಾವಿರದಿಂದ 1 ಲಕ್ಷ ಜನಸಂಖ್ಯೆಗೆ 9, 50 ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ತಾಲ್ಲೂಕುಗಳಲ್ಲಿ 7 ಸದಸ್ಯರು ಇರಬೇಕು. ಸೆಕ್ಷನ್ 160 ರ ಪ್ರಕಾರ, ಒಂದು ಜಿಲ್ಲೆಯಲ್ಲಿ 35 ರಿಂದ 45 ಸಾವಿರ ಜನಸಂಖ್ಯೆಗೆ ಒಬ್ಬರಂತೆ ಒಂದು ಜಿಲ್ಲೆಯಲ್ಲಿ ಕನಿಷ್ಠ 20 ಜಿಲ್ಲಾ ಪಂಚಾಯಿತಿ ಸದಸ್ಯರು ಇರಬೇಕು.



ಪಲ್ಲಕ್ಕಿ ಉತ್ಸವ...

ಬೆಳಗಾವಿ ಜಿಲ್ಲೆಯ ನಿಪ್ಪಾಣಿ ತಾಲ್ಲೂಕಿನ ಕುರ್ಲಿ– ಅಪ್ಪಾಚಿವಾಡಿ ಗ್ರಾಮಗಳ ಸಂತ ಹಾಲಸಿದ್ಧನಾಥ ಮಹಾರಾಜರ ಜಾತ್ರೆ ಮಂಗಳವಾರ ವೈಭವದಿಂದ ನೆರವೇರಿತು. ಕುರ್ಲಿಯಿಂದ ಅಪ್ಪಾಚಿವಾಡಿವರೆಗೆ ನಡೆದ ಪಲ್ಲಕ್ಕಿ ಮಹೋತ್ಸವದಲ್ಲಿ ರಾಜ್ಯವೂ ಸೇರಿದಂತೆ ಮಹಾರಾಷ್ಟ್ರ, ಗೋವಾ ಭಾಗದ ಭಕ್ತರು ಅಪಾರ ಸಂಖ್ಯೆಯಲ್ಲಿ ಸೇರಿದ್ದರು

ಸಿ.ಟಿ.ರವಿ ವಿರುದ್ಧ ಪ್ರತಿಭಟನೆ

ತಾಳಿಕೋಟೆ: ಖಾಸಗಿ ವಾಹಿನಿಯೊಂದರ ಸಂದರ್ಶನದಲ್ಲಿ ರಾಜಪೂತ ಜನಾಂಗದದ ಕುರಿತು ಅವಹೇಳನಕಾರಿಯಾಗಿ ಮಾತನಾಡಿದ ಸಿ.ಟಿ.ರವಿ ಅವರನ್ನು ಶಾಸಕ ಸ್ಥಾನದಿಂದ ಅಮಾನತು ಮಾಡುವಂತೆ ಒತ್ತಾಯಿಸಿ ಸ್ಥಳೀಯ ರಾಜಪೂತ ಸಮಾಜದ ಕ್ಷೇಮಾಭಿವೃದ್ಧಿ ಸಂಘದ ನೇತೃತ್ವದಲ್ಲಿ ಸಮಾಜದವರು ಮಂಗಳವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು.

ರಾಜಪೂತಗಲ್ಲಿ ಅಂಬಾಭವಾನಿ ಮಂದಿರದಿಂದ ಖಾಸ್ಗತೇಶ್ವರಮಠದ ರಸ್ತೆ, ಕತ್ತರಿ ಬಜಾರ, ಎಂ.ಜಿ.ರೋಡ್, ಶಿವಾಜಿ ವೃತ್ತದ ಮೂಲಕ ಸಾಗಿದ ಪ್ರತಿಭಟನಕಾರರು ರಾಣಾ ಪ್ರತಾಪ ಸಿಂಹ ವೃತ್ತದ ಬಳಿ ಸೇರಿದರು. ಅಲ್ಲಿ ಸಿ.ಟಿ.ರವಿ ಪ್ರತಿಕೃತಿ ದಹನ ಮಾಡಿದರು.

'ದೇಶದ ಸ್ವಾತಂತ್ರ್ಯದ ಹೋರಾಟದಲ್ಲಿ ರಾಜಪೂತ ಜನಾಂಗದ ಯಾವುದೇ ಕೊಡುಗೆ ಇಲ್ಲವೆಂದು ಸಿ.ಟಿ. ರವಿ ಇತ್ತೀಚೆಗೆ ಖಾಸಗಿ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ. 1857ರ ಸ್ವಾತಂತ್ರ್ಯ ಸಂಗ್ರಾಮದ ಮೊದಲ ಯುದ್ಧದಲ್ಲಿ ರಾಜಪೂತ ಸಮಾಜದ ಜಗದೀಶಪುರದ ಕುವರಸಿಂಗ್ ಅಹುವಾ ಸಂಸ್ಥಾನದ ಕುಶಾಲಸಿಂಗ ಠಾಕೂರ ಹಾಗೂ ಕಾಲಕಂಕಾರ ಸಂಸ್ಥಾನದ ಲಾಲಪ್ರತಾಪ ಸಿಂಹ ಅವರ ಬಲಿದಾನದ ಬಗ್ಗೆ ಸಿ.ಟಿ. ರವಿ ಅವರಿಗೆ ಅರಿವು ಇಲ್ಲ. ಅವರಿಗೆ ಇತಿಹಾಸದ ಪರಿಜ್ಞಾನ ಇಲ್ಲ' ಎಂದು ಸುರೇಶ ಹಜೇರಿ, ವಿಜಯಸಿಂಗ ಹಜೇರಿ ಆಕ್ರೋಶ ವ್ಯಕ್ತಪಡಿಸಿದರು.

ಸಮಾಜದ ಅಧ್ಯಕ್ಷ ಹರಿಸಿಂಗ ಮೂಲಿಮನಿ ನೇತೃತ್ವದಲ್ಲಿ ವಿಶೇಷ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಹಿಂದಿ ಹೇರಿದ್ದು ಕಾಂಗ್ರೆಸ್: ಸಚಿವ ಅಶ್ವತ್ಥ ನಾರಾಯಣ

ಬೆಂಗಳೂರು: 'ಕಾಂಗ್ರೆಸ್ ಅವಧಿಯಲ್ಲಿ ತ್ರಿಭಾಷಾ ಸೂತ್ರದ ಹೆಸರಿನಲ್ಲಿ ಹಿಂದಿ ಹೇರಲಾಗಿತ್ತು. ಈಗ ಬಿಜೆಪಿ ಸರ್ಕಾರ ಅದನ್ನು ಸರಿಪಡಿಸುತ್ತಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಕೋಟಿ ಕಂಠ ಗಾಯನದ ಸಿದ್ಧತೆ ಕುರಿತು ಅಧಿಕಾರಿಗಳ ಜತೆ ಮಂಗಳವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈಗ ವಿದ್ಯಾರ್ಥಿಗಳು ತಮಗೆ ಇಷ್ಟವಾದ ಭಾಷೆಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಕಾಂಗ್ರೆಸ್ ಮಾಡಿದ ತಪ್ಪುಗಳನ್ನು ನಾವು ಸರಿಪಡಿಸುತ್ತಿದ್ದೇವೆ' ಎಂದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦
ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿದ್ದಾಗ ಮಾತ್ರವೇ ಮನಸ್ಸು ಬಳಲಿಕೆ, ಭೀತಿ ಮತ್ತು ವಿಷಾದದಿಂದ ಮುಕ್ತವಾಗಿರುತ್ತದೆ.
-ಲಿಯೊನಾರ್ಡೊ ಡಾ ವಿಂಚಿ

‘ಉಚಿತ ಕೊಡುಗೆ’ಗಳಿಗೆ ಅಂಕುಶ ಅಪಚಾರ ಮಾಡಿಕೊಂಡ ಆಯೋಗ

ಚುನಾವಣೆಯ ಸಂದರ್ಭದಲ್ಲಿ ರಾಜಕೀಯ ಪಕ್ಷಗಳು ನೀಡುವ ಭರವಸೆಗಳ ವಿಚಾರದಲ್ಲಿ ತನ್ನ ನಿಲುವನ್ನು ಬದಲಾಯಿಸುವ ಮೂಲಕ ಕೇಂದ್ರ ಚುನಾವಣಾ ಆಯೋಗವು ತನಗೆ ತಾನೇ ಅಪಚಾರ ಮಾಡಿಕೊಂಡಿದೆ. ಸುಪ್ರೀಂ ಕೋರ್ಟ್‌ನಲ್ಲಿ ಈ ಹಿಂದೆ ಒಂದು ನಿಲುವು ವ್ಯಕ್ತಪಡಿಸಿದ್ದ ಆಯೋಗವು ಈಚೆಗೆ ರಾಜಕೀಯ ಪಕ್ಷಗಳಿಗೆ ಬರೆದ ಪತ್ರದಲ್ಲಿ ಇನ್ನೊಂದು ನಿಲುವು ತಾಳಿದೆ. ಚುನಾವಣೆಯ ಸಂದರ್ಭದಲ್ಲಿ ರಾಜಕೀಯ ಪಕ್ಷಗಳು ಕೆಲವು ‘ಉಚಿತ ಕೊಡುಗೆ’ಗಳ ಭರವಸೆಗಳನ್ನು ನೀಡುವುದಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಇದನ್ನು ‘ರೇವಡಿ’ ಸಂಸ್ಕೃತಿ ಎಂದು ಕರೆದ ನಂತರದಲ್ಲಿ ಇದು ದೇಶದಲ್ಲಿ ಸಾರ್ವಜನಿಕ ಚರ್ಚೆಯ ವಸ್ತುವಾಗಿದೆ. ರಾಜಕೀಯ ಪಕ್ಷಗಳು ನೀಡುವ, ವಾಸ್ತವದಲ್ಲಿ ಈಡೇರಿಸಲು ಆಗದಂತಹ ಭರವಸೆಗಳನ್ನು ನಿಷೇಧಿಸಬೇಕು ಎಂದು ಕೋರಿ ಕೆಲವು ಅರ್ಜಿಗಳು ಸುಪ್ರೀಂ ಕೋರ್ಟ್‌ಗೆ ಸಲ್ಲಿಕೆಯಾಗಿವೆ. ಇಂತಹ ಭರವಸೆಗಳ ಬಗ್ಗೆ ಪರಿಶೀಲನೆ ನಡೆಸಲು ಸಮಿತಿಯೊಂದನ್ನು ರಚಿಸುವ ಮಾತನ್ನು ಸುಪ್ರೀಂ ಕೋರ್ಟ್ ಆಡಿತ್ತು. ಆಗ ಚುನಾವಣಾ ಆಯೋಗವು ತಾನು ಈ ಸಮಿತಿಯ ಸದಸ್ಯ ಆಗುವುದು ಸೂಕ್ತವಲ್ಲ ಎಂದು ಹೇಳಿತ್ತು. ಇಂತಹ ಭರವಸೆಗಳು ಮತದಾರ ಹಾಗೂ ರಾಜಕೀಯ ಪಕ್ಷಗಳ ನಡುವಿನ ವಿಚಾರ, ಇವು ಎಷ್ಟರಮಟ್ಟಿಗೆ ಸರಿ, ಅಥವಾ ಎಷ್ಟರಮಟ್ಟಿಗೆ ತಪ್ಪು ಎಂಬುದನ್ನು ತಾನು ತೀರ್ಮಾನಿಸುವುದು ಸೂಕ್ತವಲ್ಲ ಎಂದು ಆಯೋಗವು ಭಾವಿಸಿದ್ದು ಸರಿಯಾಗಿಯೇ ಇತ್ತು.



ಚುನಾವಣಾ ಭರವಸೆಗಳು ಹಾಗೂ ಅವುಗಳ ಪರಿಣಾಮಗಳ ಬಗ್ಗೆ ತೀರ್ಮಾನಿಸುವ ಪರಿಣತಿ, ವ್ಯವಸ್ಥೆ ಚುನಾವಣಾ ಆಯೋಗದಲ್ಲಿ ಇಲ್ಲ

ಆದರೆ ಆಯೋಗವು ಈಗ ಭಿನ್ನ ನಿಲುವು ತಾಳಿದೆ. ರಾಜಕೀಯ ಪಕ್ಷಗಳು ತಾವು ನೀಡಿದ ಭರವಸೆಯನ್ನು ಈಡೇರಿಸಲು ಸಂಪನ್ಮೂಲವನ್ನು ಹೇಗೆ ಸಂಗ್ರಹಿಸಲಾಗುತ್ತದೆ ಎಂಬುದನ್ನು ವಿವರಿಸಬೇಕು, ಇದರಿಂದಾಗಿ ಹಣಕಾಸಿನ ಸ್ಥಿತಿಯ ಮೇಲೆ ಆಗುವ ಪರಿಣಾಮ ಏನು ಎಂಬುದನ್ನು ಕೂಡ ತಿಳಿಸಬೇಕು ಎಂದು ಆಯೋಗವು ಹೇಳಿದೆ. ಇದನ್ನು ಮಾಡಲು ರಾಜಕೀಯ ಪಕ್ಷಗಳು ಚುನಾವಣಾ ಪ್ರಣಾಳಿಕೆಗಳಲ್ಲಿ ಅನುಸರಿಸಬೇಕಿರುವ ಮಾದರಿ ಏನು ಎಂಬುದನ್ನು ತಾನು ತಿಳಿಸುವುದಾಗಿಯೂ, ನಂತರದಲ್ಲಿ ಮಾದರಿ ನೀತಿ ಸಂಹಿತೆಯೊಂದನ್ನು ರೂಪಿಸುವುದಾಗಿಯೂ ಆಯೋಗ ಹೇಳಿದೆ. ಆಯೋಗವು ಈ ಹಿಂದೆ ಸುಪ್ರೀಂ ಕೋರ್ಟ್‌ನಲ್ಲಿ ತಾಳಿದ್ದ ನಿಲುವಿಗೂ ಈಗ ತಾಳಿರುವ ನಿಲುವಿಗೂ ಬಹಳ ವ್ಯತ್ಯಾಸ ಇದೆ. ಉಚಿತ ಕೊಡುಗೆಗಳ ಸಂಸ್ಕೃತಿಯು ಅಪಾಯಕಾರಿ ಎಂದು ಪ್ರಧಾನಿಯವರು ಹೇಳಿದ್ದಾರೆ. ಇದನ್ನು ನಿಯಂತ್ರಿಸಲು ಕೇಂದ್ರವು ಉತ್ಸುಕವಾಗಿರಬಹುದು. ಆಮ್ ಆದ್ಮಿ ಪಕ್ಷವನ್ನು (ಎಎಪಿ) ಬಿಜೆಪಿಯು ಗುಜರಾತ್ ಮತ್ತು ಹಿಮಾಚಲ ಪ್ರದೇಶದಲ್ಲಿ ತನ್ನ ಎದುರಾಳಿ ಎಂದು ಭಾವಿಸಿರುವಂತಿದೆ. ಎಎಪಿಯು ಉಚಿತ ಕೊಡುಗೆಗಳನ್ನು ‘ಅಭಿವೃದ್ಧಿ ಕ್ರಮಗಳು’ ಎಂದು ವ್ಯಾಖ್ಯಾನಿಸಿದೆ. ಇಂತಹ ಕ್ರಮಗಳಿಂದಾಗಿ ಅದು ಬಲ ಹೆಚ್ಚಿಸಿಕೊಂಡಿದೆ. ಆದರೆ, ಯಾವುದು ಉಚಿತ ಕೊಡುಗೆ ಹಾಗೂ ಯಾವುದು ಅಭಿವೃದ್ಧಿ ಕಾರ್ಯಕ್ರಮ ಎಂಬುದು ಸಾರ್ವಜನಿಕ ವೇದಿಕೆಯಲ್ಲಿ ಚರ್ಚೆಯಾಗಬೇಕಿರುವ ವಿಷಯ ಅಥವಾ ರಾಜಕೀಯ ವೇದಿಕೆಗಳಲ್ಲಿ ಚರ್ಚೆಯಾಗಬೇಕಿರುವ ವಿಷಯ. ಇಂತಹ ಚರ್ಚೆಗಳಲ್ಲಿ ಚುನಾವಣಾ ಆಯೋಗಕ್ಕೆ ಯಾವುದೇ ಪಾತ್ರ ಇರಬಾರದು. ಇದು ಆಯೋಗದ ಕರ್ತವ್ಯಗಳ ಭಾಗ ಅಲ್ಲ. ಚುನಾವಣಾ ಭರವಸೆಗಳು ಹಾಗೂ ಅವುಗಳ ಪರಿಣಾಮಗಳ ಬಗ್ಗೆ ತೀರ್ಮಾನಿಸುವ ಪರಿಣತಿ, ವ್ಯವಸ್ಥೆ ಆಯೋಗದಲ್ಲಿ ಇಲ್ಲ.

ವಾಸ್ತವದಲ್ಲಿ ಈ ವಿಚಾರದಲ್ಲಿ ನ್ಯಾಯಾಲಯದ ಪಾತ್ರ ಏನು ಎಂಬುದು ಕೂಡ ಸ್ಪಷ್ಟವಿಲ್ಲ. ಏಕೆಂದರೆ, ರಾಜಕೀಯ ಪಕ್ಷಗಳು ಚುನಾವಣೆಯ ಸಂದರ್ಭದಲ್ಲಿ ನೀಡುವ ಭರವಸೆಗಳಿಂದಾಗಿ ಸಂವಿಧಾನದ ಉಲ್ಲಂಘನೆಯಾದಂತೆ ಅಥವಾ ನಿರ್ದಿಷ್ಟ ಕಾನೂನಿನ ಉಲ್ಲಂಘನೆಯಾದಂತೆ ಕಾಣುತ್ತಿಲ್ಲ. ಮತದಾರರಿಗೆ ಯಾವುದೂ ಅರ್ಥ ಆಗುವುದಿಲ್ಲ, ಅವರೆಲ್ಲ ವಿಚಾರಶೂನ್ಯರು, ಪಕ್ಷಗಳು ನೀಡುವ ದೊಡ್ಡ ಭರವಸೆಗಳನ್ನು ಅವರು ಯಥಾವತ್ತಾಗಿ ನಂಬಿಬಿಡುತ್ತಾರೆ ಎಂದು ಭಾವಿಸುವುದು ಸರಿಯಲ್ಲ. ಆ ರೀತಿ ಭಾವಿಸುವುದು ಪ್ರಜಾತಂತ್ರದ ಆಶಯವನ್ನೇ ಪ್ರಶ್ನಿಸಿದಂತೆ ಆಗುತ್ತದೆ. ಚುನಾವಣಾ ಆಯೋಗ ಮುಂದಿರಿಸಿರುವ ಪ್ರಸ್ತಾವವು ಆಯೋಗಕ್ಕೆ ಇರುವ ಅಧಿಕಾರ ವ್ಯಾಪ್ತಿಯನ್ನು ಮೀರಿ ನಿಂತಿದೆ, ಉಚಿತ ಕೊಡುಗೆಗಳ ವಿಚಾರದಲ್ಲಿ ಸರ್ಕಾರ ತಾಳಿರುವ ನಿಲುವು ಆಧರಿಸಿ ಆಯೋಗ ಹೀಗೆ ಮಾಡಿರುವಂತೆ ಕಾಣುತ್ತಿದೆ ಎಂದು ವಿರೋಧ ಪಕ್ಷಗಳು ಹೇಳಿವೆ. ವಿರೋಧ ಪಕ್ಷಗಳ ಕಳವಳದಲ್ಲಿ ಹುರುಳಿದೆ. ಈ ಪ್ರಸ್ತಾವವನ್ನು ಮುಂದಿನ ಹಂತಕ್ಕೆ ಒಯ್ಯುವ ಕೆಲಸವನ್ನು ಆಯೋಗ ಮಾಡಬಾರದು. ಪಕ್ಷಗಳು ಮತದಾರರಿಗೆ ನೀಡುವ ಭರವಸೆಗಳ ವಿಚಾರದಲ್ಲಿ ಯಾವುದೇ ಪ್ರಜಾತಂತ್ರ ರಾಷ್ಟ್ರದಲ್ಲಿ ಯಾವ ಆಯೋಗವೂ ಹಸ್ತಕ್ಷೇಪ ಮಾಡುವುದಿಲ್ಲ.

ದಿನದ ಟ್ವೀಟ್

ಮುಖ್ಯವಾಹಿನಿ ಸೇರಿದಾಗ...



ನಾನು ನಕ್ಸಲ್ ಆಗಬಹುದೆಂದು ಬಾಲಕಿಯಾಗಿದ್ದಾಗ ಯಾವತ್ತೂ ಅಂದುಕೊಂಡಿರಲಿಲ್ಲ. ನಾನು ನಕ್ಸಲ್ ಆದಾಗ ಮುಂದೆ ವಕೀಲೆ ಆಗಬಹುದೆಂದು ಎಂದೂ ಯೋಚಿಸಿರಲಿಲ್ಲ. ವಕೀಲೆ ಆದಾಗ ಮುಂದೆ ಶಾಸಕಿ ಆಗುತ್ತೇನೆ ಎಂದು ಕಲ್ಪಿಸಿಕೊಂಡೇ ಇರಲಿಲ್ಲ. ಶಾಸಕಿಯಾದಾಗ ನಾನು ಪಿಎಚ್.ಡಿ. ಮಾಡಬಹುದೆಂದು ಭಾವಿಸಿರಲಿಲ್ಲ. ಈಗ ನೀವು ನನ್ನನ್ನು ಡಾ. ಅನಸೂಯಾ ಸೀತಕ್ಕ, ರಾಜ್ಯಶಾಸ್ತ್ರದಲ್ಲಿ ಪಿಎಚ್.ಡಿ ಪದವೀಧರೆ ಎಂದು ಕರೆಯಬಹುದು.

ಡಿ. ಅನಸೂಯಾ (ಸೀತಕ್ಕ), ತೆಲಂಗಾಣ ಶಾಸಕಿ

ಕಿಡಿನುಡಿ



ಭಾರತ್ ಜೋಡೊ ಯಾತ್ರೆಯಲ್ಲಿ ಭಾಗವಹಿಸುತ್ತಿರುವ ಜನಸಾಗರ ನೋಡಿ ಭಯಭೀತರಾಗಿರುವ ಬೊಮ್ಮಾಯಿ-ಯಡಿಯೂರಪ್ಪ ಜೋಡಿ ಪ್ಲೇನ್ - ಹೆಲಿಕಾಪ್ಟರ್ ಯಾತ್ರೆಯನ್ನು ಆರಂಭಿಸಿದೆ. ಬೊಮ್ಮಾಯಿಯವರೇ, ಸರಳ ಸತ್ಯ ಏನೆಂದರೆ... ರಾಜ್ಯದ ಅಭಿವೃದ್ಧಿಯ ಬಗ್ಗೆ ನಿಮ್ಮ ಮುನ್ನೋಟ ಶೂನ್ಯ. ಭಾರತದಲ್ಲೇ ಅತ್ಯಂತ ಭ್ರಷ್ಟ ಸರ್ಕಾರದ ಮುಂದಾಳು ಎಂದು ಹೆಸರು ಪಡೆದಿದ್ದೀರಿ.

ರಣದೀಪ್ ಸಿಂಗ್ ಸುರ್ಜೇವಾಲ, ಕಾಂಗ್ರೆಸ್ಸಿನ ಕರ್ನಾಟಕ ಉಸ್ತುವಾರಿ

25 ವರ್ಷಗಳ ಹಿಂದೆ

ಭಾನುವಾರ, 12-10-1997

- **ಬಿಜೆಪಿ-ಬಿಎಸ್‌ಪಿ ಸಮ್ಮಿಶ್ರ ಸರ್ಕಾರ ಬಿಕ್ಕಟ್ಟಿನಲ್ಲಿ**

ನವದೆಹಲಿ, ಅ. 11 (ಪಿಟಿಐ, ಯುಎನ್‌ಐ)– ಮುಜಾಫರ್‌ನಗರದಲ್ಲಿ ಪೊಲೀಸ್ ಗೋಲಿಬಾರ್‌ಗೆ ಇಬ್ಬರು ದಲಿತರು ಸಾವಿಗೀಡಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಉತ್ತರಪ್ರದೇಶದ ಬಿಜೆಪಿ-ಬಿಎಸ್‌ಪಿ ಸರ್ಕಾರದಲ್ಲಿ ತೀವ್ರ ಬಿಕ್ಕಟ್ಟು ಉಂಟಾಗಿದ್ದು ಭಿನ್ನಮತ ಪರಿಹಾರಕ್ಕೆ ನಾಳೆ ಎರಡೂ ಪಕ್ಷಗಳ ನಾಯಕರು ತುರ್ತು ಸಭೆ ನಡೆಸಲಿದ್ದಾರೆ.

ದಲಿತ ವಿರೋಧಿ ನೀತಿಯನ್ನು ಮುಂದುವರಿಸಿದರೆ ಭಾರತೀಯ ಜನತಾ ಪಕ್ಷಕ್ಕೆ ತಕ್ಕ ಪಾಠ ಕಲಿಸಬೇಕಾದೀತು ಎಂದು ಬಹುಜನ ಸಮಾಜ ಪಕ್ಷದ ಮುಖ್ಯಸ್ಥ ಕಾನ್ಶಿರಾಂ ಅವರು ನಿನ್ನೆ ಎಚ್ಚರಿಕೆ ನೀಡಿದರು. ಅದರ ಬೆನ್ನಲ್ಲೇ ಹೇಳಿಕೆ ನೀಡಿದ ಬಿಜೆಪಿಯ ಹಿರಿಯ ಸಚಿವ ಕಲ್‌ರಾಜ್ ಮಿಶ್ರಾ ಅವರು ಕಲ್ಯಾಣ್ ಸಿಂಗ್ ನೇತೃತ್ವದ ಸರ್ಕಾರದ ಮೇಲೆ ಅಸಮಾಧಾನವಿದ್ದರೆ ಬಿಎಸ್‌ಪಿ ಸಚಿವರು ಸರ್ಕಾರದಿಂದ ಹೊರಬರಬಹುದು ಎಂದು ಹೇಳಿದ್ದರಿಂದ ಬಿಕ್ಕಟ್ಟು ಇನ್ನಷ್ಟು ಬಿಗಡಾಯಿಸಿದೆ.

- **ಬೇಡಿಕೆ ಈಡೇರದಿದ್ದರೆ ಒತ್ತೆಯಾಳು ಹತ್ಯೆ: ವೀರಪ್ಪನ್ ಬೆದರಿಕೆ**

ಬೆಂಗಳೂರು, ಅ. 11– ‘ನನ್ನ ಬೇಡಿಕೆ ಈಡೇರಿಸದಿದ್ದರೆ ಒತ್ತೆಯಾಳುಗಳನ್ನು ಕೊಲ್ಲುತ್ತೇನೆ’ ಎಂದು ಕಾಡುಗಳ್ಳ, ನರಹಂತಕ ವೀರಪ್ಪನ್ ರಾಜ್ಯ ಸರ್ಕಾರಕ್ಕೆ ಕಳುಹಿಸಿರುವ ಕ್ಯಾಸೆಟ್‌ನಲ್ಲಿ ಎಚ್ಚರಿಕೆ ನೀಡಿದ್ದಾನೆ.

‘ಸಂಧಾನ ಮಾರ್ಗ ಬಿಟ್ಟು ಬೇರೆ ಮಾರ್ಗದಲ್ಲಿ ಹೋಗುವುದಾದರೆ ಒತ್ತೆಯಾಳುಗಳ ಪ್ರಾಣಕ್ಕೆ ಸರ್ಕಾರವೇ ಹೊಣೆಯಾಗುತ್ತದೆ. ನನ್ನ ಜತೆಗೆ ನ್ಯಾಯಯುತವಾಗಿ ನಡೆದುಕೊಳ್ಳಿ. ಸಾಯುವುದಕ್ಕೆ ನಾನು ಹೆದರುವವನಲ್ಲ’ ಎಂದು ಅವನು ಬೆದರಿಕೆ ಹಾಕಿದ್ದಾನೆ.

50 ವರ್ಷಗಳ ಹಿಂದೆ

ಗುರುವಾರ, 12-10-1972

- **ಪಕ್ಷದ ಹಿತದೃಷ್ಟಿಯಿಂದ ಎಂ.ಜಿ.ಆರ್ ಸಸ್ಪೆಂಡ್: ಕರುಣಾನಿಧಿ ಸ್ಪಷ್ಟನೆ**

ಮದರಾಸ್, ಅ. 11– ಪಕ್ಷದ ಹಿತದೃಷ್ಟಿಯಿಂದ ಎಂ.ಜಿ. ರಾಮಚಂದ್ರನ್ ಅವರನ್ನು ಸಸ್ಪೆಂಡ್ ಮಾಡುವ ‘ನೋವಿನ’ ನಿರ್ಧಾರವನ್ನು ಕೈಗೊಳ್ಳಬೇಕಾಯಿತು ಎಂದು ತಮಿಳುನಾಡು ಮುಖ್ಯಮಂತ್ರಿ ಹಾಗೂ ದ್ರಾವಿಡ ಮುನ್ನೇತ್ರ ಕಳಗಂ ಅಧ್ಯಕ್ಷ ಎಂ.ಕರುಣಾನಿಧಿ ಅವರು ಇಂದು ಇಲ್ಲಿ ಪತ್ರಕರ್ತರಿಗೆ ತಿಳಿಸಿದರು.

ಎಂ.ಜಿ.ಆರ್ ಅವರ ಇತ್ತೀಚಿನ ಚಟುವಟಿಕೆಗಳು ಮತ್ತು ಅವರ ಬಹಿರಂಗ ಹೇಳಿಕೆಗಳು ಪಕ್ಷದ ನಿಯಮ ಮತ್ತು ಶಿಸ್ತಿನ ಉಲ್ಲಂಘನೆಯಾದ್ದರಿಂದ ಈ ನಿರ್ಧಾರ ಕೈಗೊಳ್ಳಬೇಕಾಯಿತು ಎಂದೂ ಅವರು ಹೇಳಿದರು.

- **ಗಡಿ ಗುರುತಿಸುವ ಕಾರ್ಯ: ಮತ್ತೆ ಮಾತುಕತೆಗೆ ಪಾಕಿಸ್ತಾನದ ಸಲಹೆ**

ನವದೆಹಲಿ, ಅ. 11– ಭಾರತ ಮತ್ತು ಪಾಕಿಸ್ತಾನದ ಸೇನೆಯ ಕಮಾಂಡರುಗಳು ಶುಕ್ರವಾರ ಅಥವಾ ಶನಿವಾರ ಗಡಿ ಗುರುತಿಸುವ ಕಾರ್ಯದ ಮಾತುಕತೆಯನ್ನು ಪುನರಾರಂಭಿಸುವಂತೆ ಪಾಕಿಸ್ತಾನ ಸಲಹೆ ಮಾಡಿದೆ.

ಜಮ್ಮು-ಕಾಶ್ಮೀರದಲ್ಲಿ ಗಡಿ ಗುರುತಿಸುವ ಬಗ್ಗೆ ಈ ತಿಂಗಳ 8ರಂದು ಭಾರತ-ಪಾಕಿಸ್ತಾನ ಸೇನೆ ಕಮಾಂಡರುಗಳ ಮಾತುಕತೆಯಲ್ಲಿ ಬಿಕ್ಕಟ್ಟು ಉಂಟಾಗಿತ್ತು.

ಆಡಳಿತದ ದುಃಸ್ಥಿತಿ ಕುರಿತು ಚರ್ಚೆ ಆಗಬೇಕಾದುದು ರಾಜಧಾನಿಗೂ ಮುಖ್ಯ, ರಾಜ್ಯಕ್ಕೂ ಮುಖ್ಯ

ಬೆಂಗಳೂರಿನ ಆಡಳಿತ ಯಾಕೆ ಹೀಗಿದೆ?



ವಿಶ್ಲೇಷಣೆ

ವಸಂತ ಶೆಟ್ಟಿ


ತಿಂಗಳ ಹಿಂದೆ ಮಹಾಮಳೆಗೆ ಬೆಂಗಳೂರಿನ ಕೆಲವು ಭಾಗಗಳು ನೆರೆಗೊಳಗಾಗಿ ಇಡೀ ದೇಶದಲ್ಲಿ ದೊಡ್ಡ ಮಟ್ಟದ ಸುದ್ದಿಯಾಯಿತು. ಕೊಳೆಗೇರಿಗಳು, ಕೆಳಮಧ್ಯಮ ವರ್ಗದ ಬಡಾವಣೆಗಳಷ್ಟೇ ಅಲ್ಲದೆ ಹಲವಾರು ಐ.ಟಿ. ಸಂಸ್ಥೆಗಳು, ಐ.ಟಿ. ಉದ್ಯೋಗಿಗಳು ವಾಸಿಸುವ ಅಪಾರ್ಟ್‌ಮೆಂಟ್‌ಗಳು, ಸಿರಿವಂತರು ವಾಸಿಸುವ ವಿಲ್ಲಾಗಳೆಲ್ಲ ನೀರಿನಲ್ಲಿ ನಿಂತ ಕಾರಣದಿಂದಲೊ ಏನೋ ತುಸು ಹೆಚ್ಚೇ ಅನ್ನಿಸುವಷ್ಟು ಗೌಜು ಸಾಮಾಜಿಕ ಜಾಲತಾಣಗಳಲ್ಲೂ ಸುದ್ದಿವಾಹಿನಿಗಳಲ್ಲೂ ಉಂಟಾಯಿತು. ತಿಂಗಳೊಪ್ಪತ್ತಿನಲ್ಲಿ, ನೆರೆಯ ನೀರು ಇಳಿದಿದ್ದಕ್ಕಿಂತಲೂ ವೇಗವಾಗಿ ಜನರು ಇದನ್ನು ಮರೆತು ಮುಂದೆ ಸಾಗಿದ್ದೂ ಆಗಿದೆ. ಇನ್ನೊಂದು ಮಹಾಮಳೆ ಬಂದಾಗ ಇದೆಲ್ಲ ಮತ್ತೆ ಯಥಾವತ್ತಾಗಿ ಮರುಕಳಿಸುತ್ತದೆ.

ನಾಡಪ್ರಭು ಕೆಂಪೇಗೌಡರು ಬೆಂಗಳೂರು ಕಟ್ಟಿದರು. ಆನಂತರ ಅನೇಕ ಅರಸರು, ಬ್ರಿಟಿಷರು ಆಳುತ್ತ, ಸ್ವಾತಂತ್ರ್ಯದ ನಂತರ ನಾವೇ ಆಳಿಕೊಳ್ಳುತ್ತ ಬೆಂಗಳೂರು ಆರು ನೂರಕ್ಕೂ ಹೆಚ್ಚು ವರ್ಷಗಳ ಇತಿಹಾಸ ಕಂಡಿದೆ. ಇದು, ಇತಿಹಾಸದ ಉದ್ದಕ್ಕೂ ಯೋಜಿತವಾದ ರೀತಿಯಲ್ಲೇ ಬೆಳೆಯುತ್ತ ಬಂದಿತ್ತು. ಯೋಜಿತವಾದ ಬೆಳವಣಿಗೆಯು ಕಳೆದ ಎರಡು ದಶಕಗಳಲ್ಲಿ ಬಹುತೇಕ ಮೂಲೆಗುಂಪಾಗಿ ಅಡ್ಡಾದಿಡ್ಡಿ ಬೆಳೆಯುತ್ತ, ಮೂರು ಪಟ್ಟು ಜನಸಂಖ್ಯೆ ಹೆಚ್ಚಿಸಿಕೊಂಡು ಟ್ರಾಫಿಕ್, ಮಾಲಿನ್ಯ, ಮೂಲ ಸೌಕರ್ಯಗಳ ಕೊರತೆ, ಒತ್ತುವರಿ, ಭ್ರಷ್ಟಾಚಾರ ಹೀಗೆ ಸಾಲು ಸಾಲು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿರುವ ನಗರವಾಗಿ ಇಂದು ನಿಂತಿದೆ. ಕರ್ನಾಟಕ ಸರ್ಕಾರವು ತನ್ನ ವರಮಾನದಲ್ಲಿ ಶೇ 35ಕ್ಕೂ ಹೆಚ್ಚಿನ ಪಾಲು ತಂದುಕೊಡುವ ಊರಿನ ಆಡಳಿತ ಯಾಕಿಷ್ಟು ದುಃಸ್ಥಿತಿಯಲ್ಲಿದೆ ಅನ್ನುವ ಬಗ್ಗೆ ಆಗಾಗ ಚರ್ಚಿಸುತ್ತಲಾದರೂ ಇರಬೇಕು. ಅದು ಬೆಂಗಳೂರಿಗೂ ಮುಖ್ಯ, ಕರ್ನಾಟಕಕ್ಕೂ ಮುಖ್ಯ. ಬೆಂಗಳೂರು ಈಪಾಟಿ ಬದಲಾವಣೆ ಕಂಡ ಕಳೆದ ಎರಡು ದಶಕಗಳನ್ನು ದೂರ ನಿಂತು ಅವಲೋಕಿಸಿದರೆ ಕೆಲ ಅಂಶಗಳನ್ನು ಗುರುತಿಸಬಹುದು. ಇವು, ಇಲ್ಲಿನ ಸ್ಥಿತಿ ಯಾಕೆ ಹೀಗಿದೆ ಅನ್ನುವ ಪ್ರಶ್ನೆಗೆ ಒಂದು ಮಟ್ಟಿಗಿನ ಉತ್ತರವನ್ನೂ ಕೊಡಬಹುದು.

ಮೊದಲನೆಯದಾಗಿ, ಬೆಂಗಳೂರಿನ ಈ 30 ವರ್ಷಗಳ ಬೆಳವಣಿಗೆಯು ಭಾರತವು ಜಾಗತೀಕರಣಕ್ಕೆ ತೆರೆದುಕೊಂಡು, ಮಾರುಕಟ್ಟೆ ಆಧಾರಿತ ಅರ್ಥವ್ಯವಸ್ಥೆಯತ್ತ ಸಾಗಿದ ಬದಲಾವಣೆಯೊಂದಿಗೆ ತಳುಕು ಹಾಕಿಕೊಂಡಿದೆ. ಈ ವ್ಯವಸ್ಥೆ ದೊಡ್ಡ ಪ್ರಮಾಣದಲ್ಲಿ ಉದ್ಯೋಗ ಹುಟ್ಟುಹಾಕಿ ಹೊಸ ಮಧ್ಯಮವರ್ಗವೊಂದನ್ನು ಸೃಷ್ಟಿಸಿದ್ದು ಎಲ್ಲರಿಗೂ ತಿಳಿದಿದ್ದೇ. ಜಗತ್ತಿನ ಎಲ್ಲ ಸುಖ ಸೌಲಭ್ಯಗಳು ಇಂದು ಪ್ರಪಂಚದ ಯಾವ ಭಾಗದಲ್ಲೇ ಶುರುವಾದರೂ ಕ್ಷಣಾರ್ಧದಲ್ಲಿ ಬೆಂಗಳೂರಿನಲ್ಲೂ ಸಿಗುವಂತಹ ದಿನಗಳು ಬಂದಿವೆ. ಇದನ್ನು ಪ್ರಗತಿ ಎಂದು ಸಂಭ್ರಮಿಸುವವರಿಗೇನೂ ಕಡಿಮೆಯಿಲ್ಲ. ಇವೆಲ್ಲವುಗಳ ಜೊತೆಜೊತೆಯಲ್ಲೇ ನಮ್ಮ ಸಮಾಜದಲ್ಲಿ ಆಳವಾಗಿ ಬಂದು ನಿಂತಿರುವುದು ಕ್ಯಾಪಿಟಲಿಸಂನ ಉಪ ಉತ್ಪನ್ನ ಎನ್ನಬಹುದಾದ ‘ವ್ಯಕ್ತಿವಾದ’. ಬದುಕು-ಬವಣೆಯ ಎಲ್ಲ ಪ್ರಶ್ನೆಗಳನ್ನೂ ವ್ಯಕ್ತಿಕೇಂದ್ರಿತವಾದ ನೆಲೆಯಲ್ಲೇ ಆಲೋಚಿಸುವಂತಹ ಬೇರು ಮಟ್ಟದ ಬದಲಾವಣೆಯನ್ನು ಈ ಹೊಸ ಆರ್ಥಿಕ ವ್ಯವಸ್ಥೆಯು ಸಮಾಜದಲ್ಲಿ ತಂದಿದೆ. ಅದರ ಪರಿಣಾಮವಾಗಿ ಕೂಡು ಕುಟುಂಬಗಳ ಸಂಸ್ಕೃತಿ ದೂರವಾಗಿದ್ದು, ಕೊಳ್ಳುಬಾಕತನ, ಸಿರಿವಂತಿಕೆಯ ಪ್ರದರ್ಶನವೇ ಪ್ರಗತಿ ಅನ್ನುವಂತಾಗಿದ್ದು ಒಂದೆಡೆಯಾದರೆ, ಇನ್ನೊಂದೆಡೆ ಪ್ರಜೆಯಾಗಿ, ನಾಗರಿಕನಾಗಿ ವ್ಯಕ್ತಿಯೊಬ್ಬನ ವ್ಯವಸ್ಥೆಯೊಂದಿಗಿನ ಒಡನಾಟ ಶಿಥಿಲವಾಗುತ್ತ ಬದುಕಿನ ಎಲ್ಲ ಅಗತ್ಯಗಳನ್ನು ಆದಷ್ಟು ವ್ಯವಸ್ಥೆಯ ಹೊರಗೇ ಹಣದಿಂದ ಈಡೇರಿಸಿಕೊಳ್ಳುವ ಬದಲಾವಣೆ ಬಂದಿದೆ.

ಶಿಕ್ಷಣ, ಆರೋಗ್ಯ, ಸುರಕ್ಷತೆ, ಸಾರಿಗೆ, ಹೀಗೆ ಯಾವೆಲ್ಲ ಅಗತ್ಯಗಳಿಗೆ ವ್ಯವಸ್ಥೆ ಬೇಕಿತ್ತೋ ಅದೆಲ್ಲವನ್ನೂ ಖಾಸಗಿಯಾಗಿ ಪಡೆದುಕೊಳ್ಳುವ ಮನಃಸ್ಥಿತಿ ಇಂದು ಎಲ್ಲೆಡೆ ಇದೆ. ಎಲ್ಲೆಲ್ಲಿ ವ್ಯವಸ್ಥೆಯೊಂದಿಗೆ ಒಡನಾಡಲೇಬೇಕಾದ ಅನಿವಾರ್ಯ ಇದೆಯೋ ಅಲ್ಲಿ ಲಂಚ ಕೊಟ್ಟಾದರೂ ಸರಿ ತುರ್ತಾಗಿ ದಾಟಿಕೊಂಡು ಬಿಡೋಣ ಅನ್ನುವ ಮನಃಸ್ಥಿತಿಯೂ ನೆಲೆಗೊಂಡಿದೆ. ಯಾವುದೇ ಸಮಷ್ಟಿ ಪ್ರಜ್ಞೆ ಇಲ್ಲದ ಸಮಾಜವೊಂದು ರೂಪುಗೊಂಡಾಗ ಸಹಜವಾಗಿಯೇ ಅಲ್ಲಿ ಸಮುದಾಯ ಪ್ರಜ್ಞೆ ಗಟ್ಟಿಗೊಳ್ಳುವುದಿಲ್ಲ. ಎಲ್ಲಿ ಸಮುದಾಯವಿಲ್ಲವೋ ಅಲ್ಲಿ ವ್ಯವಸ್ಥೆಯನ್ನು ಎಚ್ಚರಿಸುವ ಯಾವ ಶಕ್ತಿಯೂ ಇರದು. ಈ ಕಾರಣದಿಂದಲೇ ನಮ್ಮಲ್ಲಿ ಗುಂಡಿ ಬಿದ್ದ ರಸ್ತೆ, ಬೀದಿಗಳಲ್ಲಿ ಬೀಳುವ ಕಸ, ಕೆರೆ, ಫುಟ್‌ಪಾತ್ ಒತ್ತುವರಿಯಂಥ ಎಲ್ಲರನ್ನೂ ತಾಕುವ ಸಮಸ್ಯೆಗಳ ಬಗ್ಗೆ ಒಟ್ಟಾಗಿ ಪ್ರತಿಭಟಿಸುವ, ಉತ್ತರದಾಯಿತ್ವಕ್ಕೆ ಒತ್ತಾಯಿಸುವ ಯಾವ ಪ್ರಯತ್ನಗಳೂ ಕಾಣುತ್ತಿಲ್ಲ. ಎರಡು ವರ್ಷಗಳಿಂದ ಬೆಂಗಳೂರಿನ ಮಹಾನಗರ ಪಾಲಿಕೆಗೆ ಚುನಾವಣೆಯೇ ನಡೆಯದಿದ್ದರೂ, ಆಡಳಿತವನ್ನು ಗುತ್ತಿಗೆದಾರರು, ಅಧಿಕಾರಿಗಳು, ರಾಜಕಾರಣಿಗಳು ಸೇರಿಕೊಂಡು ಬೇಕಾಬಿಟ್ಟಿ ನಡೆಸುತ್ತಿದ್ದರೂ ಆ ಬಗ್ಗೆ ಸರಿಯಾದ ಒಂದು ಪ್ರತಿಭಟನೆ ನಡೆದಿದ್ದನ್ನು ನಾವ್ಯಾರೂ ಕಂಡಿಲ್ಲ. ವ್ಯವಸ್ಥೆಯ ಜೊತೆ ಒಡನಾಡುವ ಸಾಮರ್ಥ್ಯ ಇರುವ ಜನರು ಅದರಿಂದ ದೂರ ದೂರ ಹೋಗುವ ಇವತ್ತಿನ ಏರ್ಪಾಡಿನಲ್ಲಿ ಆಡಳಿತ ಕುಸಿಯದೇ ಇರಲು ಸಾಧ್ಯವೇ?

ಎರಡನೆಯದಾಗಿ, ಬೆಂಗಳೂರಿಗೆ ಭರಿಸಲು ಸಾಧ್ಯವಿಲ್ಲ ಅನ್ನುವಷ್ಟರ ಮಟ್ಟಿಗೆ ಆಗುತ್ತಿರುವ ಅನಿಯಂತ್ರಿತ ವಲಸೆ.




ಕೇವಲ ಎರಡು ದಶಕಗಳಲ್ಲಿ ಒಂದು ನಗರದ ಜನಸಂಖ್ಯೆ ಮೂರು ಪಟ್ಟು ಹೆಚ್ಚಾದ ಉದಾಹರಣೆ ಪ್ರಪಂಚದಲ್ಲಿ ವಿರಳ. ಇಷ್ಟು ವ್ಯಾಪಕವಾದ ವಲಸೆಯನ್ನು ತಡೆದುಕೊಳ್ಳುವಂತೆ ಇಲ್ಲಿನ ಯಾವ ವ್ಯವಸ್ಥೆಯೂ ರೂಪುಗೊಂಡಿಲ್ಲ. ರಸ್ತೆಯ ಸಾಮರ್ಥ್ಯ ಏಳೆಂಟು ಲಕ್ಷ ವಾಹನಗಳಿಗಿದ್ದರೆ ಇಲ್ಲಿ ಎಂಬತ್ತು ಲಕ್ಷಕ್ಕೂ ಹೆಚ್ಚು ವಾಹನಗಳಿವೆ. ಈ ಊರಿನ ನೀರಿನ ದಾಹ ತೀರಿಸಲು ಕಾವೇರಿ ಕೊಳ್ಳದ ರೈತರು ಕೃಷಿ ಬಿಟ್ಟರೂ ಆಗಲಿಕ್ಕಿಲ್ಲ. ಈ ಊರಿಗೆ ವಿದ್ಯುತ್ ಪೂರೈಸಲು ಕರ್ನಾಟಕದ ಜಲ, ಅಣು, ಉಷ್ಣ ವಿದ್ಯುತ್ ಮೂಲಗಳು ಸಾಕಾಗದು. ಇದು ವಲಸೆಯ ಒಂದು ಆಯಾಮವಾದರೆ, ಇಂತಹ ವಲಸೆಯು ನಗರದ ಮಟ್ಟದಲ್ಲಿ ಆಡಳಿತದಿಂದ ಹೊಣೆಗಾರಿಕೆ ಎದುರು ನೋಡುವ ನಾಗರಿಕರ ಒಂದು ಸಮುದಾಯ ‘ಸಹಜವಾಗಿ’ ರೂಪುಗೊಳ್ಳುವುದನ್ನು ಕಷ್ಟವಾಗಿಸಿದೆ ಅನ್ನುವುದು ಇನ್ನೊಂದು ಆಯಾಮ.

ಸಮುದಾಯಗಳು ರೂಪುಗೊಳ್ಳಲು ಜನರು ಒಂದಾಗಿ ಬರಬೇಕು. ಹಾಗೆ ಒಂದಾಗಿ ಬರಲು ಅವರ ನಡುವೆ ಸಹಕಾರವನ್ನು ‘ಸಹಜವಾಗಿ’ ರೂಪಿಸುವ ಅಂಶ-ವೊಂದಿರಬೇಕಾಗುತ್ತದೆ. ಅಂತಹ ಸಹಜ ಸಾಧನ ಭಾಷೆ. ಯಾಕೆಂದರೆ ಭಾಷೆ ಅನ್ನುವುದು ಸಂಪರ್ಕದ ಸಾಧನ ಮಾತ್ರವಲ್ಲ. ಅದು ಅದಕ್ಕೂ ಮಿಗಿಲಾಗಿ ಸಹಕಾರದ ಸಾಧನ. ಹತ್ತಾರು ನುಡಿಯಾಡುವ ಜನರು ವಲಸೆ ಬಂದರೂ ಅವರು ಕಾಲಾವಧಿಯಲ್ಲಿ ಕನ್ನಡದ ಮುಖ್ಯ-ವಾಹಿನಿಯಲ್ಲಿ ಬೆರೆಯುವುದನ್ನು ಪ್ರೋತ್ಸಾಹಿಸುವ ಯಾವ ಸಾಂಸ್ಥಿಕ ನೀತಿಗಳೂ ಇಂದು ನಮ್ಮಲ್ಲಿಲ್ಲ. ಅಂತಹ ನೀತಿಗಳನ್ನು ರೂಪಿಸಿ, ಜಾರಿಗೆ ತರುವ ಇಚ್ಛಾಶಕ್ತಿಯೂ ನಮ್ಮನ್ನಾಳುವವರಿಗೆ ಇಲ್ಲ. ವಲಸಿಗರು ಅಲ್ಲಲ್ಲಿ ದ್ವೀಪಗಳಂತೆಯೇ ಉಳಿಯುವ ಏರ್ಪಾಡು ಇದ್ದಷ್ಟೂ ವ್ಯವಸ್ಥೆಯೊಂದಿಗೆ ಹತ್ತಿರದಿಂದ ಒಡನಾಡುವ ಸಮುದಾಯವೊಂದನ್ನು ಗಟ್ಟಿಯಾಗಿ ರೂಪಿಸುವ ಪ್ರಯತ್ನಕ್ಕೆ ಬಲ ಬರುವುದಿಲ್ಲ. ಈ ಕಾರಣಕ್ಕಾಗಿಯೇ ವಲಸಿಗರು ಹೆಚ್ಚು ನೆಲೆಗೊಂಡಿರುವ ಬೆಂಗಳೂರಿನ ಪ್ರದೇಶಗಳಲ್ಲಿ ಆಡಳಿತದ ಮಟ್ಟ ಬೆಂಗಳೂರಿನ ಹಳೆಯ ಭಾಗಗಳ ಹೋಲಿಕೆಯಲ್ಲಿ ಹೆಚ್ಚು ಕೆಟ್ಟದಾಗಿದೆ ಎನ್ನಬಹುದು.

ನಮ್ಮ ನಗರಗಳ ಆಡಳಿತ ಸುಧಾರಣೆಗೆ ಮಂತ್ರದಂಡವೇನೂ ಇಲ್ಲ. ಇವತ್ತಿನ ಆರ್ಥಿಕ ಮಾದರಿಗಳು ಎಕಾನಮಿ ಆಫ್ ಸ್ಕೇಲ್ ಸುತ್ತಲೇ ಇರುವ ಕಾರಣದಿಂದ, ನಗರಗಳು ಬೆಳೆಯುವುದು ಮತ್ತು ನಗರಗಳತ್ತ ಜನರು ವಲಸೆ ಬರುವುದು ಸದ್ಯಕ್ಕಂತೂ ಕಡಿಮೆಯಾಗದು. ಬೆಂಗಳೂರು ಚಿನ್ನದ ಮೊಟ್ಟೆ ಇಡುವ ಕೋಳಿಯಂತೆ ಆಗಬಾರದು ಅಂದರೆ ಅದರ ಮೇಲಿನ ಒತ್ತಡ ಕಡಿಮೆಯಾಗಿಸಿ ಕರ್ನಾಟಕದ ಬೇರೆ ನಗರಗಳನ್ನು ಬೆಳೆಸುವತ್ತ ಗಮನ ಹರಿಸಬೇಕು.

ದಕ್ಷಿಣ ಭಾರತದಲ್ಲಿ ಅತ್ಯಂತ ಕಡಿಮೆ ನಗರಗಳಿರುವ ರಾಜ್ಯ ಕರ್ನಾಟಕವಾಗಿದೆ. ಇದು ಬದಲಾಗಬೇಕು. ಹೀಗೆ ಹೊಸ ನಗರಗಳು ರೂಪುಗೊಳ್ಳುವಾಗಲೂ ಅನಿಯಂತ್ರಿತ ವಲಸೆ ನಮ್ಮ ಊರುಗಳ ಕನ್ನಡ ಜನಲಕ್ಷಣವನ್ನು ಬದಲಾಯಿಸದಂತೆ ಉದ್ಯೋಗ, ವಲಸೆಯ ಸುತ್ತ ನೀತಿ-ನಿಯಮಗಳನ್ನು ರೂಪಿಸಿಕೊಳ್ಳುವ ಕೆಲಸವೂ ಆಗಬೇಕಿದೆ. ಜನರು ಆಡಳಿತದಲ್ಲಿ ಸಹಭಾಗಿಗಳಾಗುವಂತೆ ಅವರನ್ನು ತೊಡಗಿಸಿಕೊಳ್ಳುವ ಬದಲಾವಣೆಯೂ ಬರಬೇಕಿದೆ. ಅದಿಲ್ಲದಿದ್ದರೆ ನಗರೀಕರಣ ಅಂದರೆ ಕೆಟ್ಟ ಮೂಲ ಸೌಕರ್ಯಗಳ, ಕನ್ನಡದ ಯಾವ ಪರಿಸರವೂ ಇರದ ನಗರಗಳನ್ನು ಕರ್ನಾಟಕದಲ್ಲಿ ಕಟ್ಟಿಕೊಳ್ಳುವುದು ಅಂತಾಗುತ್ತದೆ. ಅದಾಗಬಾರದಲ್ಲವೇ?

ಚುರುಮುರಿ



ಯಾತ್ರೋತ್ಸವ

• ಮಣ್ಣೆ ರಾಜು

‘ತೀರ್ಥಯಾತ್ರೆಯಂತೆ ಪಾದಯಾತ್ರೆಯೂ ಶುಭ ಫಲ ಕೊಡಬಹುದು ಕಣ್ರೀ...’ ಅಂದಳು ಸುಮಿ.

‘ಹೌದು, ಪಾದಯಾತ್ರೆಯಿಂದ ಆರೋಗ್ಯ ವೃದ್ಧಿ, ಅಧಿಕಾರ ಸಿದ್ಧಿಯಾಗುತ್ತದೆ. ಕಾಲು ನೋವು, ಕುರ್ಚಿ ನೋವು ನಿವಾರಣೆಯಾಗುತ್ತವೆ. ಭಾರತ್ ಜೋಡೊ ಯಾತ್ರೆಯಲ್ಲಿ ರಾಹುಲ್‌ಜೀ ಜೊತೆ ನಡೆದು, ಓಡಿ ಸಕಲ ಸಿದ್ಧಿ ಪಡೆಯಿರಿ ಅಂತ ಕಾಂಗ್ರೆಸ್ ನಾಯಕರು ಕರೆ ನೀಡಿದ್ದಾರೆ’ ಅಂದ ಶಂಕ್ರಿ.

‘ರಾಹುಲ್ ಅವರ ಭರವಸೆಯ ಕೈ ಹಿಡಿದು ಹೆಜ್ಜೆ ಹಾಕಿದರೆ ಹಾದಿ ಎಷ್ಟೇ ದುರ್ಗಮವಾಗಿದ್ದರೂ ಸುಲಭವಾಗಿ ಗುರಿ ತಲುಪಬಹುದಂತೆ. ಅವರ ಕೈ ಹಿಡಿದು ಅವರೊಂದಿಗೆ ಓಡಿದ ಸಿದ್ದರಾಮಯ್ಯ ತಮ್ಮ ವಯಸ್ಸು ಮರೆತು ಯುವಕರಾಗಿಬಿಟ್ಟರಂತೆ...’

‘ಪರಸ್ಪರ ಕೈ ಕೊಡದೆ ಕೈ-ಕೈ ಹಿಡಿದು, ಏಜು, ಬೊಜ್ಜು ಮರೆತು ಓಡಿದರೆ, ನಡಿಗೆ, ನಡತೆ ಸುಧಾರಿಸಿಕೊಂಡರೆ ಬಿಜೆಪಿ, ಜೆಡಿಎಸ್ ಅನ್ನು ಹಿಂದಿಕ್ಕಿ ಸುಲಭವಾಗಿ ಗುರಿ ತಲುಪಬಹುದು ಅಂತ ರಾಹುಲ್‌ಜೀ ಗೆಲುವಿನ ಮಂತ್ರ ಹೇಳಿದ್ದಾರಂತೆ’.

‘ಇತರ ಕಾಂಗ್ರೆಸ್ ನಾಯಕರೂ ರಾಹುಲ್ ಕೈ ಹಿಡಿದು ಓಡಲು ಆತುರರಾಗಿದ್ದಾರೆ, ಅಸೆಂಬ್ಲಿ, ಪಾರ್ಲಿಮೆಂಟ್ ಟೂರ್ನಿಯ ಅಭ್ಯರ್ಥಿ ಆಯ್ಕೆಗೆ ಈ ಪಾದಯಾತ್ರೆ ಮಾನದಂಡ ಆಗಬಹುದೇನ್ರೀ?’ ಸುಮಿ ಕೇಳಿದಳು.

‘ಆಗಲೂಬಹುದು. ಯಾರ್‍ಯಾರು ಎಷ್ಟೆಷ್ಟು ದೂರ ನಡೆದರು, ಅದೆಷ್ಟು ವೇಗವಾಗಿ ಓಡಿದರು, ಆ ನಾಯಕರ ವೇಗ, ದೂರ, ದಣಿವನ್ನು ಗುಣಿಸಿ, ಭಾಗಿಸಿ ಅವರ ಸರಾಸರಿ ಸಾಮರ್ಥ್ಯ ಲೆಕ್ಕ ಹಾಕಬಹುದು’.

‘ಈ ಯಾತ್ರೋತ್ಸವ ಕಾಂಗ್ರೆಸ್‌ನ ಫ್ಯಾಮಿಲಿ ಪ್ರೋಗ್ರಾಂ...’

‘ಎಲೆಕ್ಷನ್ ಬರುತ್ತಿರುವುದರಿಂದ ಎಲ್ಲಾ ಪಕ್ಷಗಳೂ ಇಂತಹ ಯಾತ್ರೆ, ಜಾತ್ರೆ, ಉತ್ಸವಗಳನ್ನು ಆಯೋಜಿಸಿ ಜನರಂಜನೆ ಮಾಡುತ್ತವೆ. ಅವರ ಸಂಭ್ರಮೋತ್ಸವವನ್ನು ನಾವೂ ಅನುಭವಿಸಿ ಆನಂದಿಸೋಣ...’ ಅಂದ ಶಂಕ್ರಿ.

ಸಂಗತ

ಭವನ ತೆರೆಯಲಿ ಬೆಳಕು ಹರಿಯಲಿ

ಬೇರೆ ಬೇರೆ ಹೆಸರಿನಲ್ಲಿರುವ ಸಮುದಾಯ ಭವನಗಳನ್ನು ಸರಿಯಾಗಿ ನಿರ್ವಹಿಸಿ, ಅವು ಸದ್ಬಳಕೆ ಆಗುವಂತೆ ನೋಡಿಕೊಳ್ಳುವ ಹೊಣೆಗಾರಿಕೆ ಸರ್ಕಾರದ ಮೇಲಿದೆ

• ಮಲ್ಲಿಕಾರ್ಜುನ ಹೆಗ್ಗಳಗಿ

ರಾಜ್ಯದ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬಳಕೆಯಾಗದೆ ಇರುವ ಸಾವಿರಕ್ಕೂ ಹೆಚ್ಚು ಅಂಬೇಡ್ಕರ್ ಭವನಗಳನ್ನು ಗ್ರಂಥಾಲಯಗಳನ್ನಾಗಿ ಪರಿವರ್ತಿಸುವುದಾಗಿ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ವಿಧಾನಸಭಾ ಅಧಿವೇಶನದಲ್ಲಿ ಹೇಳಿದ್ದಾರೆ.


ಬೇರೆ ಬೇರೆ ಸಮುದಾಯಗಳಿಗೆ ಪ್ರತ್ಯೇಕ ಭವನಗಳನ್ನು ನಿರ್ಮಿಸುವುದರ ಬದಲು ಎಲ್ಲ ಹಣವನ್ನು ಒಟ್ಟು ಸೇರಿಸಿ ಒಂದು ದೊಡ್ಡ ಭವನ ನಿರ್ಮಿಸುವುದು ಸೂಕ್ತ ಎಂದು ಶಾಸಕ ಕೆ.ಆರ್. ರಮೇಶ್ ಕುಮಾರ್ ಇದೇ ಸಂದರ್ಭದಲ್ಲಿ ಸಲಹೆ ನೀಡಿದ್ದಾರೆ. ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಭವನಗಳ ನಿರ್ಮಾಣದ ಹಿಂದಿರುವ ಮಹತ್ವದ ಆಶಯ ಬೇರೆಯೇ ಇದೆ. ಅದನ್ನು ನಾವು ಮನಗಾಣಬೇಕಿದೆ.

ತಳ ಸಮುದಾಯಗಳ ಜನರು ಸಭೆ- ಸಮಾರಂಭ, ಕೌಟುಂಬಿಕ, ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಹಾಗೂ ನೈಸರ್ಗಿಕ ವಿಕೋಪಗಳಿಂದ ತೊಂದರೆ ಉಂಟಾದಾಗ ಆಶ್ರಯ ನೀಡಲು ಸೂರು ಬೇಕು ಎಂಬ ಉದ್ದೇಶದಿಂದ ಅಂಬೇಡ್ಕರ್ ಭವನದೊಂದಿಗೆ ವಾಲ್ಮೀಕಿ ಭವನ, ಆದಿ ಜಾಂಬವ ಸಮುದಾಯ ಭವನ, ಭಜಂತ್ರಿ ಸಮುದಾಯ ಭವನ, ಸವಿತಾ ಸಮುದಾಯ ಭವನ... ಹೀಗೆ ಬೇರೆ ಬೇರೆ ಹೆಸರಿನಲ್ಲಿ ಭವನಗಳನ್ನು ವಿವಿಧ ಇಲಾಖೆಗಳ ವತಿಯಿಂದ ನಿರ್ಮಿಸಲಾಗಿದೆ. ಈ ಕಟ್ಟಡಗಳು ಆ ಸಮುದಾಯದ ಜನರಲ್ಲಿ ಧೈರ್ಯ ಮತ್ತು ಆತ್ಮವಿಶ್ವಾಸ ತುಂಬುತ್ತವೆ.

ರಾಜ್ಯದಲ್ಲಿ 5,963 ಗ್ರಾಮ ಪಂಚಾಯಿತಿಗಳಿವೆ. ಇವುಗಳ ವ್ಯಾಪ್ತಿಯಲ್ಲಿ ಸುಮಾರು 3.60 ಲಕ್ಷ ಭವನಗಳನ್ನು ಕಟ್ಟಲಾಗಿದೆ. ಸಮರ್ಪಕ ಉಸ್ತುವಾರಿ ಇಲ್ಲದೆ ಇವುಗಳಲ್ಲಿ ಕೆಲವು ಬಾಗಿಲು ಮುಚ್ಚಿವೆ ಎನ್ನುವ ಕಾರಣಕ್ಕೆ ಅವುಗಳನ್ನು ಬೇರೆ ಉದ್ದೇಶಕ್ಕೆ ಹಸ್ತಾಂತರಿಸುವುದು ಸರಿಯಾದ ಕ್ರಮವಲ್ಲ. ಪಂಚಾಯಿತಿ ಮೂಲಕ ನಡೆಯುವ ಬಹಳಷ್ಟು ವಾಚನಾಲಯಗಳು ಬಾಗಿಲು ಮುಚ್ಚಿವೆ. ಇವುಗಳ ಆರಂಭಕ್ಕೆ ಸಚಿವರು ಮೊದಲು ಗಮನ ಕೊಡಬೇಕು.

ಒಂದು ನಿರ್ದಿಷ್ಟ ಸಮುದಾಯದ ಜನರು ಸೇರಿ ಜನಪ್ರತಿನಿಧಿಗಳು ಹಾಗೂ ಸರ್ಕಾರದ ಮೇಲೆ ಒತ್ತಡ ಹೇರಿ ತಮ್ಮ ಸಮುದಾಯದ ಬಳಕೆಗೆ ಭವನ ನಿರ್ಮಿಸಲು ಅನುಮತಿ ಪಡೆಯುತ್ತಾರೆ. ಆಸಕ್ತಿಯಿಂದ ಕಟ್ಟಡ ನಿರ್ಮಿಸುತ್ತಾರೆ. ಉದ್ಘಾಟನೆ ವೈಭವದಿಂದ ನಡೆಯುತ್ತದೆ. ಸಮುದಾಯದಲ್ಲಿ ಬಲಿಷ್ಠರಾದ ವ್ಯಕ್ತಿ ಅಥವಾ ಜನಪ್ರತಿನಿಧಿಗಳ ಆಪ್ತರು ಭವನಕ್ಕೆ ಕೀಲಿ ಜಡಿದು ಅಕ್ರಮವಾಗಿ ತಮ್ಮ ಸ್ವಾಧೀನದಲ್ಲಿ ಇಟ್ಟುಕೊಳ್ಳುವಂತಹ ನಿದರ್ಶನಗಳೂ ಇವೆ. ಬಾಗಲಕೋಟೆ ಜಿಲ್ಲೆಯ ತೇರದಾಳ ತಾಲ್ಲೂಕು ವ್ಯಾಪ್ತಿಯ ಘಟಪ್ರಭಾ ನದಿಯಲ್ಲಿ ಪ್ರತಿವರ್ಷ ಪ್ರವಾಹದ ಆತಂಕ ಉಂಟಾಗುತ್ತದೆ. ನದಿಯ ದಂಡೆಗುಂಟ ವಾಸವಾಗಿರುವ ಹಿಂದುಳಿದ ಸಮುದಾಯದವರು ತಮ್ಮ ತಮ್ಮ ಸಮುದಾಯ ಭವನಗಳಲ್ಲಿ ಆಶ್ರಯ ಪಡೆಯುತ್ತಾರೆ. ಈ ಭವನಗಳು ಇಲ್ಲದಿದ್ದರೆ ತಮ್ಮ ಬದುಕು ಬೀದಿಪಾಲಾಗುತ್ತಿತ್ತು ಎಂದು ಪರಿಚಿತರೊಬ್ಬರು ಹೇಳಿದ ಮಾತು ಈಗ ನೆನಪಾಗುತ್ತದೆ.

ಸಮುದಾಯ ಭವನಗಳ ಉಸ್ತುವಾರಿಗೆ ಸರಿಯಾದ ವ್ಯವಸ್ಥೆ ಮಾಡುವ ಅಗತ್ಯವಿದೆ. ನೀರು, ಉತ್ತಮ ಆಸನ, ಫ್ಯಾನು ಮತ್ತು ಶೌಚಾಲಯ ವ್ಯವಸ್ಥೆ ಮಾಡಬೇಕು. ಈ ಬಗ್ಗೆ ಸಂಬಂಧಿಸಿದ ಇಲಾಖೆ ಗಮನ-ಹರಿಸುವುದು ಅವಶ್ಯ. ಭವನ ಕಟ್ಟುವಾಗ ನಿವೇಶನಗಳ ಆಯ್ಕೆ ಕೂಡ ಮುಖ್ಯವಾದದ್ದು. ದೂರದ ಪ್ರದೇಶದಲ್ಲಿ ಜನರಿಗೆ ನಡೆದು ಹೋಗಲು ಕೂಡ ರಸ್ತೆ ಇಲ್ಲದ ಸ್ಥಳಗಳಲ್ಲಿ ಭವನಗಳನ್ನು ನಿರ್ಮಿಸಿದ ಉದಾಹರಣೆಗಳಿವೆ. ಭವನಗಳನ್ನು ನಿರ್ಮಿಸುವುದು ಜನಪ್ರತಿನಿಧಿಗಳಿಗೆ ಬಹಳ ಖುಷಿಯ ಸಂಗತಿ. ಕಟ್ಟಡ ನಿರ್ಮಾಣವಾದರೆ, ತಮ್ಮ ಅವಧಿಯಲ್ಲಿ ಮಾಡಿದ ಸಾಧನೆ ಎಂದು ಹೇಳಿಕೊಳ್ಳುತ್ತಾರೆ. ಆದರೆ ಅದರ ಸಮರ್ಪಕ ನಿರ್ವಹಣೆಗೆ ವ್ಯವಸ್ಥೆ ಮಾಡುವುದಿಲ್ಲ ಎಂಬ ಟೀಕೆಗಳಿವೆ.



ಕಾರ್ಪೊರೇಟ್ ಕಂಪನಿಗಳು ಕಟ್ಟಡ ಕಟ್ಟುವಾಗ ಅನುಸರಿಸುವ ಶಿಸ್ತನ್ನು ಸರ್ಕಾರ ಅಳವಡಿಸಿಕೊಳ್ಳು-ವುದು ಅವಶ್ಯವಿದೆ. ಕಾರ್ಪೊರೇಟ್ ಕಂಪನಿಯು ಒಂದು ಕಟ್ಟಡ ನಿರ್ಮಿಸುವ ಪೂರ್ವದಲ್ಲಿ ಅದರ ಅವಶ್ಯಕತೆ, ಸೂಕ್ತ ನಿವೇಶನ, ಕಟ್ಟಡದ ವಿನ್ಯಾಸ, ಬಜೆಟ್, ನಿರ್ಮಾಣದ ಕಾಲಾವಧಿ, ನಿರ್ಮಾಣದ ನಂತರ ಸಮರ್ಪಕ ಉಸ್ತುವಾರಿ ಮತ್ತು ಕಟ್ಟಡದಿಂದ ಪಡೆಯಬಹುದಾದ ಪ್ರಯೋಜನಗಳ ಬಗ್ಗೆ ವಿಸ್ತೃತ ವರದಿ ಸಿದ್ಧಪಡಿಸುತ್ತದೆ, ಸಂಸ್ಥೆಯ ಸಭೆಗಳಲ್ಲಿ ಚರ್ಚೆ ಮಾಡಲಾಗುತ್ತದೆ. ಗುತ್ತಿಗೆದಾರರ ಆಯ್ಕೆಯ ವಿಷಯದಲ್ಲಿಯೂ ಬಹಳಷ್ಟು ಕಾಳಜಿ ವಹಿಸಲಾಗುತ್ತದೆ.

ಕೋವಿಡ್ ಸಂಕಷ್ಟದ ದಿನಗಳಲ್ಲಿ ನಗರಗಳಿಂದ ಹುಟ್ಟೂರಿಗೆ ಮರಳಿ ಬಂದ ಹಿಂದುಳಿದ ಸಮುದಾಯದ ಕುಟುಂಬಗಳನ್ನು ಯಾರೂ ಮನೆಯೊಳಗೆ ಬಿಟ್ಟು-ಕೊಳ್ಳದಿದ್ದಾಗ ಅಂಬೇಡ್ಕರ್ ಭವನಗಳೇ ಆಶ್ರಯ ನೀಡಿ ಪೊರೆದದ್ದನ್ನು ಮರೆಯಲಿಕ್ಕಾಗದು. ಇಂತಹ ಭವನಗಳನ್ನು ಸರಿಯಾಗಿ ನಿರ್ವಹಿಸಿ, ಈ ಜನರ ಆತ್ಮಗೌರವವನ್ನು ಸದಾ ಕಾಪಾಡುವಂತೆ ಅವುಗಳನ್ನು ರಕ್ಷಿಸಬೇಕು. ಬಾಗಿಲು ಮುಚ್ಚುವುದು ಆ ಸಮುದಾಯಕ್ಕೆ ಮಾಡುವ ಅಪಮಾನದಂತೆ ಕಾಣಿಸುತ್ತದೆ. ಭವನಗಳು ಬರೀ ಇಟ್ಟಿಗೆಗಳ ಕೊಠಡಿಗಳೆಂದು ಭಾವಿಸಬಾರದು. ಅವು ಆಯಾ ವರ್ಗದ ಜನರ ಕಷ್ಟಕ್ಕೆ ಸೂರಾಗುವ ಸೌಧಗಳು. ಮುಖ್ಯವಾಗಿ ಅವರ ಅಸ್ಮಿತೆಯ ಸಂಕೇತಗಳು.

ವಾಚಕರ ವಾಣಿ

ವರ್ಗಾವಣೆ: ಸರ್ಕಾರದ ನಡೆ ಸ್ವಾಗತಾರ್ಹ

ಶಾಲಾ ಶಿಕ್ಷಣ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆಗಳ ವಿವಿಧ ಕಚೇರಿಗಳಲ್ಲಿ ಐದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಒಂದೇ ಸ್ಥಳದಲ್ಲಿರುವ ಬೋಧಕೇತರ ಸಿಬ್ಬಂದಿ ವರ್ಗಾವಣೆಗೆ ಹೊಸ ನಿಯಮಗಳನ್ನು ರೂಪಿಸಲು ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹ. ಒಂದೇ ಕಡೆ ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಬೇರೆಡೆ ವರ್ಗಾಯಿಸಿ ಭ್ರಷ್ಟಾಚಾರರಹಿತ ಆಡಳಿತ ನೀಡುವುದು ಇಂದಿನ ದಿನಗಳಲ್ಲಿ ಅತಿ ಅವಶ್ಯ.

ರವಿಕುಮಾರ ಎಸ್. ರಾಮದುರ್ಗ, ಹುಬ್ಬಳ್ಳಿ

ಸಕಲೆಂಟು ಜಾತಿ: ಸತ್ಯ ಒಪ್ಪುವರೇ?

‘ಗಾಂಧೀಜಿ ಒಬ್ಬರಿಂದಲೇ ದೇಶಕ್ಕೆ ಸ್ವಾತಂತ್ರ್ಯ ಬಂದಿಲ್ಲ’ ಎಂದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಹೇಳಿದ್ದಾರೆ. ಹೌದು, ಲಕ್ಷಾಂತರ ಸ್ವಾತಂತ್ರ್ಯ ಹೋರಾಟಗಾರರಿಂದ ಭಾರತ ಪಾರತಂತ್ರದಿಂದ ಮುಕ್ತವಾಗಿದೆ. ಆದರೆ ಗಾಂಧೀಜಿ ಮುಂಚೂಣಿಯಲ್ಲಿದ್ದರು ಎಂದು ಯಾರೇ ಆದರೂ ಒಪ್ಪುತ್ತಾರೆ. ಅಖಂಡ ಭಾರತ ದೇಶವು ಯಾವುದೇ ಒಂದು ಧರ್ಮದವರಿಂದ ಅಲ್ಲದೆ ಇಲ್ಲಿ ಹಿಂದೂಗಳು, ಮುಸಲ್ಮಾನರು, ಕ್ರೈಸ್ತರು, ಸಿಖ್ಖರು, ಬೌದ್ಧರು, ಸಕಲೆಂಟು ಜಾತಿ ಜನಾಂಗದವರಿಂದ ಆಗಿದೆ. ಈ ಸತ್ಯವನ್ನು ಬಿಜೆಪಿಯ ಎಲ್ಲರೂ ಒಪ್ಪಿಕೊಳ್ಳುವರೇ?

ಡಿ.ರಾಮನಮಲಿ, ಹರಪನಹಳ್ಳಿ

ನೆಲದ ನಿಜ ಮನವರಿಕೆಯಾಗಲಿ

ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಹಾಗೂ ತಾಂತ್ರಿಕೇತರ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಇಂಗ್ಲಿಷ್ ಬಳಕೆಯನ್ನು ತಗ್ಗಿಸಲು ಅಧಿಕೃತ ಭಾಷೆಗಳ ಬಗೆಗಿನ ಸಂಸದೀಯ ಸಮಿತಿಯು ಶಿಫಾರಸು ಮಾಡಿರುವುದು ಹಿಂದಿ ಕೇಂದ್ರಿತ ಒಕ್ಕೂಟ ಸರ್ಕಾರದ ಭಾಷಾ ದೌರ್ಜನ್ಯಕ್ಕೆ ಒಂದು ಹೊಸ ಉದಾಹರಣೆಯಂತಿದೆ. ಕರ್ನಾಟಕ, ಕೇರಳ, ತಮಿಳುನಾಡಿನಂತಹ ಹಿಂದಿಯೇತರ ರಾಜ್ಯಗಳನ್ನು ‘ಸಿ’ ಗ್ರೂಪ್ ರಾಜ್ಯಗಳಾಗಿ ಪಟ್ಟಿ ಮಾಡಿ, ಅಲ್ಲಿರುವ ಸಂಸ್ಥೆಗಳು ಇಂಗ್ಲಿಷ್ ಬದಲಿಗೆ ತಮ್ಮದೇ ಆದ ಪ್ರಾದೇಶಿಕ ಭಾಷೆಯನ್ನು ಬಳಸಬೇಕೆಂದು ಶಿಫಾರಸು ಮಾಡಿರುವುದು ಕೆಟ್ಟದಾದ ಗಿಮಿಕ್.

ಇಂಗ್ಲಿಷ್ ಭಾಷೆಯು ಕನ್ನಡ ಆದಿಯಾಗಿ ಎಲ್ಲ ಭಾರತೀಯ ಭಾಷೆಗಳ ಕತ್ತನ್ನು ಹಿಸುಕುತ್ತಿದೆ ಎಂಬುದು ಸತ್ಯವೇ. ಆದರೂ ‘ವೈರಿಯ ವೈರಿ ಮಿತ್ರ’ ಎನ್ನುವಂತೆ ಹಿಂದಿ ಆಕ್ರಮಣ ಮತ್ತು ನವ-ವಸಾಹತುಶಾಹಿಯಿಂದ ಕರ್ನಾಟಕ ಸೇರಿದಂತೆ ದಕ್ಷಿಣ ಭಾರತವನ್ನು ರಕ್ಷಿಸುವ ಕೊನೆಯ ಅಡೆತಡೆಗಳಲ್ಲಿ ಇಂಗ್ಲಿಷ್ ಒಂದಾಗಿದೆ ಎಂಬುದೂ ಸತ್ಯವೇ. ‘ಎ’ ಗ್ರೂಪ್ ರಾಜ್ಯಗಳು ಎಂದು ವರದಿಯಲ್ಲಿ ಗುರುತಿಸಲಾಗಿರುವ ಹಿಂದಿ ಒಪ್ಪುವ ಉತ್ತರ ಭಾರತದ ರಾಜ್ಯಗಳಿಗೆ ಇಂಗ್ಲಿಷ್ ‘ಅನ್ಯ’ ಆಗಿರಬಹುದು. ಹಿಂದಿಪರರಿಗೆ ಇಂಗ್ಲಿಷ್ ಅನ್ಯ ಎನಿಸುವಂತೆ ಬಹುತೇಕ ಎಲ್ಲಾ ದಕ್ಷಿಣ ಭಾರತೀಯರಿಗೆ ಹಿಂದಿ ‘ಅನ್ಯ’ ಭಾಷೆಯೆಂಬ ನೆಲದ ನಿಜವನ್ನು ಸಂಸತ್ತಿನ ಸಮಿತಿಗೆ ಮನವರಿಕೆ ಮಾಡಿಕೊಡಬೇಕಾಗಿದೆ. ನಮ್ಮ ಜನಪ್ರತಿನಿಧಿಗಳು ಈ ದಿಸೆಯಲ್ಲಿ ಇಚ್ಛಾಶಕ್ತಿ ತೋರಬೇಕು.

ಶ್ರೀಕಂಠ, ಬೆಂಗಳೂರು

ಋಣದ ಕಣ್ಣೀರು?

ಮಾತಿಗೆ ಹೇಳುತ್ತಾರೆ
‘ಮೊಸಳೆ ಕಣ್ಣೀರು’ ಎಂದು.
ಆದರೆ ಮೃತಪಟ್ಟ
‘ದೇವರ ಮೊಸಳೆ ಬಬಿಯಾ’ಗೆ
ಮಾನವರು ಕೊಟ್ಟರು
ನಿಜ ಕಣ್ಣೀರ ವಿದಾಯ!
ಇರಬಹುದು ‘ಮೊಸಳೆ ಕಣ್ಣೀರಿನ’
ಋಣ ತೀರಿಸಲು!

ನಗರ ಗುರುದೇವ್ ಭಂಡಾರ್ಕರ್
ಹೊಸನಗರ

ಚೆಕ್ ಬೌನ್ಸ್: ಬೇಕು ಕಠಿಣ ನಿಯಮ

ಚೆಕ್ ಬೌನ್ಸ್ ನಿಗ್ರಹ ಸಾಧ್ಯತೆಗಳ ಬಗ್ಗೆ ಕೇಂದ್ರ ಹಣಕಾಸು ಸಚಿವಾಲಯ ಪರಿಶೀಲನೆ ನಡೆಸುತ್ತಿರುವುದು ಸ್ವಾಗತಾರ್ಹ. ಇದರಿಂದ ಚೆಕ್ ಕೊಟ್ಟು ಮೋಸ ಮಾಡಿ ವಿನಾಕಾರಣ ಕೋರ್ಟು ಕಚೇರಿ ಎಂದು ಅಲೆಸುವವರಿಗೆ ಕಠಿಣ ಸಂದೇಶ ನೀಡಿದಂತಾಗುತ್ತದೆ. ವ್ಯಕ್ತಿಯೊಬ್ಬರು ನೀಡಿದ ಚೆಕ್ ಒಂದುವೇಳೆ ಬೌನ್ಸ್ ಆದರೆ ಆತನ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸುವ ಮೊದಲು, ಆತನ ಬೇರೆ ಬ್ಯಾಂಕ್ ಖಾತೆಗಳಿಂದ ಹಣ ಕಡಿತ ಮಾಡಿ, ಅದನ್ನು ಚೆಕ್ ಮೊತ್ತಕ್ಕೆ ಸರಿ ಹೊಂದಿಸಲು ಯತ್ನಿಸುವ ಸಲಹೆ ಕೂಡ ಉತ್ತಮವಾಗಿದೆ. ದೇಶದಾದ್ಯಂತ ಇರುವ ಇಂತಹ ಸುಮಾರು 35 ಲಕ್ಷಕ್ಕೂ ಹೆಚ್ಚು ಚೆಕ್ ಬೌನ್ಸ್ ಪ್ರಕರಣಗಳು ನ್ಯಾಯಾಂಗ ವ್ಯವಸ್ಥೆಗೆ ದೊಡ್ಡ ಹೊರೆಯಾಗಿ ಪರಿಣಮಿಸಿವೆ.

ಖಾತೆಯಲ್ಲಿ ಹಣವಿಲ್ಲದಿದ್ದರೂ ಚೆಕ್ ಕೊಟ್ಟು ಮೋಸ ಮಾಡುವವರಿಗೆ ಕಠಿಣ ನಿರ್ಬಂಧಗಳನ್ನು ಹೇರಿ ಅವರ ಹಣಕಾಸು ವ್ಯವಹಾರಗಳನ್ನು ನಿರ್ಬಂಧಿಸುವುದು ಅವಶ್ಯಕ. ಇದರಿಂದ ಚೆಕ್ ಬೌನ್ಸ್ ಪ್ರಕರಣಗಳು ದೊಡ್ಡ ಸಂಖ್ಯೆಯಲ್ಲಿ ನ್ಯಾಯಾಲಯದ ಮೆಟ್ಟಿಲೇರುವುದನ್ನು ತಡೆಯಬಹುದು. ಈ ಮೂಲಕ, ನ್ಯಾಯಾಲಯದ ಸಮಯ ವ್ಯರ್ಥವಾಗುವುದನ್ನು ತಪ್ಪಿಸಬಹುದಾಗಿದೆ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಮಂಗಳಮುಖಿಯರ ಮಾದರಿ ನಡೆ

ಗುಳೇದಗುಡ್ಡ ತಾಲ್ಲೂಕಿನ ನಾಗರಾಳ ಎಸ್.ಪಿ. ಗ್ರಾಮದಲ್ಲಿ ಜಿಲ್ಲಾ ಪಂಚಾಯಿತಿ ವತಿಯಿಂದ ಮಂಗಳಮುಖಿಯರ ಸ್ವ ಉದ್ಯೋಗಕ್ಕೆ ಆರ್ಥಿಕ ನೆರವು ನೀಡಿರುವುದು ಮತ್ತು ಅವರು ಅದರ ಪ್ರಯೋಜನವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿರುವುದು (ಪ್ರ.ವಾ., ಅ. 11) ಶ್ಲಾಘನೀಯ. ಇವರು ಶಿಕ್ಷಣದ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ಶಿಕ್ಷಣವು ವ್ಯಕ್ತಿಗೆ ಶಕ್ತಿ ತುಂಬುತ್ತದೆ ಎಂಬುದನ್ನು ಅವರಿಗೆ ಮನವರಿಕೆ ಮಾಡಿಕೊಡುವ ಕೆಲಸ ನಿರಂತರವಾಗಿ ನಡೆಯಬೇಕು. ನೇಮಕಾತಿಯಲ್ಲಿ ಸರ್ಕಾರ ತಮಗೆ ನೀಡಿರುವ ಮೀಸಲಾತಿ ಸೌಲಭ್ಯವನ್ನು ಬಳಸಿಕೊಂಡು ಜೀವನಮಟ್ಟ ಸುಧಾರಣೆಗೆ ಅವರು ಆಸ್ಥೆ ವಹಿಸಬೇಕು.

ಅಯ್ಯಪ್ಪ ಅಂಚಿ, ಈಳಿಗನೂರ್, ಕಾರಟಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಜನಸಾಗರದಲ್ಲಿ ತೇಲಿದ ಭಾರತ್ ಜೋಡೊ ಯಾತ್ರೆ • ಮಹಿಳಾ ಕೂಲಿ ಕಾರ್ಮಿಕರ ಕೈಹಿಡಿದು ಹೆಜ್ಜೆ

ಬಾಲಕನ ಡಿಪ್ಸ್ ಸವಾಲು ಗೆದ್ದ ರಾಹುಲ್

• ಜಿ.ಬಿ. ನಾಗರಾಜ್

ಚಳ್ಳಕೆರೆ (ಚಿತ್ರದುರ್ಗ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ ಭಾರತ್ ಜೋಡೊ ಯಾತ್ರೆ ಮಂಗಳವಾರ ಜನಸಾಗರದಲ್ಲಿ ತೇಲಿತು. ಯಾತ್ರೆಯ ನಡುವೆ ರಾಹುಲ್ ಗಾಂಧಿ ಬಾಲಕನೊಂದಿಗೆ ಡಿಪ್ಸ್ ಹೊಡೆದು ದೈಹಿಕ ಕ್ಷಮತೆ ಪ್ರದರ್ಶಿಸಿದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ರಾಹುಲ್‌ಗೆ ಸಾಥ್ ನೀಡಿ ಗಮನ ಸೆಳೆದರು.

ಹಿರಿಯೂರು ತಾಲ್ಲೂಕಿನ ಹರ್ತಿಕೋಟೆಯಿಂದ ಆರಂಭವಾದ 12ನೇ ದಿನದ ಪಾದಯಾತ್ರೆ 24 ಕಿ.ಮೀ. ಸಾಗಿ ಚಳ್ಳಕೆರೆ ತಲುಪಿತು. ಯಾತ್ರೆಯು ಕಾಂಗ್ರೆಸ್ ಶಾಸಕ ಟಿ.ರಘುಮೂರ್ತಿ ಪ್ರತಿನಿಧಿಸುತ್ತಿರುವ ಕ್ಷೇತ್ರ ತಲುಪಿದಾಗ ಸ್ವಾಗತಕ್ಕೆ ಕಾದುನಿಂತಿದ್ದ ಜನಸಾಗರದ ಹುರುಪು ಇಮ್ಮಡಿಯಾಗಿತ್ತು.

ಚಳ್ಳಕೆರೆ ತಾಲ್ಲೂಕಿನ ಗೋಪನಹಳ್ಳಿ ಸಮೀಪ ಯಾತ್ರೆ ಸಾಗುವಾಗ ಬಾಲಕನೊಬ್ಬ ರಾಹುಲ್ ಅವರ ಗಮನ ಸೆಳೆದಿದ್ದೇ ತಡ ಆತನನ್ನು ತಮ್ಮ ಸಮೀಪಕ್ಕೆ ಕರೆದು ಕೆಲ ಹೊತ್ತು ಮಾತುಕತೆ ನಡೆಸಿದರಲ್ಲದೆ, ಆತನಿಂದ ಬಲಪ್ರದರ್ಶನದ ಸವಾಲು ಸ್ವೀಕರಿಸಿ ಕಸರತ್ತು ಪ್ರದರ್ಶನಕ್ಕೆ ಮುಂದಾದರು. ಬಾಲಕನ ಮಾರ್ಗದರ್ಶನದಲ್ಲಿ ಹೆದ್ದಾರಿಯ ಸರ್ವಿಸ್ ರಸ್ತೆಯಲ್ಲಿಯೇ ಡಿಪ್ಸ್ ಹೊಡೆದರು. ಡಿ.ಕೆ.ಶಿವಕುಮಾರ್ ಸಹ ತಮ್ಮ ನಾಯಕನೊಟ್ಟಿಗೆ ಬಲ ಪ್ರದರ್ಶಿಸಿದರು. ಆಗ ಸುತ್ತಲಿದ್ದ ಜನಸಮೂಹದ ಕರತಾಡನ ಮುಗಿಲು ಮುಟ್ಟಿತು.

ಸೋಮವಾರ ರಾತ್ರಿಯಿಡೀ ಸುರಿದ ಮಳೆ ಮಂಗಳವಾರ ಬೆಳಿಗ್ಗೆ ಕೊಂಚ ಬಿಡುವು ನೀಡಿತಾದರೂ, ನಿತ್ಯ ಬೆಳಿಗ್ಗೆ 6.30ಕ್ಕೆ ಆರಂಭವಾಗುತ್ತಿದ್ದ ಪಾದಯಾತ್ರೆ ಒಂದು ಗಂಟೆ ತಡವಾಗಿ ಶುರುವಾಯಿತು. ಸಂಜೆ ಯಾತ್ರೆ ಅಂತ್ಯವಾಗುವ ಹೊತ್ತಿನವರೆಗೂ ಬಿಡುವು ನೀಡಿದ್ದ ಮಳೆ ಮತ್ತೆ ಜಿಟಿಜಿಟಿ ರೂಪದಲ್ಲಿ ಬರತೊಡಗಿತು. ಅದನ್ನು ಲೆಕ್ಕಿಸದೇ ರಾಹುಲ್ ಜನರನ್ನು ಉದ್ದೇಶಿಸಿ ಮಾತನಾಡಿದರು.

ಹರ್ತಿಕೋಟೆ ಬಳಿ ಕುತೂಹಲದಿಂದ ಯಾತ್ರೆ ವೀಕ್ಷಿಸುತ್ತಿದ್ದ ಚಿಕ್ಕಮಕ್ಕಳನ್ನು ಬಳಿಗೆ ಕರೆದ ರಾಹುಲ್, ಬಿಗಿದಪ್ಪಿದರಲ್ಲದೆ, ಅವರ ಶಿಕ್ಷಣದ ಮಾಹಿತಿ ಪಡೆದರು. ಗೊಲ್ಲಹಳ್ಳಿ ಸಮೀಪ ಹೆದ್ದಾರಿ ಕಾಮಗಾರಿ ನಡೆಸುತ್ತಿದ್ದ ಮಹಿಳೆಯರನ್ನು ಕರೆದು ಶ್ರಮದ ಬಗ್ಗೆ ವಿಚಾರಿಸಿದರು. ಮಹಿಳಾ ಕೂಲಿ ಕಾರ್ಮಿಕರ ಕೈಹಿಡಿದು ಹೆಜ್ಜೆಹಾಕಿದರು. ಯಾತ್ರೆಯಲ್ಲಿ ಹೆಜ್ಜೆ ಹಾಕುತ್ತಿದ್ದ ಬಾಲಕನೊಬ್ಬನ ಚಪ್ಪಲಿ ಕಳಚಿದಾಗ ರಾಹುಲ್ ನೆರವಿಗೆ ಧಾವಿಸಿದರು. ಬಾಲಕನ ಕಾಲು ಹಿಡಿದು ಚಪ್ಪಲಿ ಸರಿಪಡಿಸಿದ್ದು, ನೋಡುಗರ ಮೆಚ್ಚುಗೆಗೆ ಪಾತ್ರವಾಯಿತು.

ಸಂಜೆ ಯಾತ್ರೆ ಪುನರಾರಂಭವಾಗುವ ಹೊತ್ತಿಗೆ ರಾಜ್ಯದ ವಿವಿಧೆಡೆಯಿಂದ ಜನಸಾಗರ ಹರಿದುಬಂದಿತ್ತು. ಭಾರಿ ಸಂಖ್ಯೆಯ ಜನರನ್ನು ಕಂಡು ಪುಳಕಿತಗೊಂಡಂತೆ ಕಂಡುಬಂದ ರಾಹುಲ್, ಉತ್ಸಾಹದಿಂದಲೇ ಹೆಜ್ಜೆ ಹಾಕಿದರು. ಮಧ್ಯಾಹ್ನದ ಬಳಿಕ ಅವರ ಹೆಜ್ಜೆಯ ಗತಿಯಲ್ಲಿ ವೇಗವಿತ್ತು. ಪಾದಯಾತ್ರೆ ಸಾಗುವ ಮಾರ್ಗದ ಎರಡೂ ಬದಿಯಲ್ಲಿ ನಿಂತಿದ್ದ ಮಹಿಳೆಯರು ಅಲ್ಲಲ್ಲಿ ಆರತಿ ಬೆಳಗಿ ರಾಹುಲ್ ಅವರನ್ನು ಹರಸುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ರಾಷ್ಟ್ರ ನಾಯಕರನ್ನು ಕಣ್ತುಂಬಿಕೊಳ್ಳುವ ಕಾತುರದಿಂದ ಕಾಯುತ್ತಿದ್ದವರು ಘೋಷಣೆಗಳನ್ನು ಕೂಗಿ ಬೆಂಬಲಿಸಿದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ರಣದೀಪ್ ಸುರ್ಜೇವಾಲಾ, ಕೆ.ಸಿ. ವೇಣುಗೋಪಾಲ್, ದಿಗ್ವಿಜಯ್ ಸಿಂಗ್, ಕನ್ಹಯ್ಯ ಕುಮಾರ್, ವೀರಪ್ಪ ಮೊಯಿಲಿ ಸೇರಿದಂತೆ ಅನೇಕ ಗಣ್ಯರು ಪಾದಯಾತ್ರೆಯಲ್ಲಿ ಹೆಜ್ಜೆ ಹಾಕಿದರು.



ಚಳ್ಳಕೆರೆ ತಾಲ್ಲೂಕಿನ ಗೋಪನಹಳ್ಳಿ ಸಮೀಪ ಬಾಲಕನೊಂದಿಗೆ ಡಿಪ್ಸ್ ಹೊಡೆದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್

ಯಾತ್ರೆಯಲ್ಲಿ ಚಿಕ್ಕಮಕ್ಕಳ ದುರುಪಯೋಗ ಆಗಿಲ್ಲ: ಡಿಕೆಶಿ

ಸಾಣಿಕೆರೆ (ಚಿತ್ರದುರ್ಗ): ಕಾಂಗ್ರೆಸ್ ಆಯೋಜಿಸಿರುವ ಭಾರತ್ ಜೋಡೊ ಯಾತ್ರೆಯಲ್ಲಿ ಚಿಕ್ಕ ಮಕ್ಕಳ ದುರುಪಯೋಗ ಆಗುತ್ತಿದೆ ಎಂಬ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನೋಟಿಸ್‌ಗೆ ಕಾಂಗ್ರೆಸ್ ಲಿಖಿತ ಉತ್ತರ ನೀಡಿದೆ. ಆಯೋಗವನ್ನು ಮುಂದಿಟ್ಟುಕೊಂಡು ಬಿಜೆಪಿ ಕೆಟ್ಟ ರಾಜಕೀಯಕ್ಕೆ ಮುಂದಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಆರೋಪಿಸಿದರು.

ಯಾತ್ರೆಯಲ್ಲಿ ಜನರು ಸ್ವಯಂ ಪ್ರೇರಿತವಾಗಿ ಪಾಲ್ಗೊಳ್ಳುತ್ತಿದ್ದಾರೆ. ಕೆಲವು ಪಾಲಕರು ತಮ್ಮೊಂದಿಗೆ ಮಕ್ಕಳನ್ನು ಕರೆತರುತ್ತಿದ್ದಾರೆ. ರಾಹುಲ್ ಗಾಂಧಿ ಅವರನ್ನು ನೋಡುವ ಕುತೂಹಲದಿಂದ ಯಾತ್ರೆಗೆ ಆಗಮಿಸುವವರ ಸಂಖ್ಯೆ ಹೆಚ್ಚಿದೆ. ಯಾತ್ರೆಯಲ್ಲಿ ಮಕ್ಕಳನ್ನು ಬಳಸಿಕೊಂಡಿಲ್ಲ. ಇದಕ್ಕೆ ಸಂಬಂಧಿಸಿದಂತೆ ಪಕ್ಷದ ರಾಷ್ಟ್ರೀಯ ವಕ್ತಾರರು 50 ಪುಟಗಳ ಉತ್ತರವನ್ನು ಆಯೋಗಕ್ಕೆ ನೀಡಿದ್ದಾರೆ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ ಯಾತ್ರೆಗೆ ನಿರೀಕ್ಷೆ ಮೀರಿದ ಜನಬೆಂಬಲ ಸಿಗುತ್ತಿದೆ. ಜನರ ಪ್ರೀತಿ, ವಿಶ್ವಾಸ ನೋಡಿ ಬಿಜೆಪಿಗೆ ಸಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆಯೋಗದ ಮೂಲಕ ದೂರು ದಾಖಲಿಸಿ ಕುತಂತ್ರದ ರಾಜಕೀಯ ಮಾಡುತ್ತಿದೆ. ಇದನ್ನು ಕಾನೂನಾತ್ಮಕವಾಗಿ ಎದುರಿಸುತ್ತೇವೆ’ ಎಂದರು.

ಶಿಕ್ಷಕಿ ನೋಡಿ ಭಾವುಕರಾದ ರಾಹುಲ್



ಎರಡೂ ಕೈಗಳಿಲ್ಲದೇ ಕಾಲಿನಲ್ಲಿಯೇ ಬರವಣಿಗೆ ಮಾಡುವ ಕೂಡ್ಲಿಗಿ ತಾಲ್ಲೂಕಿನ ಸರ್ಕಾರಿ ಶಾಲೆಯ ಅತಿಥಿ ಶಿಕ್ಷಕಿ ಲಕ್ಷ್ಮೀದೇವಿ ಅವರನ್ನು ಕಂಡು ರಾಹುಲ್ ಗಾಂಧಿ ಭಾವುಕರಾದರು. ಶಿಕ್ಷಕಿ ಕಾಲಿನಲ್ಲಿ ಬರೆಯುತ್ತಿರುವ ದೃಶ್ಯವನ್ನು ರಾಹುಲ್ ತಮ್ಮ ಮೊಬೈಲ್‌ನಲ್ಲಿ ಸೆರೆಹಿಡಿದರು.

‘ಕೈಗಳಿಲ್ಲದ ಮಹಿಳೆ ಹೇಗೆ ಜೀವನ ನಡೆಸುತ್ತಿರಬಹುದು ಎಂಬ ಕುತೂಹಲವಿತ್ತು. ಅವರನ್ನೇ ಪ್ರಶ್ನಿಸಿ ಸಂಶಯಗಳನ್ನು ಪರಿಹರಿಸಿಕೊಂಡೆ. ಕಾಲಿನಲ್ಲೇ ಸ್ಪರ್ಧಾತ್ಮಕ ಪರೀಕ್ಷೆ ಬರೆದು ಶಿಕ್ಷಕಿಯಾಗಿರುವುದನ್ನು ಕೇಳಿ ದಿಗ್ಮೂಡನಾಗಿದ್ದೇನೆ’ ಎಂದು ರಾಹುಲ್ ಹೇಳಿದರು.

ಸುದ್ದಿ 2 ನಿಮಿಷ

‘ಕೆಎಸ್‌ಆರ್‌ಟಿಸಿಗೆ ಒಂದೇ ದಿನ ₹22.54 ಕೋಟಿ ವರಮಾನ’

ಮಂಗಳೂರು: ‘ದಿನದಲ್ಲಿ ಸರಾಸರಿ ₹ 6 ಕೋಟಿಯಿಂದ ₹ 7 ಕೋಟಿಗಳಷ್ಟು ವರಮಾನ ಗಳಿಸುತ್ತಿದ್ದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಈಗ ಸರಾಸರಿ ₹ 12 ಕೋಟಿಗಳಷ್ಟು ವರಮಾನ ಗಳಿಸುತ್ತಿದೆ. ಇದೇ 10ರಂದು ಒಂದೇ ದಿನ ₹ 22.54 ಕೋಟಿ ವರಮಾನ ಬಂದಿದ್ದು, ಇದು ಸಾರ್ವಕಾಲಿಕ ದಾಖಲೆ’ ಎಂದು ಸಂಸ್ಥೆಯ ಅಧ್ಯಕ್ಷ ಎಂ.ಚಂದ್ರಪ್ಪ ತಿಳಿಸಿದರು.

ಸಾರಿಗೆ ಸಿಬ್ಬಂದಿಗೆ 6ನೇ ವೇತನ ಆಯೋಗದ ಶಿಫಾರಸಿನಂತೆ ವೇತನ ನೀಡುವ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಅವರು ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಿದ್ದರಾಮಯ್ಯ ವಿರುದ್ಧ ‘ಪಿಎಫ್‌ಐ ಭಾಗ್ಯ’ ಭಿತ್ತಿಚಿತ್ರ ಅಭಿಯಾನ



ಚಿತ್ರದುರ್ಗ: ‘ಸಿದ್ರಾಮುಲ್ಲಾನ ಉಗ್ರಭಾಗ್ಯ ಹಾಗೂ ಲೀಲೆಗಳನ್ನು ತಿಳಿಯಲು ಸ್ಕ್ಯಾನ್ ಮಾಡಿ’ ಎಂಬ ಕ್ಯೂಆರ್ ಕೋಡ್ ಹೊಂದಿದ ಪೋಸ್ಟರ್ ಅನ್ನು ಚಳ್ಳಕೆರೆ ನಗರ ಹಾಗೂ ಮೊಳಕಾಲ್ಮುರು ಪಟ್ಟಣದ ವಿವಿಧೆಡೆ ಅಂಟಿಸಲಾಗಿದೆ. ಸಿದ್ದರಾಮಯ್ಯ ಅವರ ಭಾವಚಿತ್ರದೊಂದಿಗೆ ‘ಪಿಎಫ್‌ಐ ಭಾಗ್ಯ’ ಎಂದು ಉಲ್ಲೇಖ ಮಾಡಲಾಗಿದೆ.

ಭಾರತ್ ಜೋಡೊ ಯಾತ್ರೆ ಸಾಗುವ ಮಾರ್ಗದುದ್ದಕ್ಕೂ ಈ ಪೋಸ್ಟರ್‌ಗಳು ಮಂಗಳವಾರ ಬೆಳಿಗ್ಗೆ ರಾರಾಜಿಸುತ್ತಿದ್ದವು. ಸಿದ್ದರಾಮಯ್ಯ ಅವರು ಟಿಪ್ಪು ಸುಲ್ತಾನ್ ಪೇಟ ಧರಿಸಿ ಕೈಯಲ್ಲಿ ಖಡ್ಗ ಹಿಡಿದ ಚಿತ್ರ ಪೋಸ್ಟರ್‌ಗಳಲ್ಲಿತ್ತು. ಇದನ್ನು ಗಮನಿಸಿದ ಪೊಲೀಸರು ಭಿತ್ತಿಚಿತ್ರಗಳನ್ನು ತೆರವುಗೊಳಿಸಿದ್ದಾರೆ.

ಮೊಳಕಾಲ್ಮುರಿನ ಕೆಇಬಿ ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರು ಬಹಿರಂಗವಾಗಿಯೇ ಪೋಸ್ಟರ್‌ಗಳನ್ನು ಅಂಟಿಸಿದರು. ಇದನ್ನು ಗಮನಿಸಿದ ಕಾಂಗ್ರೆಸ್ ಕಾರ್ಯಕರ್ತರು ಸ್ಥಳದಲ್ಲಿ ಪ್ರತಿಭಟನೆ ನಡೆಸಿ ಕಾನೂನು ಕ್ರಮಕ್ಕೆ ಒತ್ತಾಯಿಸಿದರು. ಸ್ಥಳಕ್ಕೆ ಬಂದ ಪೊಲೀಸರು ಪೋಸ್ಟರ್‌ಗಳನ್ನು ತೆರವುಗೊಳಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಕಾಂಗ್ರೆಸ್ ಕಿಡಿ: ‘ಕೀಳು ಮಟ್ಟದ ಪ್ರಚಾರವು ಬಿಜೆಪಿಯ ದಿವಾಳಿತನಕ್ಕೆ ಹಿಡಿದ ಕನ್ನಡಿ. ಹೇಡಿಗಳು ಮಾತ್ರ ಇಂತಹ ಕೆಲಸ ಮಾಡಲು ಸಾಧ್ಯ. ಕಾಂಗ್ರೆಸ್ ಅಸಂವಿಧಾನಿಕವಾಗಿ ನಡೆದುಕೊಂಡಿದ್ದರೆ ತನಿಖೆ ನಡೆಸಲಿ. ತಮ್ಮ ಲೀಲೆಗಳು ಹೊರಬರುವ ಭಯದಲ್ಲಿ ಬಿಜೆಪಿ ನಾಯಕರು ಈ ಕೆಲಸ ಮಾಡಿದ್ದಾರೆ’ ಎಂದು ಕಾಂಗ್ರೆಸ್ ನಾಯಕ ಬಿ.ಕೆ. ಹರಿಪ್ರಸಾದ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಆರಗ, ಸೇಡಂ ಬದಲಿ ನಿವೇಶನ ವಾಪಸ್

ಒಂದನೇ ಪುಟದಿಂದ

ಬಿಡಿಎ ಪರ ವಕೀಲ ಎಸ್.ಕೆ ಕುಲಕರ್ಣಿ ಪ್ರತಿಕ್ರಿಯೆ ನೀಡಲು ಕಾಲಾವಕಾಶ ಕೋರಿದರು.

ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, ‘ಕ್ರಯಪತ್ರವನ್ನು ಏಕಪಕ್ಷೀಯವಾಗಿ ರದ್ದುಗೊಳಿಸಲಾಗದು. ಇದಕ್ಕೆ ನಿವೇಶನ ಪಡೆದವರು ಸಹ ಒಪ್ಪಿಗೆ ನೀಡಬೇಕು. ಆಸ್ತಿಯನ್ನು ಮಾರಾಟ ಮಾಡುವುದು ಅಥವಾ ಏಕಪಕ್ಷೀಯವಾಗಿ ರದ್ದುಗೊಳಿಸುವುದು ಸರಿಯಲ್ಲ. ಹೀಗಾಗಿ, ಬಿಡಿಎ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಸೂಚಿಸಿತು. ಕೇವಲ ಮಂಜೂರಾತಿಯನ್ನು ರದ್ದುಗೊಳಿಸುವುದರಿಂದ ಯಾವುದೇ ಕಾನೂನಾತ್ಮಕ ಪರಿಹಾರ ದೊರಕುವುದಿಲ್ಲ ಎಂದೂ ಪೀಠ ಹೇಳಿತು.

ಶಿವರಾಮ ಕಾರಂತ ಬಡಾವಣೆಯಲ್ಲಿ ನಿರ್ಮಿಸಲಾಗಿರುವ ಕಟ್ಟಡಗಳ ನಿಯಮಗಳನ್ನು ಪರಿಶೀಲಿಸುತ್ತಿರುವ ನ್ಯಾಯಮೂರ್ತಿ ಚಂದ್ರಶೇಖರ್ ಸಮಿತಿಗೆ ಬಡಾವಣೆ ನಿರ್ಮಾಣದ ಮೇಲ್ವಿಚಾರಣೆ ವಹಿಸುವಂತೆ ನ್ಯಾಯಪೀಠ ಆದೇಶಿಸಿತು.

ಮೀಸಲಾತಿಗಾಗಿ ಜನಜಾಗೃತಿ ಯಾತ್ರೆ

ಹರಿಹರ: ವೀರಶೈವ ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ ಕೇಂದ್ರ ಸರ್ಕಾರದ ಇತರೆ ಹಿಂದುಳಿದ ವರ್ಗ ಮತ್ತು ರಾಜ್ಯ ಸರ್ಕಾರದ 2 ‘ಎ’ ಮೀಸಲಾತಿ ಪಡೆಯುವ ನಿಟ್ಟಿನಲ್ಲಿ ಪಂಚಮಸಾಲಿ ಮೀಸಲಾತಿ ಜನಜಾಗೃತಿ ಯಾತ್ರೆ ನಡೆಸಲು ತೀರ್ಮಾನಿಸಲಾಗಿದೆ ಎಂದು ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ಪ್ರಕಟಣೆ ತಿಳಿಸಿದೆ.

ಪೀಠಾಧಿಪತಿ ವಚನಾನಂದ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಮಂಗಳವಾರ ಸಂಜೆ ನಡೆದ ಸಭೆಯಲ್ಲಿ, ಮೀಸಲಾತಿಗಾಗಿ ಕಾನೂನಾತ್ಮಕವಾಗಿ ಇಟ್ಟ ಹೆಜ್ಜೆಗಳು ಹಾಗೂ ಮುಂದಿನ ಹೋರಾಟದ ರೂಪುರೇಷಗಳ ಕುರಿತು ಚರ್ಚಿಸಲಾಯಿತು. ಶೀಘ್ರದಲ್ಲಿ ಪಂಚಮಸಾಲಿ ಮೀಸಲಾತಿ ಜನಜಾಗೃತಿ ಯಾತ್ರೆ ನಡೆಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದೆ. ಸಭೆಯಲ್ಲಿ ಗುರುಪೀಠದ ಪ್ರಧಾನ ಟ್ರಸ್ಟಿ ಬಿ.ಸಿ. ಉಮಾಪತಿ ಹಾಗೂ ಭಕ್ತರು ಪಾಲ್ಗೊಂಡಿದ್ದರು.

ಕಲಘಟಗಿ ತಾಲ್ಲೂಕಿನ ಆಸ್ತಿಕಟ್ಟೆಯಲ್ಲಿ ಸಿಡಿಲು ಬಡಿದು ಯುವತಿ ಸಾವು

ವಿವಿಧೆಡೆ ಭಾರಿ ಮಳೆ: ಮನೆಗಳ ಕುಸಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವೆಡೆ ಮಂಗಳವಾರ ಮಳೆಯಾಗಿದೆ. ಸೋಮವಾರ ರಾತ್ರಿ ಕೆಲವೆಡೆ ಭಾರಿ ಮಳೆಯಾಗಿದ್ದು, ಜಮೀನುಗಳಿಗೆ ನೀರು ನುಗ್ಗಿ ಬೆಳೆಗಳು ನಾಶವಾಗಿವೆ.

ಧಾರವಾಡ ಜಿಲ್ಲೆ ಕಲಘಟಗಿ ತಾಲ್ಲೂಕಿನ ಆಸ್ತಿಕಟ್ಟೆಯಲ್ಲಿ ಸಿಡಿಲು ಬಡಿದು ಲಕ್ಷ್ಮವ್ವ ಪಾಟೀಲ ಎಂಬ ಯುವತಿ ಮೃತಪಟ್ಟಿದ್ದಾರೆ. ಹಾವೇರಿ ಜಿಲ್ಲೆಯ ಗುತ್ತಲ ಸಮೀಪದ ಹಾವನೂರ ಗ್ರಾಮದಲ್ಲಿ ಉಕ್ಕಿ ಹರಿದ ಹಳ್ಳದಲ್ಲಿ ಕೊಚ್ಚಿ ಹೋದ 9 ಕುರಿಗಳು ಮೃತಪಟ್ಟಿವೆ.

ನವಲಗುಂದ ತಾಲ್ಲೂಕಿನಲ್ಲಿ ಹರಿಯುವ ತುಪ್ಪರಿ ಹಳ್ಳ ಉಕ್ಕಿದ ಪರಿಣಾಮ ಮೊರಬ, ಅಳಗವಾಡಿ ಗ್ರಾಮಗಳ ಕೆಲ ಪ್ರದೇಶಗಳು ಜಲಾವೃತಗೊಂಡಿದ್ದವು. ಮನೆಗಳಲ್ಲಿರುವ ಬೆಳೆ ಕಾಳುಗಳು ನೀರಿನಲ್ಲಿ ತೇಲಿ ಹೋಗಿವೆ. ಹಲವೆಡೆ ಬೆಳೆದ ಈರುಳ್ಳಿ ಕೊಚ್ಚಿಹೋಗಿವೆ. ಯಾವುದೇ ಜೀವಹಾನಿ ಸಂಭವಿಸಿಲ್ಲ. ಹಲವೆಡೆ ನೀರಿನಲ್ಲಿ ಸಿಲುಕಿದವರನ್ನು ಬೋಟ್ ಮೂಲಕ ರಕ್ಷಿಸಿ, ಸುರಕ್ಷಿತ ಸ್ಥಳಗಳಿಗೆ ಕರೆದೊಯ್ಯಲಾಗಿದೆ.

ಮನೆಗಳಿಗೆ ಹಾನಿ: ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿಯಲ್ಲಿ 35, ಕೊಟ್ಟೂರಿನಲ್ಲಿ 20, ಹೂವಿನ ಹಡಗಲಿಯಲ್ಲಿ 6, ಹರಪನಹಳ್ಳಿಯಲ್ಲಿ 4 ಮನೆಗಳಿಗೆ ಹಾನಿಯಾಗಿದೆ. ಕುಷ್ಟಗಿ ತಾಲ್ಲೂಕಿನ ತಾವರಗೇರಾದಲ್ಲಿ 11 ಮನೆಗಳು ಕುಸಿದಿವೆ. ಪಾವಗಡ ತಾಲ್ಲೂಕಿನ ತುಮಕುಂಟೆ ಗ್ರಾಮದ ಕೆರೆ ಕೋಡಿ ಬಿದ್ದಿದ್ದು, 20 ಮನೆಗಳಿಗೆ ನೀರು ನುಗ್ಗಿದೆ.

ಭಾರಿ ಮಳೆ: ಮಡಿಕೇರಿ ಸೇರಿದಂತೆ ಕೊಡಗು ಜಿಲ್ಲೆಯ ಹಲವೆಡೆ ಧಾರಾಕಾರ ಮಳೆ ಸುರಿಯಿತು. ಮಡಿಕೇರಿಯಲ್ಲಿ ಕೇವಲ ಒಂದು ಗಂಟೆಯಲ್ಲಿ 3 ಸೆಂ. ಮೀಗೂ ಅಧಿಕ ಮಳೆಯಾಗಿದೆ. ಹುಬ್ಬಳ್ಳಿ, ವಿಜಯಪುರದಲ್ಲಿ ಗುಡುಗು ಸಹಿತ ಧಾರಾಕಾರ ಮಳೆಯಾಗಿದೆ. ಕೊಪ್ಪಳ, ಶಿವಮೊಗ್ಗ, ಬೆಳಗಾವಿ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸಹ ಉತ್ತಮ ಮಳೆಯಾಗಿದೆ.

ದಾವಣಗೆರೆ ಜಿಲ್ಲೆಯಲ್ಲಿ ಕಳೆದ 24 ಗಂಟೆಗಳ ಅವಧಿಯಲ್ಲಿ 36 ಮಿ.ಮೀ ಮಳೆ ಸುರಿದಿದೆ. ಚಿತ್ರದುರ್ಗ ಜಿಲ್ಲೆಯ ವಾಣಿವಿಲಾಸ ಸಾಗರಕ್ಕೆ ಒಳಹರಿವಿನಲ್ಲಿ ಹೆಚ್ಚಳವಾಗಿದೆ.

ಕೋಲಾರ ಜಿಲ್ಲೆಯಲ್ಲಿ ಐದು ದಿನಗಳಿಂದ ಮಳೆ ಬಿಟ್ಟು ಬಿಟ್ಟು ಸುರಿಯುತ್ತಿದೆ. ಕೋಲಾರಮ್ಮ ಕೆರೆ ಮತ್ತೆ ಭರ್ತಿಯಾಗಿದ್ದು, ಕೋಡಿ ಹರಿಯುತ್ತಿದೆ. ಅಂತರಗಂಗೆ ಬೆಟ್ಟದಲ್ಲಿ ಝರಿಗಳು ಸೃಷ್ಟಿಯಾಗಿದ್ದು, ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ವೀಕ್ಷಣೆಗೆ ಬರುತ್ತಿದ್ದಾರೆ.



ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ಮೊರಬ ಹಾಗೂ ಗುಮ್ಮಗೋಳ ನಡುವೆ ರಭಸವಾಗಿ ಹರಿಯುತ್ತಿರುವ ತುಪ್ಪರಿ ಹಳ್ಳದಲ್ಲಿ ಟ್ರ್ಯಾಕ್ಟರ್ ಮೂಲಕ ಜನರನ್ನು ಸ್ಥಳಾಂತರಗೊಳಿಸಲಾಯಿತು ಪ್ರಜಾವಾಣಿ ಚಿತ್ರ: ಬಿ.ಎಂ.ಕೇದಾರನಾಥ



ಭಾರಿ ಮಳೆಯಿಂದಾಗಿ ದಾವಣಗೆರೆ ತಾಲ್ಲೂಕಿನ ಅಣಜಿ ಕೆರೆಗೆ ಕೋಡಿ ಬಿದ್ದು, ನೀರು ರಸ್ತೆ ಮೇಲೆ ಹರಿಯುತ್ತಿರುವುದರಿಂದ ವಾಹನ ಸಂಚಾರ ಬಂದ್ ಆಗಿದೆ. ಸ್ಥಳೀಯರು ನೀರನ್ನು ವೀಕ್ಷಿಸಿದರು – ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

ಇಂದು ಕೆಲವೆಡೆ ಗುಡುಗು ಸಹಿತ ಮಳೆ

ಬೆಂಗಳೂರು: ರಾಜ್ಯದ ಉತ್ತರ ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಕೆಲವೆಡೆ ಬುಧವಾರ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕಲಬುರಗಿ, ಯಾದಗಿರಿ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ ಹಾಗೂ ಚಾಮರಾಜನಗರ ಜಿಲ್ಲೆಗೆ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ. ಕರಾವಳಿಯ ಹಲವು ಕಡೆ ಸಾಧಾರಣ, ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನ ವಿವಿಧ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಬೆಂಗಳೂರು ನಗರದಲ್ಲಿ ಸಾಮಾನ್ಯವಾಗಿ ಮೋಡ ಕವಿದ ವಾತಾವರಣ ಇರಲಿದ್ದು, ಕೆಲವು ಬಾರಿ ಗುಡುಗು ಸಹಿತ ಮಳೆಯಾಗಲಿದೆ ಎಂದು ಇಲಾಖೆ ಹೇಳಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.36	14,190	4,958
ಹಾರಂಗಿ	2,859	2858.12	1,243	1,250
ಕಬಿನಿ	2,284	2282.23	3,590	1,350
ಹೇಮಾವತಿ	2,922	2,921.20	2,664	2,607
ಲಿಂಗನಮಕ್ಕಿ	1,819	1,814	4,185	7,516
ಸೂಪಾ (ಮೀ)	564	553.56	1,694	2,534
ಮಾಣಿ	595	589.83	177	741
ತುಂಗಭದ್ರಾ	1,633	1,633	39,992	40,483
ಮಲಪ್ರಭಾ	2079.50	2,079.50	294	294
ಘಟಪ್ರಭಾ	2,175	2,174.60	1,484	198
ಭದ್ರಾ	186	186	2,591	2,291
ಆಲಮಟ್ಟಿ (ಮೀ)	519.60	519.60	39,451	39,451
ನಾರಾಯಣಪುರ (ಮೀ)	492.25	492.08	30,000	23,600

*ನೆಲಮಟ್ಟದಿಂದ

ಬೊಮ್ಮಾಯಿ – ಯಡಿಯೂರಪ್ಪ ಜನಸಂಕಲ್ಪ ಯಾತ್ರೆ ಆರಂಭ

ಒಂದನೇ ಪುಟದಿಂದ

ಬಿ.ಎಸ್. ಯಡಿಯೂರಪ್ಪ ಮಾತನಾಡಿ, ‘ದೇಶದಲ್ಲಿ ಶೇ 73 ರಷ್ಟು ಜನ ನರೇಂದ್ರ ಮೋದಿ ಪರ ಒಲವು ಹೊಂದಿದ್ದಾರೆ ಎಂಬುದು ಸಮೀಕ್ಷೆಯಿಂದ ಗೊತ್ತಾಗಿದೆ. ರಾಜ್ಯದಲ್ಲಿ ಬಿಜೆಪಿ 150 ಸ್ಥಾನ ಗೆಲ್ಲುವುದು ಯಾರಿಂದಲೂ ತಡೆಯಲಾಗದು’ ಎಂದರು.

ರಾಯಚೂರು ಗ್ರಾಮೀಣ ಕ್ಷೇತ್ರದಿಂದ ಸುಮಾರು 40 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಗ್ರಾಮಗಳಿಂದ ಜನರಿಗೆ ಬರಲು ವಾಹನ ವ್ಯವಸ್ಥೆ ಮತ್ತು ಕಾರ್ಯಕ್ರಮದಲ್ಲಿ ಭೋಜನ ವ್ಯವಸ್ಥೆ ಮಾಡಲಾಗಿತ್ತು. ಕಾರ್ಯಕ್ರಮದಲ್ಲಿ ಮಕ್ಕಳು, ಮಹಿಳೆಯರು ಅಧಿಕ ಸಂಖ್ಯೆಯಲ್ಲಿದ್ದರು.

ಸಚಿವರಾದ ಬಿ.ಶ್ರೀರಾಮುಲು, ಗೋವಿಂದ ಕಾರಜೋಳ, ಶಂಕರ ಪಾಟೀಲ, ಸಂಸದರಾದ ಕರಡಿ ಸಂಗಣ್ಣ, ರಾಜಾ ಅಮರೇಶ್ವರ ನಾಯಕ, ಶಾಸಕ ಶಿವನಗೌಡ ನಾಯಕ, ಬಿಜೆಪಿ ಎಸ್‌ಟಿ ಮೋರ್ಚಾ ರಾಜ್ಯಾಧ್ಯಕ್ಷ ತಿಪ್ಪರಾಜ ಹವಾಲ್ದಾರ್, ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಮತ್ತು ರಾಜ್ಯದ ಬಿಜೆಪಿ ಉಸ್ತುವಾರಿ ಅರುಣಾ ಡಿ.ಕೆ. ಇದ್ದರು.

ರಸಪ್ರಶ್ನೆ ಸ್ಪರ್ಧೆ: ತ್ರಿಶಾಗೆ ಪ್ರಥಮ ಬಹುಮಾನ

ಪ್ರಜಾವಾಣಿ ವಾರ್ತೆ



ಎಚ್‌.ವಿ. ತ್ರಿಶಾ



ಚಂದನಾ ಆರ್.



ಸಿದ್ದಲಿಂಗ

ಬೆಂಗಳೂರು: ಸ್ವಾತಂತ್ರ್ಯ ಅಮೃತ ಮಹೋತ್ಸವದ ಪ್ರಯುಕ್ತ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ನಡೆಸಿದ ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ಕೋಲಾರದ ಶ್ರೀವೇಣು ವಿದ್ಯಾಸಂಸ್ಥೆಯ ವಿದ್ಯಾರ್ಥಿನಿ ಎಚ್.ವಿ. ತ್ರಿಶಾ ಪ್ರಥಮ ಸ್ಥಾನ ಪಡೆದಿದ್ದಾರೆ.

ವಿಜಯನಗರದ ವೀರಭದ್ರೇಶ್ವರ ಪ್ರೌಢಶಾಲೆಯ ವಿದ್ಯಾರ್ಥಿನಿ ಚಂದನಾ ಆರ್. ದ್ವಿತೀಯ ಬಹುಮಾನ, ಬೀದರ್‌ನ ಡಾ. ಚನ್ನಬಸವ ಪಟ್ಟದ್ದೇವರ ಗುರುಕುಲ ಶಾಲೆಯ ವಿದ್ಯಾರ್ಥಿ ಸಿದ್ದಲಿಂಗ ತೃತೀಯ ಬಹುಮಾನ ಪಡೆದಿದ್ದಾರೆ. ಈ ಬಹುಮಾನಗಳು ಕ್ರಮವಾಗಿ ₹ 6 ಸಾವಿರ, ₹ 5 ಸಾವಿರ ಹಾಗೂ ₹ 4 ಸಾವಿರ ನಗದು ಒಳಗೊಂಡಿವೆ.

ಕೋಲಾರದ ಅಮರಜ್ಯೋತಿ ಶಾಲೆಯ ಹೇಮಂತ ಕುಮಾರ್, ಹಾಸನದ ಪ್ರಿಯದರ್ಶಿನಿ ಪ್ರೌಢಶಾಲೆಯ ಲಿಖಿತ್ ಗೌಡ, ಯುನೈಟೆಡ್ ಪ್ರೌಢಶಾಲೆಯ ಪ್ರಣತಿ, ವಿಜಯಪುರದ ಎಸ್.ಎಸ್.ಎಂ.ಎಸ್ ಶಾಲೆಯ ಸಮರ್ಥ ಬನಸೋಡೆ, ಶಿವಮೊಗ್ಗದ ರಾಮಕೃಷ್ಣ ವಿದ್ಯಾನಿಕೇತನದ ಅಂಕಿತ ಯು.ವಿ., ಚಿಕ್ಕಮಗಳೂರಿನ ದೀಕ್ಷಾ ವಿದ್ಯಾಮಂದಿರದ ಹೊನ್ನಂಗಿ ಎಸ್.ವೈ., ಬೆತನಿ ಪ್ರೌಢಶಾಲೆಯ ರಚನಾ, ಹಾದಿಕೆರೆಸರ್ಕಾರಿ ಪ್ರೌಢಶಾಲೆಯ ಎಚ್.ಎಸ್. ಚಂದ್ರಮತಿ ಹಾಗೂ ಉಡುಪಿಯ ಜ್ಞಾನಸುಧಾ ಆಂಗ್ಲಮಾಧ್ಯಮ ಶಾಲೆ ಮನೋಜ್ ಕಾಮತ್ ಅವರಿಗೆ ಸಮಾಧಾನಕರ ಬಹುಮಾನ (ತಲಾ ₹ 1 ಸಾವಿರ ನಗದು) ಬಂದಿದೆ ಎಂದು ಸಮಿತಿ ರಾಜ್ಯ ಕಾರ್ಯದರ್ಶಿ ಈ.ಬಸವರಾಜು ತಿಳಿಸಿದ್ದಾರೆ.

ಅಕ್ರಮ ಪೌತಿ ಖಾತೆ ಆರೋಪ: ಇನ್ಸ್‌ಪೆಕ್ಟರ್ ನಿರ್ಧಾರಕ್ಕೆ ತಹಶೀಲ್ದಾರ್ ಅಸಮಾಧಾನ

ತಹಶೀಲ್ದಾರ್, ಆರ್‌ಐ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಮೈಸೂರು: ಕೋಟ್ಯಂತರ ರೂಪಾಯಿ ಮೌಲ್ಯದ ಜಮೀನನ್ನು ಕಾನೂನು ಬಾಹಿರವಾಗಿ ಪೌತಿ ಖಾತೆ ಮಾಡಿದ ಆರೋಪದ ಮೇರೆಗೆ ಇಲ್ಲಿನ ತಹಶೀಲ್ದಾರ್, ಗ್ರಾಮ ಲೆಕ್ಕಿಗ ಹಾಗೂ ರಾಜಸ್ವ ನಿರೀಕ್ಷಕ ಸೇರಿದಂತೆ ಐವರ ವಿರುದ್ಧ ವಿದ್ಯಾರಣ್ಯಪುರ ಠಾಣೆಯಲ್ಲಿ ವಂಚನೆ ಪ್ರಕರಣ ದಾಖಲಾಗಿದೆ.

ನಗರದ ವಿಜಯನಗರದ ನಿವಾಸಿ ತಿರುಮಲೈ ರೋಲರ್ ಫ್ಲೋರ್ ಮಿಲ್ ಪ್ರೈವೇಟ್ ಲಿಮಿಟೆಡ್‌ನ ನಿರ್ದೇಶಕ ಶ್ರೀಕಂಠಪ್ಪ ಅವರ ದೂರನ್ನು ಆಧರಿಸಿ ಮೂವರು ಅಧಿಕಾರಿಗಳು ಹಾಗೂ ಜಯಲಕ್ಷ್ಮೀಭಾಯಿ, ಜಯಶ್ರೀ ಎಂಬುವವರ ವಿರುದ್ಧ ಪ್ರಕರಣ ದಾಖಲಾಗಿದೆ.

ವಿವರ: ಮೈಸೂರಿನ ಕಸಬಾ ಹೋಬಳಿ ಸರ್ವೆ ನಂ 155/2ರಲ್ಲಿ 2.06 ಖರಾಬು ಭೂಮಿಯನ್ನು 1975ರಲ್ಲಿ ಆರ್.ವೆಂಕಟಪ್ಪ ಹೆಸರಿಗೆ ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿಸಿ ನೀಡಲಾಗಿತ್ತು. 1982ರಲ್ಲಿ ಫ್ಲೋರ್ ಮಿಲ್ ನಿರ್ದೇಶಕರಾಗಿದ್ದ ನರಸಿಂಹಣ್ಣ ಅವರು ಆರ್. ವೆಂಕಟಪ್ಪ, ವೆಂಕಟರಾಮ್, ಕೃಷ್ಣ ಅವರಿಂದ ಖರೀದಿಸಿ ನೋಂದಣಿ ಮಾಡಿಕೊಂಡಿದ್ದರು. ಆದರೆ, ನರಸಿಂಹಣ್ಣ ಅವರು ಮೂಲಕ್ರಯಪತ್ರವನ್ನು ಕಂಪನಿಗೆ ನೀಡಿರಲಿಲ್ಲ. 1999ರಲ್ಲಿ ಅವರು ನಿಧನರಾಗಿದ್ದರು.

‘ಸದರಿ ಜಮೀನಿಗೆ, 1999ರಲ್ಲಿ ₹ 19.47 ಲಕ್ಷ ಪಾವತಿಸಿ, ಏಕನಿವೇಶನ ಕೈಗಾರಿಕಾ ವಿನ್ಯಾಸ ನಕ್ಷೆ ಪಡೆದುಕೊಂಡಿದ್ದು, ಭೂಮಿಯ ಮೇಲೆ ಕಂದಾಯ ಇಲಾಖೆಗೆ ಯಾವುದೇ ಹಕ್ಕಿಲ್ಲ. ಆದರೂ ನರಸಿಂಹಣ್ಣ ಅವರ ಮಕ್ಕಳಾದ ಜಯಲಕ್ಷ್ಮಿಭಾಯಿ, ಜಯಶ್ರೀಗೆ ಪೌತಿ ಖಾತೆ ಮಾಡಿಕೊಡಲಾಗಿದೆ’ ಎಂದು ಶ್ರೀಕಂಠಪ್ಪ ದೂರಿದ್ದಾರೆ. ‘ಆರೋಪಿಗಳಿಂದ ಜೀವ ಭಯವಿದ್ದು ರಕ್ಷಣೆ ನೀಡಬೇಕು’ ಎಂದು ಮನವಿ ಮಾಡಿದ್ದಾರೆ.

ನನ್ನ ಪಾತ್ರವಿಲ್ಲ–ತಹಶೀಲ್ದಾರ್: ‘ವಿಎ, ಆರ್‌ಐ ಹಂತದಲ್ಲಿ ಪೌತಿ ಖಾತೆ ಮಾಡಲಾಗುವುದರಿಂದ ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ. ಖಾತೆ ಬಗ್ಗೆ ತಕರಾರಿದ್ದರೆ ತಹಶೀಲ್ದಾರ್ ಹಂತದಲ್ಲಿ ವಿಚಾರಣೆ ನಡೆಸಿ, ತೀರ್ಮಾನ ತೆಗೆದುಕೊಳ್ಳಲಾಗುತ್ತದೆ. ಆದರೆ, ಖಾತೆ ಮಾಡುವ ವೇಳೆ ತಕರಾರು ಸಲ್ಲಿಕೆಯಾಗಿರಲಿಲ್ಲ’ ಎಂದು ತಹಶೀಲ್ದಾರ್ ಗಿರೀಶ್ ಬಿ.ಎನ್. ‘ಪ್ರಜಾವಾಣಿ’ಗೆ ಪ್ರತಿಕ್ರಿಯೆ ನೀಡಿದ್ದಾರೆ.

‘ತಾಲ್ಲೂಕು ದಂಡಾಧಿಕಾರಿ ವಿರುದ್ಧ ಎಫ್‌ಐಆರ್ ದಾಖಲಿಸಲು ಪೊಲೀಸ್ ಇನ್‌ಸ್ಪೆಕ್ಟರ್‌ಗೆ ಅಧಿಕಾರವಿಲ್ಲ. ಸರ್ಕಾರದ ಪ್ರಧಾನ ಕಾರ್ಯದರ್ಶಿಗೆ ಮಾಹಿತಿ ನೀಡಿ ಪ್ರಾಥಮಿಕ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳಬೇಕಿತ್ತು’ ಎಂದು ತಿಳಿಸಿದರು.

ಪಿಎಸ್‌ಐ ಅಕ್ರಮ: ಭ್ರಷ್ಟಾಚಾರ ಕಾಯ್ದೆಯಡಿ ಪ್ರಕರಣ

ಬೆಂಗಳೂರು: 545 ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಅಕ್ರಮದ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು, ಪೊಲೀಸ್ ನೇಮಕಾತಿ ವಿಭಾಗದ ಎಡಿಜಿಪಿ ಅಮ್ರಿತ್ ಪೌಲ್ ಹಾಗೂ ಡಿವೈಎಸ್ಪಿ ಶಾಂತಕುಮಾರ್ ಸೇರಿ ಎಲ್ಲ ಆರೋಪಿಗಳ ವಿರುದ್ಧ ಭ್ರಷ್ಟಾಚಾರ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದಾರೆ.

‘ನೇಮಕಾತಿಯಲ್ಲಿ ಅಕ್ರಮದಲ್ಲಿ ನೂರಾರು ಕೋಟಿ ರೂಪಾಯಿ ವಹಿವಾಟು ನಡೆದಿದೆ. ಬಂಧಿತರಲ್ಲಿ ಬಹುತೇಕರು ಸರ್ಕಾರಿ ನೌಕರರು. ಭ್ರಷ್ಟಾಚಾರ ಕಾಯ್ದೆಯಡಿ ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ಮಾಹಿತಿ ನೀಡಲಾಗಿದೆ’ ಎಂದು ಮೂಲಗಳು ಹೇಳಿವೆ.

ಭಾಷೆ- ಸಂಸ್ಕೃತಿಗೆ ಒತ್ತು ಕೊಡುವ ಚಿತ್ರಗಳಿಗೆ ಹೆಚ್ಚಿನ ನೆರವು: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಭಾಷೆ, ಸಂಪ್ರದಾಯ, ಸಂಸ್ಕೃತಿ ಮತ್ತು ನಮ್ಮ ನೆಲದ ಕತೆಗಳಿಗೆ ಪ್ರಾಮುಖ್ಯತೆ ಕೊಡುವ ಕನ್ನಡ ಚಿತ್ರಗಳಿಗೆ ಇನ್ನಷ್ಟು ಸೌಲಭ್ಯಗಳು ಮತ್ತು ಸಹಕಾರ ನೀಡುವುದಾಗಿ ಚಿತ್ರೋದ್ಯಮಕ್ಕೆ ರಾಜ್ಯ ಸರ್ಕಾರ ಭರವಸೆ ನೀಡಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಚಿತ್ರೋದ್ಯಮದ ಪ್ರಮುಖರು ಭೇಟಿ ಮಾಡಿದಾಗ ಈ ಭರವಸೆ ನೀಡಿದ್ದಾರೆ. ಚಲನಚಿತ್ರ ನಿರ್ದೇಶಕರಾದ ಗಿರೀಶ್ ಕಾಸರವಳ್ಳಿ, ರಾಜೇಂದ್ರಸಿಂಗ್ ಬಾಬು, ನಾಗತಿಹಳ್ಳಿ ಚಂದ್ರಶೇಖರ್, ಪಿ.ಶೇಷಾದ್ರಿ, ಟಿ.ಎನ್. ಸೀತಾರಾಂ, ಬಿ.ಎಸ್.ಲಿಂಗದೇವರು, ನಂಜುಂಡೇಗೌಡ, ಬಿ.ರಾಮಮೂರ್ತಿ, ಕೃಷ್ಣೇಗೌಡ ಅವರು ಭೇಟಿ ಮಾಡಿ, ಚಿತ್ರರಂಗದ ಸಮಸ್ಯೆಗಳು ಮತ್ತು ಸವಾಲುಗಳ ಬಗ್ಗೆ ಚರ್ಚೆ ನಡೆಸಿದರು.

ಈ ಸಂದರ್ಭದಲ್ಲಿ ಹಾಜರಿದ್ದ ಗೃಹ ಸಚಿವ ಆರಗ ಜ್ಞಾನೇಂದ್ರ, ಕನ್ನಡ ಚಿತ್ರರಂಗಕ್ಕೆ ಆಗಬೇಕಾಗಿರುವ ಎಲ್ಲ ಕೆಲಸಗಳನ್ನು ಆದ್ಯತೆ ಮೇರೆಗೆ ಮಾಡಿಕೊಡಲು ಗೃಹ ಇಲಾಖೆ ಸಿದ್ಧವಿದೆ. ಜನತಾ ಚಿತ್ರಮಂದಿರಗಳನ್ನು ನಿರ್ಮಿಸಲು ಇರುವ ಕಾನೂನು ತೊಡಕುಗಳನ್ನು ಶೀಘ್ರದಲ್ಲೇ ಪರಿಹರಿಸಿಕೊಡಲು ಮತ್ತೊಂದು ಸಭೆಯನ್ನು ನಿಗದಿ ಮಾಡಲಾಗುವುದು ಎಂದು ಭರವಸೆ ನೀಡಿದರು.

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಮಾತನಾಡಿ, ಚಲನಚಿತ್ರಗಳಿಗೆ ಸಹಾಯಧನ ಮಾನದಂಡಗಳ ನಿಯಮಾವಳಿಗಳನ್ನು ಇನ್ನಷ್ಟು ಬಿಗಿಗೊಳಿಸಿ, ಅರ್ಹ ಚಿತ್ರಗಳಿಗೆ ಮಾತ್ರ ಸಹಾಯಧನ ಸಿಗುವಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.



ರಾಜ್ಯ ಸರ್ಕಾರ ನಿರ್ಮಿಸಿರುವ ‘ನಾದದ ನವನೀತ’ ಸಾಕ್ಷ್ಯಚಿತ್ರಕ್ಕೆ ‘ರಜತ ಕಮಲ’ ಪ್ರಶಸ್ತಿ ಸಂದಿದ್ದು, ಈ ಸಾಕ್ಷ್ಯಚಿತ್ರವನ್ನು ನಿರ್ದೇಶಿರುವ ಗಿರೀಶ್ ಕಾಸರವಳ್ಳಿಯವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿನಂದಿಸಿದರು. ಗೃಹ ಸಚಿವ ಆರಗ ಜ್ಞಾನೇಂದ್ರ, ಚಿತ್ರ ನಿರ್ದೇಶಕರಾದ ರಾಜೇಂದ್ರಸಿಂಗ್ ಬಾಬು, ಟಿ.ಎನ್‌.ಸೀತಾರಾಮ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಪಿ.ಎಸ್. ಹರ್ಷ ಇದ್ದರು.

ಮಹಾಕಾಲೇಶ್ವರ ಕಾರಿಡಾರ್ ಮೊದಲ ಹಂತ ಉದ್ಘಾಟಿಸಿದ ಪ್ರಧಾನಿ ಮೋದಿ

‘ಮಹಾಕಾಲ ಲೋಕ’ ಲೋಕಾರ್ಪಣೆ

ಉಜ್ಜೈನ್ (ಪಿಟಿಐ): ಮಹಾಕಾಲ ಲೋಕ ಕಾರಿಡಾರ್ ಯೋಜನೆಯ ಮೊದಲ ಹಂತವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಉದ್ಘಾಟಿಸಿದ್ದಾರೆ. ಅದಕ್ಕೂ ಮುಂಚೆ ಮೋದಿ ಅವರು ಮಹಾಕಾಲೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು. 12 ಜ್ಯೋತಿರ್ಲಿಂಗಗಳಲ್ಲಿ ಒಂದೆಂದು ಪರಿಗಣಿತವಾಗಿರುವ ಮಹಾಕಾಲೇಶ್ವರ ದೇವಾಲಯದ ಗರ್ಭಗುಡಿಗೆ ಮೋದಿ ಅವರು ಸಂಜೆ 6 ಗಂಟೆಗೆ ಪ್ರವೇಶಿಸಿದರು.

ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಮತ್ತು ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು ಮೋದಿ ಅವರ ಜತೆಗೆ ಗರ್ಭಗುಡಿಯ ತನಕ ಸಾಗಿದರು. ಗರ್ಭಗುಡಿಯೊಳಗೆ ಮೋದಿ ಅವರೊಬ್ಬರೇ ಹೋದರು. ಮೋದಿ ಅವರು ವಿಧಿವತ್ತಾಗಿ ಪೂಜೆ ನಡೆಸಿದರು. ಮುಖ್ಯ ಅರ್ಚಕ ಘನಶ್ಯಾಮ ಪೂಜಾರಿ ಅವರು ಸುಮಾರು 20 ನಿಮಿಷ ಮಂತ್ರಗಳನ್ನು ಪಠಿಸಿದರು.

ವಿಧಿ ವಿಧಾನಗಳ ಬಳಿಕ ಮೋದಿ ಅವರು ಕೈಯಲ್ಲಿ ಬಿಲ್ವಪತ್ರೆ ಹಿಡಿದು ಸುಮಾರು ಹತ್ತು ನಿಮಿಷ ಧ್ಯಾನಸ್ಥರಾಗಿದ್ದರು. ಬಳಿಕ ಶಿವನ ವಾಹನ ನಂದಿಯ ಪ್ರತಿಮೆಯ ಸಮೀಪ ಐದು ನಿಮಿಷ ಕುಳಿತು ಪ್ರಾರ್ಥಿಸಿದರು. ನಂತರ, ವಿಶೇಷ ಪೆಟ್ಟಿಗೆಯಲ್ಲಿ ದೇಣಿಗೆ ನೀಡಿದರು.

ಮೋದಿ ಅವರು ಚೌಹಾಣ್ ಮತ್ತು ರಾಜ್ಯದ ರಾಜ್ಯಪಾಲ ಮಂಗುಭಾಯಿ ಪಟೇಲ್ ಅವರ ಜತೆಗೆ ದೇಗುಲದ ಆವರಣದಲ್ಲಿ ಒಂದು ಪ್ರದಕ್ಷಿಣೆ ಹಾಕಿದರು.


ಮಹಾಕಾಲೇಶ್ವರ ದೇಗುಲ ಕಾರಿಡಾರ್ ಅಭಿವೃದ್ಧಿಯು ₹866 ಕೋಟಿ ವೆಚ್ಚದ ಯೋಜನೆ. ಅದರ ಮೊದಲ ಹಂತ ‘ಮಹಾಕಾಲ ಲೋಕ’ವನ್ನು ₹316 ಕೋಟಿ ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದೆ.

ಮಹಾಕಾಲ ಲೋಕ ಕಾರಿಡಾರ್ 900 ಮೀಟರ್‌ಗೂ ಅಧಿಕ ಉದ್ದವಿದೆ. ಇದು ಹಳೆಯ ರುದ್ರಸಾಗರ ಸರೋವರದ ಸುತ್ತ ಇದೆ. ಇದು ದೇಶದಲ್ಲಿಯೇ ಈ ರೀತಿಯ ಅತ್ಯಂತ ದೊಡ್ಡ ಕಾರಿಡಾರ್ ಎನ್ನಲಾಗಿದೆ. ಯೋಜನೆಯ ಭಾಗವಾಗಿ ರುದ್ರಸಾಗರ ಸರೋವರವನ್ನೂ ಅಭಿವೃದ್ಧಿಪಡಿಸಲಾಗಿದೆ. ಎರಡು ಭವ್ಯ ದ್ವಾರಗಳನ್ನು– ನಂದಿ ದ್ವಾರ ಮತ್ತು ಪಿನಾಕಿ ದ್ವಾರ– ನಿರ್ಮಿಸಲಾಗಿದೆ. ಇವು ಕಾರಿಡಾರ್‌ನ ಆರಂಭದಲ್ಲಿ ಇವೆ.

108 ಅಲಂಕಾರಿಕ ಸ್ತಂಭಗಳು, ಕಾರಂಜಿಗಳು, ಶಿವ ಪುರಾಣದ ಕತೆ ಹೇಳುವ 50ಕ್ಕೂ ಹೆಚ್ಚು ಭಿತ್ತಿಚಿತ್ರಗಳು ಮಹಾಕಾಲ ಲೋಕದ ಭಾಗಗಳಾಗಿವೆ.



ಪ್ರಧಾನಿ ಮೋದಿ ಅವರು ಮಹಾಕಾಲ ಲೋಕ ಉದ್ಘಾಟನೆಗೆ ಮೊದಲು ಮಹಾಕಾಲೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು ಪಿಟಿಐ ಚಿತ್ರ



ಮಹಾಕಾಲ ಲೋಕ ಕಾರಿಡಾರ್‌ನ ಒಂದು ದೃಶ್ಯ ಪಿಟಿಐ ಚಿತ್ರ

ಪಂಚತಾರಾ ಧರ್ಮಶಾಲೆ

ಪಂಚತಾರಾ ಹೋಟೆಲ್ ಸೌಲಭ್ಯ ಇರುವ 40 ಕೊಠಡಿಗಳ ಧರ್ಮಶಾಲೆಯನ್ನು ಎರಡನೇ ಹಂತದಲ್ಲಿ ನಿರ್ಮಿಸಲಾಗುತ್ತಿದೆ. ಮಹಾಕಾಲೇಶ್ವರ ದೇವಾಲಯದ ಸಮೀಪದಲ್ಲಿಯೇ ಇರುವ ಪಾರಂಪರಿಕ ಕಟ್ಟಡದಲ್ಲಿ ಈ ಧರ್ಮಶಾಲೆ ಇರಲಿದೆ. ಈ ಕಟ್ಟಡದಿಂದ ದೇವಾಲಯವು ಸ್ಪಷ್ಟವಾಗಿ ಕಾಣಿಸುತ್ತದೆ. ಎರಡನೇ ಹಂತದ ಯೋಜನೆಯ ಕೆಲಸಗಳು ಈಗಾಗಲೇ ಆರಂಭವಾಗಿವೆ. 2023ರ ಜೂನ್‌ನಲ್ಲಿ ಎರಡನೇ ಹಂತ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ದೇವಾಲಯದ ಗೋಪುರವನ್ನು ಸ್ಪಷ್ಟವಾಗಿ ನೋಡುವುದಕ್ಕಾಗಿ ‘ಶಿಖರ ದರ್ಶನ’ ಎಂಬ ವೇದಿಕೆಯ ನಿರ್ಮಾಣವೂ ಆಗಲಿದೆ. ದೇವಾಲಯದ ಎದುರು ಭಾಗದಲ್ಲಿ ಐದೂವರೆ ಎಕರೆ ಖಾಲಿ ಸ್ಥಳವೂ ಇದೆ. ಇಲ್ಲಿ ಚಿಂತನವನ, ಅನುಭೂತಿ ವನ ಮತ್ತು ಧ್ಯಾನ ಕೇಂದ್ರವನ್ನು ನಿರ್ಮಿಸಲಾಗುವುದು ಎಂದು ಉಜ್ಜೈನ್ ಸ್ಮಾರ್ಟ್ ಸಿಟಿ ಯೋಜನೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆಶೀಶ್ ಕುಮಾರ್ ಪಾಠಕ್ ತಿಳಿಸಿದ್ದಾರೆ.

ಕ್ಷಿಪ್ರ ನದಿಯ ದಂಡೆಯಲ್ಲಿರುವ ರಾಮ ಘಾಟ್ ಅನ್ನು ಎರಡನೇ ಹಂತದಲ್ಲಿ ಅಭಿವೃದ್ಧಿಪಡಿಸಲಾಗುವುದು. ಎರಡನೇ ಹಂತದ ಯೋಜನೆಯ ಒಟ್ಟು ವೆಚ್ಚ ₹450 ಕೋಟಿ ಎಂದು ಅಂದಾಜಿಸಲಾಗಿದೆ.

ಬಿಜೆಪಿ–ಕಾಂಗ್ರೆಸ್ ವಾಗ್ವಾದ

ಮಧ್ಯಪ್ರದೇಶದಲ್ಲಿ ಕಾಂಗ್ರೆಸ್‌ನ ಕಮಲನಾಥ್ ನೇತೃತ್ವದ ಸರ್ಕಾರ ಇದ್ದಾಗ ಮಹಾಕಾಲೇಶ್ವರ ಅಭಿವೃದ್ಧಿ ಯೋಜನೆ ಸಿದ್ಧಪಡಿಸಲಾಗಿತ್ತು ಎಂದು ಕಾಂಗ್ರೆಸ್ ಹೇಳಿದೆ. ಆದರೆ, ಆಡಳಿತಾರೂಢ ಬಿಜೆಪಿ ಇದನ್ನು ಅಲ್ಲಗಳೆದಿದೆ.

2019ರ ಆಗಸ್ಟ್‌ನಲ್ಲಿ ಈ ಯೋಜನೆ ಸಿದ್ಧವಾಗಿತ್ತು. ಆಗ ಕಮಲನಾಥ ಮುಖ್ಯಮಂತ್ರಿ ಆಗಿದ್ದರು ಎಂದು ಮಧ್ಯಪ್ರದೇಶ ವಿಧಾನಸಭೆಯ ವಿರೋಧ ಪಕ್ಷ ನಾಯಕ ಡಾ. ಗೋವಿಂದ ಸಿಂಗ್ ಹೇಳಿದ್ದಾರೆ.

ಯೋಜನೆಯ ಪ್ರಸ್ತಾವ 2017ರಲ್ಲಿ ಸಿದ್ಧವಾಗಿತ್ತು. ಮತ್ತೊಂದು ವರ್ಷದೊಳಗೆ ವಿವರವಾದ ಯೋಜನೆ ಸಿದ್ಧಪಡಿಸಲಾಗಿತ್ತು. 2018ರಲ್ಲಿ ಕಾಮಗಾರಿಗಳ ಟೆಂಡರ್ ಕರೆಯಲಾಗಿತ್ತು. ಈ ಎಲ್ಲ ಅವಧಿಯಲ್ಲಿಯೂ ಶಿವರಾಜ್ ಸಿಂಗ್ ಚೌಹಾಣ್ ಅವರೇ ಮುಖ್ಯಮಂತ್ರಿಯಾಗಿದ್ದರು ಎಂದು ಮಧ್ಯಪ್ರದೇಶ ಗೃಹ ಸಚಿವ ನರೋತ್ತಮ ಮಿಶ್ರಾ ಹೇಳಿದ್ದಾರೆ.

ಕಾಂಗ್ರೆಸ್ ಸರ್ಕಾರ ಇದ್ದ ಅವಧಿಯಲ್ಲಿ ಯೋಜನೆಯು ನನೆಗುದಿಗೆ ಬಿದ್ದಿತ್ತು. ಚೌಹಾಣ್ ಅವರು ಮುಖ್ಯಮಂತ್ರಿಯಾಗಿ 2020ರಲ್ಲಿ ಮರಳಿ ಅಧಿಕಾರಕ್ಕೆ ಬಂದ ಬಳಿಕವೇ ಯೋಜನೆ ಜೀವ ಪಡೆಯಿತು ಎಂದು ಮಿಶ್ರಾ ಹೇಳಿದ್ದಾರೆ.

ಜಯಪ್ರಕಾಶ ನಾರಾಯಣರ ಪ್ರತಿಮೆ ಅನಾವರಣ

ಕಾಂಗ್ರೆಸ್ ತೊಡೆ ಮೇಲೆ ಕುಳಿತ ಸಮಾಜವಾದಿಗಳು: ಶಾ ಟೀಕೆ

ಸಿತಾಬ್ ದಿಯಾರಾ (ಬಿಹಾರ) (ಪಿಟಿಐ): ಜಯಪ್ರಕಾಶ ನಾರಾಯಣ (ಜೆಪಿ) ಅವರ ಅನುಯಾಯಿಗಳು ಎಂದು ಹೇಳಿಕೊಳ್ಳುತ್ತಿರುವವರು ಸಮಾಜವಾದಿ ಸಿದ್ಧಾಂತವನ್ನು ಅಧಿಕಾರಕ್ಕಾಗಿ ಕೈಬಿಟ್ಟು ಕಾಂಗ್ರೆಸ್ ಪಕ್ಷದ ತೊಡೆಯಲ್ಲಿ ಕುಳಿತಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಗಳವಾರ ಹೇಳಿದ್ದಾರೆ. ಬಿಹಾರದ ಮಹಾಮೈತ್ರಿ ಕೂಟದ ಸರ್ಕಾರವನ್ನು ಉಲ್ಲೇಖಿಸಿ ಅವರು ಹೀಗೆ ಹೇಳಿದ್ದಾರೆ.

ಸರಣ್ ಜಿಲ್ಲೆಯಲ್ಲಿರುವ ಜೆಪಿ ಅವರ ಹುಟ್ಟೂರಿನಲ್ಲಿ ಅವರ 15 ಅಡಿ ಎತ್ತರದ ಪ್ರತಿಮೆಯನ್ನು ಅನಾವರಣಗೊಳಿಸಿ ಶಾ ಹೀಗೆ ಹೇಳಿದರು.

‘ಜೆಪಿ ಅವರು ಸಿದ್ಧಾಂತಕ್ಕಾಗಿ ಹೋರಾಡಿದರು. ಅಧಿಕಾರಕ್ಕಾಗಿ ಅಲ್ಲ. ಆದರೆ, ಅವರ ಹೆಸರು ಹೇಳಿಕೊಂಡು ರಾಜಕಾರಣ ಮಾಡುತ್ತಿರುವವರು ಅಧಿಕಾರಕ್ಕಾಗಿ ಐದು ಬಾರಿ ನಿಷ್ಠೆ ಬದಲಾಯಿಸಿದ್ದಾರೆ. ಜೆಪಿ ಅವರು ಕಾಂಗ್ರೆಸ್ ವಿರುದ್ಧ ಜೀವನವೆಲ್ಲ ಹೋರಾಡಿದ್ದರೆ, ಅದೇ ಪಕ್ಷದ ತೊಡೆಯಲ್ಲಿ ಅವರ ಅನುಯಾಯಿಗಳು ಕುಳಿತಿದ್ದಾರೆ’ ಎಂದು ನಿತೀಶ್ ಕುಮಾರ್ ಅವರನ್ನು ಪರೋಕ್ಷವಾಗಿ ಉಲ್ಲೇಖಿಸಿ ಶಾ ಹೇಳಿದ್ದಾರೆ.

ಬಿಜೆಪಿ ಜತೆಗಿನ ಮೈತ್ರಿಯನ್ನು ಕೊನೆಗೊಳಿಸಿದ ನಿತೀಶ್ ಅವರು, ಬಿಜೆಪಿಯನ್ನು ತೊರೆದು ಕಾಂಗ್ರೆಸ್ ಸೇರಿದಂತೆ ಏಳು ಪಕ್ಷಗಳ ಮೈತ್ರಿಕೂಟ ರಚಿಸಿಕೊಂಡಿದ್ದಾರೆ.

ಜೆಪಿ ಅವರು ಕಾಳಜಿ ಹೊಂದಿದ್ದ ಸಮಾಜದ ದುರ್ಬಲ ವರ್ಗಗಳ ಪರವಾಗಿ ಕೆಲಸ ಮಾಡುತ್ತಿರುವವರು ಪ್ರಧಾನಿ ನರೇಂದ್ರ ಮೋದಿ ಅವರೊಬ್ಬರು ಮಾತ್ರ ಎಂದೂ ಶಾ ಹೇಳಿದ್ದಾರೆ. ಜೆಪಿ ಅವರ ಪ್ರತಿಮೆ ಸ್ಥಾಪನೆಗೂ ಪ್ರಧಾನಿ ಮೋದಿ ಅವರೇ ಕಾರಣ ಎಂದು ಶಾ ಹೇಳಿದರು.



ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಲೋಕನಾಯಕ ಜಯಪ್ರಕಾಶ ನಾರಾಯಣ ಅವರ ಪ್ರತಿಮೆ ಅನಾವರಣಗೊಳಿಸಿದ ಬಳಿಕ ಪ್ರತಿಮೆಗೆ ನಮನ ಸಲ್ಲಿಸಿದರು –ಪಿಟಿಐ ಚಿತ್ರ

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಜೆಪಿ ಅವರ 120ನೇ ಜನ್ಮದಿನ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

‘ಸದ್ದಿಲ್ಲದೆ ಮತ ಕೇಳುತ್ತಿರುವ ಕಾಂಗ್ರೆಸ್’

ಜಾಮ್‌ಕಂಡೋರ್ಣ (ಗುಜರಾತ್) (ಪಿಟಿಐ): ತಮ್ಮನ್ನು ನಿಂದಿಸುವ ಕೆಲಸವನ್ನು ಕಾಂಗ್ರೆಸ್ ಪಕ್ಷವು ಹೊರಗುತ್ತಿಗೆ ನೀಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದ್ದಾರೆ. ಆ ಪಕ್ಷವು ಗ್ರಾಮೀಣ ಪ್ರದೇಶದ ಮತಗಳನ್ನು ಬುಟ್ಟಿಗೆ ಹಾಕಿಕೊಳ್ಳುವುದಕ್ಕಾಗಿ ‘ಸದ್ದಿಲ್ಲದೆ’ ಕೆಲಸ ಮಾಡುತ್ತಿದೆ ಎಂದೂ ಅವರು ಮಂಗಳವಾರ ಹೇಳಿದ್ದಾರೆ.

ರಾಜಕೋಟ್ ಜಿಲ್ಲೆಯ ಜಾಮ್ ಕಂಡೋರ್ಣ ನಗರದಲ್ಲಿ ಸಮಾವೇಶ ಉದ್ದೇಶಿಸಿ ಅವರು ಮಾತನಾಡಿದರು. ಈ ವರ್ಷದ ಕೊನೆಯಲ್ಲಿ ಗುಜರಾತ್ ವಿಧಾನಸಭೆಗೆ ಚುನಾವಣೆ ನಡೆಯಲಿದೆ.

ಬಿಜೆಪಿ ಕಾರ್ಯಕರ್ತರು ಮತ್ತು ಬೆಂಬಲಿಗರು ಕಾಂಗ್ರೆಸ್ ಬಗ್ಗೆ ಎಚ್ಚರಿಕೆಯಿಂದ ಇರಬೇಕು ಎಂದು ಮೋದಿ ಹೇಳಿದರು. ಗುಜರಾತ್‌ನ ಆಣಂದ್‌ನಲ್ಲಿ ನಡೆದ ಸಮಾವೇಶದಲ್ಲಿಯೂ ಮೋದಿ ಅವರು ಸೋಮವಾರ ಇದೇ ಎಚ್ಚರಿಕೆ ನೀಡಿದ್ದರು.

‘ಗುಜರಾತ್‌ನ ವಿರೋಧಿಗಳು ರಾಜ್ಯದ ಹೆಸರು ಕೆಡಿಸುವುದಕ್ಕೆ ಸಾಧ್ಯವಿರುವ ಎಲ್ಲವನ್ನೂ ಕಳೆದ 20 ವರ್ಷಗಳಲ್ಲಿ ಮಾಡಿದ್ದಾರೆ. ‘ಸಾವಿನ ವ್ಯಾಪಾರಿ’ ಎಂಬುದನ್ನೂ ಸೇರಿಸಿ ನನ್ನನ್ನು ಮನಬಂದಂತೆ ನಿಂದಿಸಿದ್ದಾರೆ’ ಎಂದು ಮೋದಿ ಹೇಳಿದ್ದಾರೆ.

‘ಅವರೀಗ ದಿಢೀರನೆ ಮೌನವಾಗಿದ್ದಾರೆ. ದಾಂದಲೆ ಸೃಷ್ಟಿಸಲು, ಗದ್ದಲ ಮಾಡಲು, ನನ್ನನ್ನು ನಿಂದಿಸಲು ಬೇರೆಯವರಿಗೆ ಹೊರಗುತ್ತಿಗೆ ನೀಡಿದ್ದಾರೆ. ಕಾಂಗ್ರೆಸ್‌ನವರು ಗ್ರಾಮಗಳಿಗೆ ಸದ್ದಿಲ್ಲದೆ ಹೋಗಿ ಮತ ಕೇಳುತ್ತಿದ್ದಾರೆ. ವಿರೋಧ ಪಕ್ಷದ ಮೌನ ಕಾರ್ಯತಂತ್ರವನ್ನು ನೀವು ಅರ್ಥ ಮಾಡಿಕೊಳ್ಳಬೇಕು ಎಂದು ಎಚ್ಚರಿಸುತ್ತಿದ್ದೇನೆ. ದೆಹಲಿಯಲ್ಲಿ ಕುಳಿತು ಗುಜರಾತಿನ ವಿರುದ್ಧ ಷಡ್ಯಂತ್ರ ರೂಪಿಸಿದವರೇ ಇದೆಲ್ಲವನ್ನು ನಿಯಂತ್ರಿಸುತ್ತಿದ್ದಾರೆ’ ಎಂದು ಅವರು ಹೇಳಿದರು.

ಜಗತ್ತಿನಲ್ಲಿಯೇ ಅತ್ಯಂತ ದೊಡ್ಡದಾದ ಏಕತಾ ಪ್ರತಿಮೆಯನ್ನು ದೇಶದ ಪ್ರಥಮ ಗೃಹ ಸಚಿವ ಸರ್ದಾರ್ ವಲ್ಲಭಭಾಯ್ ಪಟೇಲ್ ಗೌರವಾರ್ಥ ನಿರ್ಮಿಸಲಾಗಿದೆ. ಜಗತ್ತಿನ ಎಲ್ಲೆಡೆಯ ಜನರು ಈ ಪ್ರತಿಮೆ ನೋಡಲು ಬರುತ್ತಿದ್ದಾರೆ. ಆದರೆ, ಒಂದು ವರ್ಗದ ಜನರು ಬರುತ್ತಿಲ್ಲ. ಕಾಂಗ್ರೆಸ್ ಕಾರ್ಯಕರ್ತರು ನಿಮಗೆ ಸಿಕ್ಕರೆ, ಒಮ್ಮೆಯಾದರೂ ಅಲ್ಲಿಗೆ ಹೋಗಿದ್ದೀರಾ ಎಂದು ಕೇಳಿ. ಹೋಗಿದ್ದರೂ ಅವರು ರಹಸ್ಯವಾಗಿಯೇ ಹೋಗಿರುತ್ತಾರೆ. ಗುಜರಾತ್‌ನ ಮಣ್ಣಿನ ಮಗನ ಮೇಲೆ ಗೌರವ ಇಲ್ಲದವರು ಗುಜರಾತ್‌ನಲ್ಲಿ ಸ್ವೀಕಾರಾರ್ಹ ಅಲ್ಲ ಎಂದರು.

ಕೇರಳ: ಇಬ್ಬರು ಮಹಿಳೆಯರ ಹತ್ಯೆ, ನರಬಲಿ ಶಂಕೆ

ಕೊಚ್ಚಿ (ಪಿಟಿಐ): ಕೇರಳದಲ್ಲಿ ಇತ್ತೀಚೆಗೆ ನಡೆದ ಇಬ್ಬರು ಮಹಿಳೆಯರ ಹತ್ಯೆಯ ಹಿಂದೆ ನರಬಲಿಯ ಶಂಕೆ ವ್ಯಕ್ತವಾಗಿದ್ದು, ಈ ಸಂಬಂಧ ದಂಪತಿ ಸೇರಿದಂತೆ ಮೂವರನ್ನು ಮಂಗಳವಾರ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ತಮ್ಮ ಹಣಕಾಸಿನ ಸಮಸ್ಯೆ ನೀಗಿ, ಸಮೃದ್ಧಿ ದಕ್ಕುತ್ತದೆಎಂಬ ಕಾರಣಕ್ಕಾಗಿ ಆರೋಪಿಗಳು ಬೀದಿಬದಿಯಲ್ಲಿ ಲಾಟರಿ ಟಿಕೆಟ್ ಮಾರಿ ಜೀವನ ನಡೆಸುತ್ತಿದ್ದ ಇಬ್ಬರು ಮಹಿಳೆಯರನ್ನು ನರಬಲಿ ನೀಡಿದ್ದಾರೆ ಎಂಬುದಾಗಿ ತಿಳಿದುಬಂದಿದೆ’ ಎಂದು ಕೊಚ್ಚಿ ನಗರ ಪೊಲೀಸ್ ಆಯುಕ್ತ ನಾಗರಾಜು ಚಕಿಲಂ ತಿಳಿಸಿದ್ದಾರೆ.

‘ಆರೋಪಿಗಳು ಇಬ್ಬರು ಮಹಿಳೆಯರ ಗಂಟಲು ಸೀಳಿ ಹತ್ಯೆ ಮಾಡಿದ್ದು, ಅವರ ದೇಹದ ವಿವಿಧ ಭಾಗಗಳನ್ನು ಸಣ್ಣ ಚೂರುಗಳನ್ನಾಗಿ ಕತ್ತರಿಸಿ, ಪತ್ತನಂತಿಟ್ಟ ಜಿಲ್ಲೆಯ ತಿರುವಲ್ಲಾ ಎನ್ನುವ ಪ್ರದೇಶದ ಬೇರೆ ಬೇರೆ ಭಾಗಗಳಲ್ಲಿ ಹೂಳಿದ್ದಾರೆ. ಸುಮಾರು 50 ವರ್ಷ ವಯಸ್ಸಿನವರಾದ ಈ ಮಹಿಳೆಯರು ಕಡವಂತಾರ ಮತ್ತು ಕಾಲಡಿ ಗ್ರಾಮದ ನಿವಾಸಿಗಳು’ ಎಂದೂ ಅವರು ಮಾಹಿತಿ ನೀಡಿದ್ದಾರೆ.

ಈ ವರ್ಷದ ಜೂನ್ ಮತ್ತು ಸೆಪ್ಟೆಂಬರ್ ತಿಂಗಳಿನಲ್ಲಿ ಇಬ್ಬರು ಮಹಿಳೆಯರು ನಾಪತ್ತೆಯಾಗಿದ್ದರು. ಪೊಲೀಸರು ತನಿಖೆ ನಡೆಸಿದಾಗ ನರಬಲಿಯ ಆಘಾತಕಾರಿ ಘಟನೆ ಬೆಳಕಿಗೆ ಬಂದಿದೆ.

ಸಂಕ್ಷಿಪ್ತ ಸುದ್ದಿ

ನೇಮಕ ಹಗರಣ: ಟಿಎಂಸಿ ಶಾಸಕನ ಬಂಧನ

ಕೋಲ್ಕತ್ತ (ಪಿಟಿಐ): ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು (ಇ.ಡಿ) ಮಂಗಳವಾರ ತೃಣಮೂಲ ಕಾಂಗ್ರೆಸ್ ಪಕ್ಷದ (ಟಿಎಂಸಿ) ಶಾಸಕ ಮಾಣಿಕ್ ಭಟ್ಟಾಚಾರ್ಯ ಅವರನ್ನು ಬಂಧಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೋಮವಾರ ರಾತ್ರಿಯಿಡೀ ಇ.ಡಿ ಮಾಣಿಕ್ ಅವರನ್ನು ವಿಚಾರಣೆ ನಡೆಸಿತ್ತು ಎನ್ನಲಾಗಿದೆ.

‘ಸೋಮವಾರ ಮಧ್ಯಾಹ್ನದಿಂದಲೇ ಮಾಣಿಕ್ ಅವರ ವಿಚಾರಣೆ ಆರಂಭಿಸಲಾಗಿತ್ತು. ಆದರೆ, ತನಿಖೆಗೆ ಸಹಕರಿಸದ ಕಾರಣಕ್ಕಾಗಿ ಅವರನ್ನು ಬಂಧಿಸಲಾಗಿದೆ. ಅಷ್ಟೇ ಅಲ್ಲ, ಅವರು ತನಿಖಾಧಿಕಾರಿಗಳ ದಿಕ್ಕು ತಪ್ಪಿಸುವ ಕೆಲಸವನ್ನೂ ಮಾಡಿದ್ದಾರೆ’ ಎಂದೂ ಇ.ಡಿ. ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಸಿಬಿಐ ಕೂಡಾ ಈ ಹಗರಣದ ತನಿಖೆ ಕೈಗೊಂಡಿದ್ದು, ಈ ಹಿಂದೆ ಸಿಬಿಐ ಭಟ್ಟಾಚಾರ್ಯ ಅವರನ್ನು ಬಂಧಿಸದಂತೆ ಸುಪ್ರೀಂ ಕೋರ್ಟ್ ರಕ್ಷಣೆ ನೀಡಿತ್ತು.

ಶಾಲಾ ಸೇವಾ ಆಯೋಗದ (ಎಸ್‌ಎಸ್‌ಸಿ) ನೇಮಕಾತಿ ಹಗರಣದಲ್ಲಿ ಜಾರಿ ನಿರ್ದೇಶನಾಲಯವು ಜುಲೈ ತಿಂಗಳಲ್ಲಿ ಪಶ್ಚಿಮ ಬಂಗಾಳದ ಮಾಜಿ ಶಿಕ್ಷಣ ಸಚಿವ ಪಾರ್ಥ ಚಟರ್ಜಿ ಅವರನ್ನು ಬಂಧಿಸಿತ್ತು.

ಉಗ್ರರಿಗೆ ಆರ್ಥಿಕ ನೆರವು: ಎನ್‌ಐಎ ಶೋಧ

ಶ್ರೀನಗರ: ಭಯೋತ್ಪಾದನೆಗೆ ಹಣಕಾಸು ನೆರವು ನೀಡುತ್ತಿರುವ ಆರೋಪ ಸಂಬಂಧ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಮಂಗಳವಾರ ಧರ್ಮ ಬೋಧಕರ ನಿವಾಸ ಸೇರಿ ಜಮ್ಮು–ಕಾಶ್ಮೀರದ ಹಲವು ಕಡೆ ಶೋಧ ಕಾರ್ಯಾಚರಣೆ ನಡೆಸಿತು.

ಪೊಲೀಸರು ಮತ್ತು ಸಿಆರ್‌ಪಿಎಫ್ ಸಿಬ್ಬಂದಿ ಒಳಗೊಂಡ ತನಿಖಾ ಸಂಸ್ಥೆಯು ಜಮ್ಮುವಿನ ಪೂಂಚ್, ರಜೌರಿ ಮತ್ತು ಕಾಶ್ಮೀರದ ಪುಲ್ವಾಮಾ, ಶೋಪಿಯಾನ್, ಶ್ರೀನಗರ ಹಾಗೂ ಬಂಡಿಪೊರ ಜಿಲ್ಲೆಗಳಲ್ಲಿ ಪ್ರತ್ಯೇಕ ಶೋಧ ಕಾರ್ಯಾಚರಣೆ ನಡೆಸಿತು ಎಂದು ವರದಿಯಾಗಿದೆ.

ಧರ್ಮ ಬೋಧಕ ದಾರುಲ್ ಉಲ್–ಉಲೂಮ್ ರಹೀಮಿಯ್ಯ, ಮೌಲಾನಾ ರೆಹಮ್ತುಲ್ಲಾ ಕಾಸ್ಮಿ ಮತ್ತು ಶ್ರೀನಗರ ಎನ್‌ಐಟಿ ಪ್ರಾಧ್ಯಪಕ ಸಮಮ್ ಅಹ್ಮದ್ ಲೋನ್ ಅವರ ನಿವಾಸದ ಮೇಲೂ ದಾಳಿ ನಡೆಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಉಗ್ರರಿಗೆ ಆರ್ಥಿಕ ನೆರವು ನೀಡುತ್ತಿರುವ ಆರೋಪ ಸಂಬಂಧ 2017ರಿಂದ ಎನ್‌ಐಎ ಕಾಶ್ಮೀರದ ವಿವಿಧೆಡೆ ನಿರಂತರವಾಗಿ ಶೋಧ ಕಾರ್ಯಾಚರಣೆ ಕೈಗೊಳ್ಳುತ್ತಿದೆ.

ಬೇಟಿ ಬಚಾವೊ, ಬೇಟಿ ಪಡಾವೊ: ಹೊಸ ಅಂಶ ಸೇರ್ಪಡೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರ ತನ್ನ ಮಹತ್ವಾಕಾಂಕ್ಷಿ ‘ಬೇಟಿ ಬಚಾವೊ, ಬೇಟಿ ಪಡಾವೊ’ ಯೋಜನೆಯನ್ನು ಪರಿಷ್ಕರಿಸಿ, ಅದರಲ್ಲಿ ಮುಟ್ಟಿನ ನೈರ್ಮಲ್ಯದ ಕುರಿತ ಅರಿವು, ಬಾಲಕಿಯರ ಕೌಶಲ ಹೆಚ್ಚಳ, ಬಾಲ್ಯ ವಿವಾಹ ತಡೆಗಟ್ಟುವಿಕೆ, ಮಾಧ್ಯಮಿಕ ಶಿಕ್ಷಣದಲ್ಲಿ ಹೆಣ್ಣುಮಕ್ಕಳ ದಾಖಲಾತಿ ಹೆಚ್ಚಳ ಮುಂತಾದ ವಿಷಯಗಳನ್ನು ಸೇರ್ಪಡೆ ಮಾಡಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಬೇಟಿ ಬಚಾವೊ ಬೇಟಿ ಪಡಾವೊ’ ಯೋಜನೆಯನ್ನು ಪರಿಷ್ಕರಿಸಲಾಗಿದೆ. ಯೋಜನೆಯಲ್ಲಿ ಹೊಸ ಗುರಿಗಳನ್ನು ಸೇರ್ಪಡೆ ಮಾಡಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯದರ್ಶಿ ಇಂದೇವಾರ್ ಪಾಂಡೆ ಅವರು ತಿಳಿಸಿದರು.

‘ನೇತಾಜಿ ಅಮರ್ ರಹೇ’ ಘೋಷಣೆ ಕೂಗಿ ಅಭಿಮಾನ ಮೆರೆದ ಜನ

ಮುಲಾಯಂ ಸಿಂಗ್‌ಗೆ ಭಾವುಕ ವಿದಾಯ

ಪ್ರಜಾವಾಣಿ ವಾರ್ತೆ

ಲಖನೌ: ಸಮಾಜವಾದಿ ಪಕ್ಷದ (ಎಸ್‌ಪಿ) ನಾಯಕ ಮುಲಾಯಂ ಸಿಂಗ್ ಯಾದವ್ ಅವರಿಗೆ ಮೈನ್‌ಪುರಿ ಜಿಲ್ಲೆಯ ಸೈಫೈಯಲ್ಲಿ ಮಂಗಳವಾರ ಭಾವುಕ ವಿದಾಯ ನೀಡಲಾಯಿತು.

ಅಂತ್ಯಕ್ರಿಯೆಯಲ್ಲಿ ಭಾರಿ ಜನಸ್ತೋಮ ಕಂಡುಬಂತು. ರಾಜಕೀಯ ನಾಯಕರು ಪಕ್ಷಬೇಧ ಮರೆತು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

ಉತ್ತರಪ್ರದೇಶದ ಉಪ ಮುಖ್ಯಮಂತ್ರಿಗಳಾದ ಬ್ರಜೇಶ್ ಪಾಠಕ್ ಮತ್ತು ಕೇಶವ್‌ಪ್ರಸಾದ್ ಮೌರ್ಯ ಅವರು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರನ್ನು ಸಂತೈಸುತ್ತಿದ್ದ ದೃಶ್ಯ ಗಮನ ಸೆಳೆಯಿತು.

ನೆಚ್ಚಿನ ನಾಯಕನ ಅಂತಿಮ ದರ್ಶನಕ್ಕಾಗಿ ದೂರದ ಊರುಗಳಿಂದ ಸಾವಿರಾರು ಸಂಖ್ಯೆಯಲ್ಲಿ ಬಂದಿದ್ದ ಜನ, ‘ನೇತಾಜಿ ಅಮರ್ ರಹೇ’ ಎಂಬ ಘೋಷಣೆ ಕೂಗಿ ಅಭಿಮಾನ ಮೆರೆದರು. ಅಖಿಲೇಶ್ ಅವರು ಭಾರವಾದ ಮನಸ್ಸಿನಿಂದಲೇ ಅಪ್ಪನ ಚಿತೆಗೆ ಅಗ್ನಿಸ್ಪರ್ಶ ಮಾಡಿದರು.

ಮುಲಾಯಂ ಅವರ ಪಾರ್ಥಿವ ಶರೀರವನ್ನು ಮನೆಯಿಂದ ನುಮಾಯಿಶಾ ಮೇಲಾ ಮೈದಾನಕ್ಕೆ ಹೂವಿನಿಂದ ಅಲಂಕರಿಸಲಾಗಿದ್ದ ವಿಶೇಷ ವಾಹನದಲ್ಲಿ ತಂದು ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಪಾರ್ಥಿವ ಶರೀರ ಸಾಗಿಬಂದ ಮಾರ್ಗದ ಉದ್ದಕ್ಕೂ ಸಾವಿರಾರು ಸಂಖ್ಯೆಯಲ್ಲಿ ಜನ ನೆರೆದಿದ್ದರು. ಕೆಲವರು ಮರವೇರಿ ಕುಳಿತಿದ್ದರು. ಸಮಾಜವಾದಿ ಪಕ್ಷದ ಕಾರ್ಯಕರ್ತರು ತಮ್ಮ ನೆಚ್ಚಿನ ನಾಯಕನನ್ನು ನೆನೆದು ಕಣ್ಣೀರಿಟ್ಟರು.

ರಕ್ಷಣಾ ಸಚಿವ ರಾಜನಾಥ್ ಸಿಂಗ್, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ರಾಷ್ಟ್ರೀಯ ಲೋಕದಳದ (ಆರ್‌ಎಲ್‌ಡಿ) ಮುಖ್ಯಸ್ಥ ಜಯಂತ್ ಚೌಧರಿ, ತೆಲುಗು ದೇಶಂ ಪಕ್ಷದ ಮುಖ್ಯಸ್ಥ ಎನ್.ಚಂದ್ರಬಾಬು ನಾಯ್ಡು, ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ, ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್, ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್, ಕಾಂಗ್ರೆಸ್ ನಾಯಕ ಸಚಿನ್ ಪೈಲಟ್, ಸಮಾಜವಾದಿ ಪಕ್ಷದ ಸಂಸದೆ ಜಯಾ ಬಚ್ಚನ್, ಅಭಿಷೇಕ್ ಬಚ್ಚನ್, ರಿಲಯನ್ಸ್ ಸಮೂಹದ ಮುಖ್ಯಸ್ಥ ಅನಿಲ್ ಅಂಬಾನಿ, ಬಾಬಾ ರಾಮ್‌ದೇವ್, ಬಿಹಾರ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್, ಲೋಕಸಭೆ ಸ್ಪೀಕರ್ ಓಂ ಬಿರ್ಲಾ, ತೆಲಂಗಾಣ ಮುಖ್ಯಮಂತ್ರಿ ಕೆ.ಚಂದ್ರಶೇಖರ್ ರಾವ್, ಸಿಪಿಐ(ಎಂ)ನ ಸೀತಾರಾಂ ಯೆಚೂರಿ, ಪ್ರಕಾಶ್ ಕಾರಟ್, ಎನ್‌ಸಿಪಿ ಮುಖಂಡರಾದ ಪ್ರಫುಲ್ ಪಟೇಲ್, ಸುಪ್ರಿಯಾ ಸುಳೆ ಅಂತ್ಯಕ್ರಿಯೆಗೆ ಸಾಕ್ಷಿಯಾದರು.



ಮುಲಾಯಂ ಸಿಂಗ್ ಯಾದವ್ ಅವರ ಅಂತಿಮ ಯಾತ್ರೆಯಲ್ಲಿ ಪಾಲ್ಗೊಂಡಿದ್ದ ಜನಸ್ತೋಮ–ಪಿಟಿಐ ಚಿತ್ರ

ಅ.25ರಂದು ಭಾಗಶಃ ಸೂರ್ಯಗ್ರಹಣ

ಕೋಲ್ಕತ್ತ (ಪಿಟಿಐ): ದೀಪಾವಳಿ ಅಮಾವಾಸ್ಯೆಯ ದಿನವಾದ ಇದೇ 25ರಂದು ಸಂಜೆ ವೇಳೆಗೆ ಭಾಗಶಃ ಸೂರ್ಯಗ್ರಹಣ ಸಂಭವಿಸಲಿದೆ. ದೇಶದ ಹಲವು ಭಾಗಗಳಲ್ಲಿ ಗ್ರಹಣ ಗೋಚರಿಸುತ್ತದೆ ಎಂದು ಖಗೋಳಶಾಸ್ತ್ರಜ್ಞ ದೇವಿ ಪ್ರಸಾದ್ ದುರೈ ತಿಳಿಸಿದ್ದಾರೆ.

ದೇಶದ ಪಶ್ಚಿಮ ಮತ್ತು ಉತ್ತರ ಭಾಗಗಳಲ್ಲಿ ಸೂರ್ಯಗ್ರಹಣ ಉತ್ತಮ ರೀತಿಯಲ್ಲಿ ಗೋಚರಿಸುತ್ತದೆ. ಪೂರ್ವ ಭಾಗಗಳಲ್ಲಿ ಸೂರ್ಯಾಸ್ತದ ವೇಳೆ ಗ್ರಹಣ ಸಂಭವಿಸಲಿದೆ. ಈಶಾನ್ಯ ಭಾಗಗಳಲ್ಲಿ ಸೂರ್ಯಾಸ್ತದ ಬಳಿಕ ಗ್ರಹಣ ಸಂಭವಿಸುವ ಕಾರಣ ಈ ಭಾಗಗಳಲ್ಲಿ ಗ್ರಹಣ ಕಾಣಿಸದು ಎಂದು ಅವರು ಹೇಳಿದ್ದಾರೆ.

ಗ್ರಹಣದ ಗರಿಷ್ಠ ಗೋಚರತೆ ವೇಳೆ, ಅಸ್ತಂಗತವಾಗುತ್ತಿರುವ ಸೂರ್ಯನ ಬಿಂಬದ ಶೇ 4ರಷ್ಟು ಭಾಗವನ್ನು ಚಂದ್ರಬಿಂಬವು ಮುಚ್ಚಲಿದೆ ಎಂದು ಅವರು ಹೇಳಿದ್ದಾರೆ.

ಭಾರತವಲ್ಲದೇ ಯುರೋಪ್, ಉತ್ತರ ಆಫ್ರಿಕಾ, ಮಧ್ಯ ಪ್ರಾಚ್ಯ ಮತ್ತು ಏಷ್ಯಾದ ಇತರ ಭಾಗಗಳಲ್ಲಿ ಸಹ ಗ್ರಹಣ ಗೋಚರಿಸಲಿದೆ.

ಬೆಂಗಳೂರಿನಲ್ಲಿ ಸಂಜೆ 5.12ಕ್ಕೆ ಗ್ರಹಣ ಆರಂಭವಾಗಿ, 5.49ಕ್ಕೆ ಗರಿಷ್ಠ ಮಟ್ಟವನ್ನು ತಲುಪಲಿದೆ ಹಾಗೂ 5.55ರ ವೇಳೆಗೆ ಮುಕ್ತಾಯವಾಗಲಿದೆ.

ಗ್ರಹಣದ ವೇಳೆ ಸೂರ್ಯಕಿರಣಗಳು ಕಣ್ಣುಗಳಿಗೆ ಅಪಾಯಕಾರಿ ಆಗಿರುವ ಕಾರಣ ಗ್ರಹಣ ನೋಡಲು ಇಚ್ಛಿಸುವವರು ಅತ್ಯಂತ ಹೆಚ್ಚು ಮುಂಜಾಗ್ರತೆಗಳನ್ನು ತೆಗೆದುಕೊಳ್ಳಬೇಕು ಎಂದು ದುರೈ ತಿಳಿಸಿದ್ದಾರೆ.

ಜ್ಞಾನವಾಪಿ: ಶಿವಲಿಂಗದ ಕಾರ್ಬನ್ ಡೇಟಿಂಗ್– 14ಕ್ಕೆ ತೀರ್ಪು

ವಾರಾಣಸಿ (ಪಿಟಿಐ): ಜ್ಞಾನವಾಪಿ ಮಸೀದಿಯೊಳಗೆ ಇದೆ ಎನ್ನಲಾದ ಶಿವಲಿಂಗವನ್ನು ಕಾರ್ಬನ್ ಡೇಟಿಂಗ್ ಪರೀಕ್ಷೆಗೆ ಒಳಪಡಿಸಬೇಕು ಎಂದು ಕೋರಿ ಸಲ್ಲಿಸಲಾದ ಮನವಿಯ ಕುರಿತು ಇಲ್ಲಿನ ಜಿಲ್ಲಾ ನ್ಯಾಯಾಲಯವು ಇದೇ 14ರಂದು ತನ್ನ ತೀರ್ಪನ್ನು ಪ್ರಕಟಿಸಲಿದೆ.

ಮೇ 16ರಂದು ಜ್ಞಾನವಾಪಿ ಮಸೀದಿಯ ಆವರಣದೊಳಗೆ ವಿಡಿಯೊ ಸಮೀಕ್ಷೆ ನಡೆಸಲಾಗಿತ್ತು. ‘ವಝೂಖಾನ’ ಕೊಳದಲ್ಲಿ ಶಿವಲಿಂಗದ ಆಕೃತಿ ಪತ್ತೆಯಾಗಿದೆ ಎಂದು ಆಗ ಹೇಳಲಾಗಿತ್ತು. ಆ ಆಕೃತಿಯನ್ನು ಕಾರ್ಬನ್ ಡೇಟಿಂಗ್‌ಗೆ ಒಳಪಡಿಸಬೇಕು ಎಂದು ಜ್ಞಾನವಾಪಿ– ಶೃಂಗಾರ ಗೌರಿ ಮೊಕದ್ದಮೆಯ ಹಿಂದೂ ಪರ ಅರ್ಜಿದಾರರು ಅರ್ಜಿ ಸಲ್ಲಿಸಿದ್ದರು.

ವಿಡಿಯೊ ಸಮೀಕ್ಷೆಯಲ್ಲಿ ಕಂಡುಬಂದಿರುವ ಆಕೃತಿಯು ಕಾರಂಜಿ ಎಂದು ಮಸೀದಿ ಆಡಳಿತವು ಲಿಖಿತ ಹೇಳಿಕೆ ನೀಡಿತ್ತು.



ಜನ್ಮದಿನೋತ್ಸವ ಸಿಖ್ಖರ ನಾಲ್ಕನೇ ಗುರು ರಾಮದಾಸ್ ಅವರ ಜನ್ಮದಿನದ ಅಂಗವಾಗಿ ಅಮೃತಸರದ ಸ್ವರ್ಣಮಂದಿರದಲ್ಲಿ ಮಂಗಳವಾರ ಪಟಾಕಿಗಳು ಮೂಡಿಸಿದ ಚಿತ್ತಾರಗಳು ಗಮನ ಸೆಳೆದವು –ಪಿಟಿಐ ಚಿತ್ರ

‘ಲಂಚ ವಿಚಾರಣೆ: 4 ತಿಂಗಳೊಳಗೆ ಅನುಮತಿ ಕಡ್ಡಾಯ’

ನವದೆಹಲಿ (ಪಿಟಿಐ): ಲಂಚ ಸೇರಿ ವಿವಿಧ ಕ್ರಿಮಿನಲ್ ಅಪರಾಧ ಪ್ರಕರಣಗಳಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ಸರ್ಕಾರಿ ಅಧಿಕಾರಿಗಳ ವಿಚಾರಣೆಗೆ ನಾಲ್ಕು ತಿಂಗಳೊಳಗೆ ಅನುಮತಿ ನೀಡುವುದನ್ನು ಕಡ್ಡಾಯಗೊಳಿಸಿ ಸುಪ್ರೀಂ ಕೋರ್ಟ್ ಮಂಗಳವಾರ ಮಹತ್ವದ ತೀರ್ಪು ನೀಡಿದೆ.

ಭ್ರಷ್ಟರನ್ನು ವಿಚಾರಣೆಗೆ ಒಳಪಡಿಸುವುದನ್ನು ವಿಳಂಬ ಮಾಡುವುದು ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರದ ನಿರ್ಲಜ್ಜ ಸಂಸ್ಕೃತಿಯನ್ನು ಬಿತ್ತಿದಂತಾಗುತ್ತದೆ ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಪಿ.ಎಸ್. ನರಸಿಂಹ ಅವರಿದ್ದ ಪೀಠ ಹೇಳಿದೆ.

ತನ್ನ ಉತ್ತರಾಧಿಕಾರಿ ಹೆಸರು ರವಾನಿಸಿದ ಸಿಜೆಐ ಲಲಿತ್

ಮುಂದಿನ ಸಿಜೆಐ: ಚಂದ್ರಚೂಡ್ ಹೆಸರು ಶಿಫಾರಸು

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯಮೂರ್ತಿ ಧನಂಜಯ ವೈ. ಚಂದ್ರಚೂಡ್ ಅವರನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಯು.ಯು. ಲಲಿತ್ ಅವರು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ.

ಈ ಮೂಲಕ ಅವರು ಮುಂದಿನ ಸಿಜೆಐ ನೇಮಕ ಪ್ರಕ್ರಿಯೆಗೆ ಚಾಲನೆ ನೀಡಿದ್ದಾರೆ. ಈ ಮೂಲಕ ಚಂದ್ರಚೂಡ್ ಅವರು ದೇಶದ 50ನೇ ಮುಖ್ಯ ನ್ಯಾಯಮೂರ್ತಿಯಾಗಿ ನವೆಂಬರ್ 9ರಂದು ಅಧಿಕಾರ ಸ್ವೀಕರಿಸುವುದು ಖಚಿತವಾಗಿದೆ.

ನವೆಂಬರ್ 8ರಂದು ನಿವೃತ್ತರಾಗಲಿರುವ ಸಿಜೆಐ ಲಲಿತ್ ಅವರಿಗೆ ತಮ್ಮ ಉತ್ತರಾಧಿಕಾರಿಯ ಹೆಸರನ್ನು ಶಿಫಾರಸು ಮಾಡುವಂತೆ ಕೇಂದ್ರ ಸರ್ಕಾರ ಅಕ್ಟೋಬರ್ 7ರಂದು ಪತ್ರ ರವಾನಿಸಿತ್ತು.

‘ನ್ಯಾಯಾಂಗ ನೇಮಕಾತಿ ನಿಯಮಾವಳಿ’(ಎಂಒಪಿ) ಪ್ರಕಾರ ಅತ್ಯಂತ ಹಿರಿಯ ನ್ಯಾಯಮೂರ್ತಿಯನ್ನು ಮುಂದಿನ ಸಿಜೆಐ ಆಗಿ ನಿರ್ಗಮಿತ ಸಿಜೆಐ ಶಿಫಾರಸು ಮಾಡಬೇಕು.

ನ್ಯಾಯಮೂರ್ತಿ ಚಂದ್ರಚೂಡ್ ಅವರು ಸಿಜೆಐ ಆಗಿ ಎರಡು ವರ್ಷಗಳ ಅಧಿಕಾರಾವಧಿ ಹೊಂದಿರುತ್ತಾರೆ. ಅವರು 2024ರ ನವೆಂಬರ್ 10ರಂದು ನಿವೃತ್ತರಾಗಲಿದ್ದಾರೆ. ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ನಿವೃತ್ತಿ ವಯಸ್ಸು 65 ಆಗಿದೆ.

ವೈ.ವಿ.ಚಂದ್ರಚೂಡ್ ಅವರ ಪುತ್ರ: ದೇಶದಲ್ಲಿ ದೀರ್ಘಾವಧಿ (1978ರ ಫೆಬ್ರುವರಿಯಿಂದ 1985ರ ಜುಲೈ 11ರವರೆಗೆ) ಸಿಜೆಐ ಆಗಿ ಕಾರ್ಯ ನಿರ್ವಹಿಸಿದ್ದ ವೈ.ವಿ.ಚಂದ್ರಚೂಡ್ ಅವರ ಮಗನಾಗಿರುವ ಡಿ.ವೈ. ಚಂದ್ರಚೂಡ್ ಅವರು, 2016ರ ಮೇ 13ರಂದು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿ ಬಡ್ತಿ ಪಡೆದರು.

1998ರಲ್ಲಿ ಬಾಂಬೆ ಹೈಕೋರ್ಟ್‌ನಲ್ಲಿ ಹಿರಿಯ ವಕೀಲರಾಗಿದ್ದ ಅವರು ಬಳಿಕ ಹೆಚ್ಚುವರಿ ಸಾಲಿಸಿಟರ್ ಜನರಲ್ ಆಗಿ ನೇಮಕಗೊಂಡರು. 2000ದ ಮಾರ್ಚ್ 29ರಂದು ಬಾಂಬೆ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ಸೇವೆ ಆರಂಭಿಸಿದ ಅವರು, 2013ರ ಅಕ್ಟೋಬರ್ 31ರಿಂದ ಅಲಹಾಬಾದ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕಗೊಂಡರು.

ದೆಹಲಿಯ ಸೇಂಟ್ ಸ್ಟೀಫನ್ಸ್ ಕಾಲೇಜಿನಲ್ಲಿ ಬಿ.ಎ (ಅರ್ಥಶಾಸ್ತ್ರ) ಆನರ್ಸ್ ಪದವಿ ಪೂರ್ಣಗೊಳಿಸಿದ ಅವರು, ದೆಹಲಿ ವಿಶ್ವವಿದ್ಯಾಲಯದಲ್ಲಿ ಎಲ್‌ಎಲ್‌ಬಿ ಹಾಗೂ ಅಮೆರಿಕದ ಹಾರ್ವರ್ಡ್ ಲಾ ಸ್ಕೂಲ್‌ನಲ್ಲಿ ಎಲ್‌ಎಲ್‌ಎಂ ಮತ್ತು ಡಾಕ್ಟರೇಟ್ ಪದವಿ ಪಡೆದಿದ್ದಾರೆ.

ಬಾಂಬೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ವಕೀಲ ವೃತ್ತಿ ಕೈಗೊಂಡಿದ್ದ ಅವರು, ಮುಂಬೈ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

ಹೈಕೋರ್ಟ್: ಸಿಜೆಯಾಗಿ ಪಿ.ಬಿ.ವರಾಳೆ ನೇಮಕ

ನವದೆಹಲಿ (ಪಿಟಿಐ): ಬಾಂಬೆ ಹೈಕೋರ್ಟ್‌ನ ನ್ಯಾಯಮೂರ್ತಿ ಪ್ರಸನ್ನ ಬಾಲಚಂದ್ರ ವರಾಳೆ ಅವರನ್ನು ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಮಂಗಳವಾರ ನೇಮಿಸಲಾಗಿದೆ. ವರಾಳೆ ಅವರು ಬೆಳಗಾವಿ ಜಿಲ್ಲೆಯ ನಿಪ್ಪಾಣಿ ಮೂಲದವರು.

ಜಮ್ಮು–ಕಾಶ್ಮೀರ ಹೈಕೋರ್ಟ್‌ನ ನ್ಯಾಯಮೂರ್ತಿ ಅಲಿ ಮೊಹಮ್ಮದ್ ಮಾಗ್ರೆ ಅವರನ್ನು ಅದೇ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಕೇಂದ್ರ ಸರ್ಕಾರ ನೇಮಿಸಿದೆ. ಜಮ್ಮು–ಕಾಶ್ಮೀರದ ಮುಖ್ಯ ನ್ಯಾಯಮೂರ್ತಿಯಾಗಿರುವ ಪಂಕಜ್ ಮಿಥಾಲ್ ಅವರನ್ನು ರಾಜಸ್ಥಾನ ಹೈಕೋರ್ಟ್‌ಗೆ ವರ್ಗಾಯಿಸಲಾಗಿದೆ. ತಾವು ಕರ್ತವ್ಯ ನಿರ್ವಹಿಸುತ್ತಿದ್ದ ಹೈಕೋರ್ಟ್‌ಗಳಲ್ಲಿ ವರಾಳೆ ಮತ್ತು ಮಾಗ್ರೆ ಅವರು ಸಿಜೆಗಳ ಬಳಿಕದ ಅತ್ಯಂತ ಹಿರಿಯ ನ್ಯಾಯಮೂರ್ತಿಗಳಾಗಿದ್ದರು.

ಈ ಕುರಿತು ಕಾನೂನು ಸಚಿವಾಲಯದ ನ್ಯಾಯಾಂಗ ಇಲಾಖೆ ಅಧಿಸೂಚನೆ ಹೊರಡಿಸಿದೆ. ಈ ನೇಮಕಾತಿಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಕಳೆದ ತಿಂಗಳು ಶಿಫಾರಸು ಮಾಡಿತ್ತು.

ದಾವೂದಿ ಬೋಹ್ರಾದ ಬಹಿಷ್ಕಾರ ಪದ್ಧತಿ ವಿಚಾರಣೆ ವಿಸ್ತೃತ ಪೀಠಕ್ಕೆ

ನವದೆಹಲಿ(ಪಿಟಿಐ): ಚಿಕ್ಕದಾದ ದಾವೂದಿ ಬೋಹ್ರಾ ಸಮುದಾಯದಲ್ಲಿ ಇರುವ ಬಹಿಷ್ಕಾರ ಪದ್ಧತಿ ಆಚರಣೆಯ ಕುರಿತ ವಿಚಾರಣೆಯನ್ನು ವಿಸ್ತೃತ ಪೀಠಕ್ಕೆ ವಹಿಸುವಂತೆ ಕೋರಿರುವ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಪೀಠವು ಮಂಗಳವಾರ ತೀರ್ಪು ಕಾಯ್ದಿರಿಸಿದೆ.



ಹಲವು ದೇಶಗಳಲ್ಲಿ ಹಂಚಿಹೋಗಿರುವ ಶಿಯಾ ಮುಸ್ಲಿಮರಲ್ಲಿನ ಸುಮಾರು 10 ಲಕ್ಷದಷ್ಟು ಜನಸಂಖ್ಯೆಯ ದಾವೂದಿ ಬೋಹ್ರಾ ಸಮುದಾಯವು ಭಿನ್ನಮತೀಯ ಸದಸ್ಯರನ್ನು ಬಹಿಷ್ಕರಿಸುವ ಹಕ್ಕನ್ನು ನ್ಯಾಯಮೂರ್ತಿ ಎಸ್.ಕೆ. ಕೌಲ್ ನೇತೃತ್ವದ ಸಾಂವಿಧಾನಿಕ ಪೀಠವೂ ಎತ್ತಿ ಹಿಡಿದಿತ್ತು.


ದಾವೂದಿ ಬೋಹ್ರಾ ಸಮುದಾಯದಲ್ಲಿ ಆಚರಣೆಯಲ್ಲಿದ್ದ ಬಹಿಷ್ಕಾರ ಆಚರಣೆಯ ಹಕ್ಕಿಗೆ ಸುಪ್ರೀಂ ಕೋರ್ಟ್ 1962ರಲ್ಲಿ ರಕ್ಷಣೆ ನೀಡಿತ್ತು. ಈ ತೀರ್ಪು ಮರುಪರಿಶೀಲಿಸಲು ಮತ್ತು ರದ್ದುಗೊಳಿಸಲು 1986ರ ಕೊನೆಯಲ್ಲಿ ಉನ್ನತ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಈ ಅರ್ಜಿ 2004ರ ಡಿಸೆಂಬರ್‌ನಲ್ಲಿ ವಿಚಾರಣೆಗೆ ಬಂದಾಗ, ಏಳು ಸದಸ್ಯರ ವಿಸ್ತೃತ ಪೀಠದ ಬದಲು ಐವರು ನ್ಯಾಯಮೂರ್ತಿಗಳಿರುವ ಸಾಂವಿಧಾನಿಕ ಪೀಠ ಇತ್ಯರ್ಥಪಡಿಸಬೇಕೆಂದು ಸುಪ್ರೀಂ ಕೋರ್ಟ್ ಹೇಳಿತ್ತು.

‘1986ರಿಂದ ಈ ಸಮಸ್ಯೆ ಬಾಕಿ ಇದ್ದು, ತಲೆನೋವಾಗಿದೆ. ಸೀಮಿತವಾದ ಈ ಸಮಸ್ಯೆಯನ್ನು ಇತ್ಯರ್ಥಪಡಿಸುವುದು ಅಥವಾ ಒಂಬತ್ತು ನ್ಯಾಯಮೂರ್ತಿಗಳ ವಿಸ್ತೃತ ಪೀಠಕ್ಕೆ ವಹಿಸುವುದಷ್ಟೇ ನಮ್ಮ ಮುಂದಿರುವ ಆಯ್ಕೆಗಳು’ ಎಂದು ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಎ.ಎಸ್. ಓಕಾ, ವಿಕ್ರಮ್ ನಾಥ್ ಮತ್ತು ಜೆ.ಕೆ. ಮಾಹೇಶ್ವರಿ ಅವರನ್ನು ಒಳಗೊಂಡ ಇದ್ದ ಸಾಂವಿಧಾನಿಕ ಪೀಠ ಹೇಳಿದೆ.

ಕೇಂದ್ರದ ಪರ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ದಾವೂದಿ ಬೋಹ್ರಾ ಬಹಿಷ್ಕಾರ ಪದ್ಧತಿಯನ್ನು ಸಾಂವಿಧಾನಿಕ ಪೀಠ ಎತ್ತಿಹಿಡಿದಿತ್ತು. ಅಷ್ಟೇ ಸಂಖ್ಯೆಯ ನ್ಯಾಯಮೂರ್ತಿಗಳನ್ನು ಒಳಗೊಂಡ ಪೀಠದಿಂದ ಈ ತೀರ್ಪಿನ ಮರುಪರಿಶೀಲನೆ ಸಾಧ್ಯವಾಗದೆಂದು ಪೀಠದ ಗಮನಕ್ಕೆ ತಂದರು.

ಅರ್ಜಿದಾರರ ಪರ ಹಾಜರಾಗಿದ್ದ ಹಿರಿಯ ವಕೀಲ ಫಾಲಿ ಎಸ್. ನರಿಮನ್, ಇದನ್ನು ವಿಸ್ತೃತ ಪೀಠಕ್ಕೆ ವಹಿಸುವುದೇ ಸೂಕ್ತವೆಂದು ವಾದಿಸಿದರು.

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	17,241
ಇಂದಿನ ಅಂತ್ಯ	16,983
▼	257
ದಿನದ ಕನಿಷ್ಠ	17,261

ವಿನಿಮಯ ದರ

$ ಡಾಲರ್	82.21
£ ಪೌಂಡ್	90.92
€ ಯುರೊ	79.85
¥ ಯೆನ್ (100ಕ್ಕೆ)	56.46

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹447

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈಂಡ್)	₹1690 (1710)
ಸೋಯಾ (ರಿಫೈಂಡ್)	₹1290 (1310)
ಸೂರ್ಯಕಾಂತಿ (ರಿಫೈಂಡ್)	₹1475 (1460)
ಪಾಮೋಲಿನ್	₹935 (970)

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1600-1800
ಮಧ್ಯಮ	₹1000-1500
ಸಣ್ಣ	₹200-800

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್ಎಸ್ಎಸ್-4	₹142
ಆರ್ಎಸ್ಎಸ್-5	₹151
ಗುಡ್ ಲಾಟ್	₹137

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹302-641
ದ್ವಿತಳಿ (ಬಿ.ವಿ) ₹400-850

ಕೊಬ್ಬರಿ ಧಾರಣೆ



ಕೆ.ಆರ್. ಪೇಟೆ(ಇತರ)	₹7800-7800
ತುಮಕೂರು (ಇತರ)	₹4100-6800
ತುರುವೇಕೆರೆ	₹14000-14000

ಮುಂಬೈ ಧಾರಣೆ

ಶೇಂಗಾ

11-10-2022

ಜಾವಾ 70/80(ಹೊಸ)	11050-11100
ಜಾವಾ 80/90(ಹೊಸ)	10850-10950
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1700 (1720)
ಒಂದು ವಾರದ ಡೆಲಿವರಿ	1695 (1715)
ಸೋಯಾ ಕಚ್ಚಾ	1215 (1220)
ಪಾಮ್ ವಾರದ ಡೆಲಿವರಿ	933 (968)
ಸೂರ್ಯಕಾಂತಿ ಎಣ್ಣೆ ಕಚ್ಚಾ	1380 (1360)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,500 (50,850)
ಬೆಳ್ಳಿ ಕೆ.ಜಿ 57,600 (58,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಉಕ್ರೇನ್–ರಷ್ಯಾ ಸಂಘರ್ಷ, ಬಿಗಿ ಹಣಕಾಸು ನೀತಿಯ ಪ್ರಭಾವ

ಮೂರನೆಯ ದಿನವೂ ಮುಗ್ಗರಿಸಿದ ಷೇರುಪೇಟೆ

ಮುಂಬೈ (ಪಿಟಿಐ): ಉಕ್ರೇನ್–ರಷ್ಯಾ ಸಂಘರ್ಷ ಮತ್ತೆ ತೀವ್ರವಾಗಿರುವುದು ಹಾಗೂ ಜಗತ್ತಿನ ಎಲ್ಲೆಡೆ ಕೇಂದ್ರೀಯ ಬ್ಯಾಂಕ್‌ಗಳು ಬಿಗಿ ಹಣಕಾಸು ನೀತಿಯ ಮೊರೆ ಹೋಗುತ್ತಿರುವುದು ಹೂಡಿಕೆದಾರರ ವಿಶ್ವಾಸಕ್ಕೆ ಪೆಟ್ಟು ನೀಡಿದ್ದು, ಮಂಗಳವಾರದ ವಹಿವಾಟಿನಲ್ಲಿ ದೇಶದ ಷೇರುಪೇಟೆಗಳು ಕುಸಿತ ಕಾಣುವಂತಾಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಮತ್ತು ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಸತತ ಮೂರನೆಯ ದಿನವೂ ಕುಸಿತ ಕಂಡವು. ಸೆನ್ಸೆಕ್ಸ್ 843 ಅಂಶ, ನಿಫ್ಟಿ 257 ಅಂಶ ಕುಸಿದವು.

‘ಜಾಗತಿಕ ಮಟ್ಟದಲ್ಲಿನ ಬಿಕ್ಕಟ್ಟು ಹಾಗೂ ಜಾಗತಿಕ ಆರ್ಥಿಕ ಹಿಂಜರಿತದ ಭೀತಿಯ ಕಾರಣದಿಂದಾಗಿ ಹೂಡಿಕೆದಾರರು ಹೆಚ್ಚು ರಿಸ್ಕ್ ತೆಗೆದುಕೊಳ್ಳಲು ಸಿದ್ಧರಿಲ್ಲ. ಹೀಗಿದ್ದರೂ, ಜಾಗತಿಕ ಮಾರುಕಟ್ಟೆಗಳಿಗೆ ಹೋಲಿಸಿದರೆ ದೇಶಿ ಮಾರುಕಟ್ಟೆಗಳಲ್ಲಿ ಷೇರು ಮಾರಾಟವು ಹೆಚ್ಚು ತೀವ್ರವಾಗಿ ಇಲ್ಲ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಹಣ ಹಿಂಪಡೆಯುತ್ತಿದ್ದರೂ, ದೇಶಿ ಹೂಡಿಕೆದಾರರು ಹಣ ತೊಡಗಿಸುತ್ತಿದ್ದಾರೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.



ಪ್ರಾತಿನಿಧಿಕ ಚಿತ್ರ

‘ಮಾರುಕಟ್ಟೆಗಳು ಸದ್ಯದ ಸ್ಥಿತಿಯಲ್ಲಿ ಅಸ್ಥಿರವಾಗಿ ಇರಲಿವೆ. ಚಿಲ್ಲರೆ ಹಣದುಬ್ಬರ ದರ, ಕೈಗಾರಿಕಾ ಉತ್ಪಾದನೆ ದರ, ಸಗಟು ಹಣದುಬ್ಬರ ದರ ಮತ್ತು ಅಮೆರಿಕದ ಫೆಡರಲ್ ಬ್ಯಾಂಕ್ ಸಭೆಯ ನಡಾವಳಿಯ ವಿವರಗಳು ಹೂಡಿಕೆದಾರರ ಮೇಲೆ ಪ್ರಭಾವ ಬೀರಲಿವೆ’ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ಸಣ್ಣ ಹೂಡಿಕೆಗಳ ಸಂಶೋಧನಾ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕ ಹೇಳಿದ್ದಾರೆ.

ಸೋಲ್, ಟೋಕಿಯೊ ಮತ್ತು ಹಾಂಗ್‌ಕಾಂಗ್ ಷೇರು ಮಾರುಕಟ್ಟೆಗಳು ಇಳಿಕೆ ಕಂಡಿವೆ. ಶಾಂಘೈ ಮಾರುಕಟ್ಟೆ ಮಾತ್ರ ಚೇತರಿಕೆ ಕಂಡಿದೆ.

ವಲಯವಾರು ಇಳಿಕೆ

3.07%	ರಿಯಾಲ್ಟಿ
2.45%	ದೂರಸಂಪರ್ಕ
2.21%	ಐ.ಟಿ
1.90%	ಸರಕು

ಇನ್ಫೊಸಿಸ್ ಅಧ್ಯಕ್ಷ ಸ್ಥಾನಕ್ಕೆ ರವಿ ಕುಮಾರ್ ರಾಜೀನಾಮೆ

ನವದೆಹಲಿ (ಪಿಟಿಐ): ಇನ್ಫೊಸಿಸ್ ಲಿಮಿಟೆಡ್‌ನ ಅಧ್ಯಕ್ಷ ಸ್ಥಾನಕ್ಕೆ ರವಿ ಕುಮಾರ್ ಎಸ್. ಅವರು ರಾಜೀನಾಮೆ ನೀಡಿದ್ದಾರೆ. ಪ್ರಸಕ್ತ ಹಣಕಾಸು ವರ್ಷದ ಎರಡನೆಯ ತ್ರೈಮಾಸಿಕದ ಫಲಿತಾಂಶ ಪ್ರಕಟಿಸುವುದಕ್ಕೆ ಎರಡು ದಿನ ಬಾಕಿ ಇರುವಾಗ ಅವರು ರಾಜೀನಾಮೆ ಸಲ್ಲಿಸಿದ್ದಾರೆ.

‘ರವಿ ಕುಮಾರ್ ಅವರು ಸಲ್ಲಿಸಿರುವ ಸೇವೆಯ ಕುರಿತು ಆಡಳಿತ ಮಂಡಳಿಯ ನಿರ್ದೇಶಕರು ಕೃತಜ್ಞತೆಯನ್ನು ಸಲ್ಲಿಸಿದ್ದಾರೆ’ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಭಾಭಾ ಅಣು ಸಂಶೋಧನಾ ಕೇಂದ್ರದಲ್ಲಿ ಅಣು ವಿಜ್ಞಾನಿಯಾಗಿ ವೃತ್ತಿ ಆರಂಭಿಸಿದ ಕುಮಾರ್ ಅವರು, 2002ರಲ್ಲಿ ಇನ್ಫೊಸಿಸ್ ಸೇರಿದ್ದರು. 2016ರಲ್ಲಿ ಅವರನ್ನು ಕಂಪನಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು.

2017ರಲ್ಲಿ ಅವರನ್ನು ಕಂಪನಿಯ ಡೆಪ್ಯುಟಿ ಸಿಒಒ ಆಗಿ ನೇಮಿಸಲಾಯಿತು. ಅವರು ಮುಂದಿನ ಸಿಒಒ ಆಗಲಿದ್ದಾರೆ ಎಂಬ ಮಾತು ಇತ್ತು. ಆದರೆ, ಯು.ಬಿ. ಪ್ರವೀಣ್ ರಾವ್ ಅವರ ನಿವೃತ್ತಿಯ ನಂತರದಲ್ಲಿ ಸಿಒಒ ಹುದ್ದೆಯನ್ನು ರದ್ದುಮಾಡಲಾಯಿತು.

ಕಂಪನಿಯಲ್ಲಿ ಅತಿಹೆಚ್ಚು ವೇತನ ಪಡೆಯುವ ಹಿರಿಯ ಕಾರ್ಯನಿರ್ವಾಹಕರ ಸಾಲಿನಲ್ಲಿ ಕುಮಾರ್ ಅವರು ಮೂರನೆಯ ಸ್ಥಾನದಲ್ಲಿ ಇದ್ದರು.

ಇನ್ಫೊಸಿಸ್‌ನ ಆಡಳಿತ ಮಂಡಳಿ ಸಭೆಯು ಗುರುವಾರ ನಡೆಯಲಿದ್ದು, ಷೇರು ಮರುಖರೀದಿ ಬಗ್ಗೆ ಪರಿಶೀಲನೆ ನಡೆಯಲಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಸತೀಶ್ ಆನಂದ್

● **ಪ್ರಶ್ನೆ: 1995ರಲ್ಲಿ ನನ್ನ ತಂದೆಯಿಂದ ಅವರ ಮರಣದ ನಂತರ ಉಯಿಲಿನ ಮೂಲಕ ನನಗೆ ಪಿತ್ರಾರ್ಜಿತ ಆಸ್ತಿಯೊಂದು ಬಂತು. ಅದಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳು ನನ್ನ ಹೆಸರಿನಲ್ಲಿವೆ. ಈ ಆಸ್ತಿಯ ಮೇಲೆ ನಾನು ಸಾಲ ಪಡೆದು ಕಟ್ಟಡ ನಿರ್ಮಿಸಿದ್ದೇನೆ ಹಾಗೂ ಸಾಲ ಸಂಪೂರ್ಣವಾಗಿ ಮರುಪಾವತಿ ಮಾಡಲಾಗಿದೆ. ಈಗ ನಾನು ಅದನ್ನು ಮಾರಾಟ ಮಾಡಿದರೆ ಸುಮಾರು ₹ 2 ಕೋಟಿ ಸಿಗಬಹುದು. ತೆರಿಗೆ ವಿಧಿಸಬಹುದಾದ ಭಾಗ ಯಾವುದು ಮತ್ತು ಮಾನ್ಯತೆ ಪಡೆದ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಮೂಲಕ ನಾನು ತೆರಿಗೆಯನ್ನು ಹೇಗೆ ನಿಭಾಯಿಸಬಹುದು?**

ಉತ್ತರ: ನೀವು ಪ್ರಸ್ತುತ ಹೊಂದಿರುವ ಆಸ್ತಿಯ ಮಾರಾಟ ಮಾಡಿದಾಗ ತೆರಿಗೆ ನಿರ್ಣಯವಾಗುವುದು ಅದರ ಮಾರಾಟದಿಂದ ಬಂದ ಲಾಭ–ನಷ್ಟದ ಆಧಾರದಲ್ಲಿ. ನಿಮ್ಮ ಒಡೆತನದಲ್ಲಿರುವ ಎರಡು ವರ್ಷಕ್ಕಿಂತ ಹಿಂದಿನ ಆಸ್ತಿಯನ್ನು ಮಾರಾಟ ಮಾಡಿದಾಗ ಸಿಗಬಹುದಾದ ಮೊತ್ತ ಸುಮಾರು ₹ 2 ಕೋಟಿ ಎಂದು ಅಂದಾಜಿಸಿದ್ದೀರಿ. ಈ ಆಸ್ತಿಯ ಮೂಲ ಬೆಲೆ ಅಥವಾ ಅದಿಲ್ಲದ ಸಂದರ್ಭದಲ್ಲಿ ಅದಕ್ಕೆ ಸಮನಾದ ಅಂದಿನ ನ್ಯಾಯಸಮ್ಮತ ಮೌಲ್ಯ ಅಥವಾ ಆಸ್ತಿಯ ಮುದ್ರಾಂಕ ಮೌಲ್ಯದ ಆಧಾರದ ಮೇಲೆ ಪ್ರಸ್ತುತ ಅನ್ವಯವಾಗುವ ಹಣದುಬ್ಬರ ಸೂಚ್ಯಂಕವನ್ನು ಪರಿಗಣಿಸಿ ಅದರ ಇಂದಿನ ಬೆಲೆಯನ್ನು ಮರುನಿರ್ಧರಿಸಲಾಗುತ್ತದೆ. ಪ್ರಸ್ತುತ ಸಂದರ್ಭದಲ್ಲಿ ತೆರಿಗೆ ಲೆಕ್ಕ ಹಾಕಲು ಇದನ್ನು ನಿಮ್ಮ ಆಸ್ತಿಯ ಅಂದಾಜು ಖರೀದಿ ಮೌಲ್ಯವೆಂದು ಪರಿಗಣಿಸಲಾಗುತ್ತದೆ. ನಿಮ್ಮ ಮಾರಾಟದ ಬೆಲೆ ಇದಕ್ಕಿಂತ ಅಧಿಕ ಇದ್ದರೆ, ಹೆಚ್ಚುವರಿ ಮೊತ್ತವನ್ನು ಬಂಡವಾಳ ಲಾಭವೆಂದೂ, ಮಾರಾಟ ಬೆಲೆ ಅದಕ್ಕಿಂತ ಕಡಿಮೆ ಇದ್ದರೆ ಆ ವ್ಯತ್ಯಾಸವನ್ನು ಬಂಡವಾಳ ನಷ್ಟವೆಂದೂ ತಿಳಿಯಲಾಗುತ್ತದೆ. ಲಾಭವಾದ ಸಂದರ್ಭದಲ್ಲಿ ಶೇಕಡ 20ರಷ್ಟು ಮೂಲ ತೆರಿಗೆ ಹಾಗೂ ಅದರ ಮೇಲೆ ಶೇ 4ರಷ್ಟು ಸೆಸ್ ಅನ್ವಯವಾಗುತ್ತದೆ.

ನಿಮ್ಮ ಜಮೀನಿನ ನ್ಯಾಯಸಮ್ಮತ ಮಾರುಕಟ್ಟೆ ಮೌಲ್ಯ ಅರಿಯಲು, ಜಮೀನು ಇರುವ ಪ್ರದೇಶದ ಮಾಹಿತಿಯೂ ಬೇಕು. ಈ ಬಗ್ಗೆ ಹೆಚ್ಚಿನ ವಿವರವನ್ನು ಮುದ್ರಾಂಕ ಶುಲ್ಕ ಕಾನೂನಿನಲ್ಲಿ ಪರಿಶೀಲಿಸಬಹುದು. ಕಟ್ಟಡದ ನಿರ್ಮಾಣ ಮೌಲ್ಯ ನಿಮ್ಮ ಸಾಲದ ಮೊತ್ತ ಹಾಗೂ ಹೆಚ್ಚುವರಿಯಾಗಿ ನೀವು ಮಾಡಿರುವ ಖರ್ಚು ಪರಿಗಣಿಸಿ ಲೆಕ್ಕ ಹಾಕಬಹುದು.

ನೀವು ತೆರಿಗೆ ಉಳಿತಾಯ ಮಾಡಲು, ಎರಡು ವರ್ಷದೊಳಗೆ ಹೊಸದಾಗಿ ಬೇರೆಡೆ ಮನೆ ಕೊಂಡುಕೊಳ್ಳಬಹುದು ಅಥವಾ ಮೂರು ವರ್ಷದೊಳಗೆ ಮನೆ ಕಟ್ಟಿಸಬಹುದು. ಆಸ್ತಿ ಮಾರಾಟ ಮಾಡಿದ 6 ತಿಂಗಳೊಳಗಾಗಿ, ನಿಮ್ಮ ನಿರ್ಧಾರ ಅಂತಿಮಗೊಳ್ಳುವವರೆಗೆ ಬಂಡವಾಳ ಲಾಭ ಉಳಿತಾಯ ಖಾತೆ ಯೋಜನೆಯಲ್ಲಿ ಸಂಪೂರ್ಣ ಹಣ ತೊಡಗಿಸಿ. ಎರಡು-ಮೂರು ವರ್ಷದೊಳಗೆ ನಿಮ್ಮ ಖಾತೆಯಲ್ಲಿರುವ ಹಣವನ್ನು ಹೊಸ ಮನೆ ಖರೀದಿ ಅಥವಾ ಮನೆ ಕಟ್ಟಿಸುವುದಕ್ಕೆ ಉಪಯೋಗಿಸದಿದ್ದಲ್ಲಿ, ಆ ಮೊತ್ತವನ್ನು ತೆರಿಗೆಗೆ ಒಳಪಡಿಸಲಾಗುತ್ತದೆ.

ಈ ಯೋಜನೆ ನಿಮಗೆ ಸರಿ ಹೊಂದದಿದ್ದಲ್ಲಿ, ಆದಾಯ ತೆರಿಗೆ ನಿಯಮ 54ಇಸಿ ಅಡಿ ₹ 50 ಲಕ್ಷದ ತನಕ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಇಂಡಿಯನ್ ರೈಲ್ವೇಸ್ ಫೈನಾನ್ಸ್ ಕಾರ್ಪೊರೇಷನ್ ಲಿಮಿಟೆಡ್, ಪವರ್ ಫೈನಾನ್ಸ್ ಕಾರ್ಪೊರೇಷನ್ ಅಥವಾ ಗ್ರಾಮೀಣ ವಿದ್ಯುದೀಕರಣ ನಿಗಮದ ತೆರಿಗೆ ಉಳಿತಾಯ ಬಾಂಡ್‌ಗಳಲ್ಲಿ 5 ವರ್ಷದ ಮಟ್ಟಿಗೆ ಹೂಡಿಕೆ ಮಾಡಬಹುದು. ಆಗ, ಉಳಿದ ಲಾಭದ ಮೊತ್ತವಷ್ಟೇ ತೆರಿಗೆಗೊಳಪಡುತ್ತದೆ.

ಸುಪ್ರಿಯಾ ಎಚ್.ವಿ.

● **ಪ್ರಶ್ನೆ: ನನ್ನ ತಂಗಿ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾಳೆ. ತಿಂಗಳಿಗೆ ₹ 35,000 ವೇತನ ಪಡೆಯುತ್ತಿದ್ದಾಳೆ ಹಾಗೂ ಆಕೆಯ ವಯಸ್ಸು 25 ವರ್ಷ. ಸ್ವಂತ ಮನೆ ಕಟ್ಟಿಸಲು ಗೃಹ ಸಾಲ ಪಡೆಯಲು ನೋಡುತ್ತಿದ್ದಾಳೆ. ಸಾಲ ₹ 20 ಲಕ್ಷ ಬೇಕಾಗಬಹುದು. ಅವಳು ಈಗಾಗಲೇ ತಿಂಗಳಿಗೆ ₹ 15 ಸಾವಿರ ಎಲ್ಐಸಿ ಪಾಲಿಸಿಯಲ್ಲಿ ತೊಡಗಿಸುತ್ತಿದ್ದಾಳೆ. ಸಾಧ್ಯವಾದಷ್ಟು ಕಡಿಮೆ ಅವಧಿಯಲ್ಲಿ ಸಾಲ ಮರುಪಾವತಿ ಮಾಡುವುದು ಹೇಗೆ? ಉತ್ತಮ ಬ್ಯಾಂಕ್ ಅನ್ನು ಸಹ ಸೂಚಿಸಿ.**

ಉತ್ತರ: ವೃತ್ತಿ ಬದುಕಿನ ಆರಂಭಿಕ ಹಂತದಲ್ಲಿ ಸ್ವಂತ ಮನೆಯೊಂದನ್ನು ಕಟ್ಟಿಸುವ ಉದ್ದೇಶ ನಿಮ್ಮ ತಂಗಿಗೆ ಇರುವುದು ತುಂಬಾ ಉತ್ತಮ. ಆದರೆ ಅವರ ಸದ್ಯದ ವೇತನ, ಈಗ ಜೀವ ವಿಮಾ ಕಂತು ಪಾವತಿಸಿ ಉಳಿಯುವ ಮೊತ್ತ ಸುಮಾರು ₹ 20 ಸಾವಿರ. ಅವರಿಗೆ ಇತರ ಯಾವುದೇ ಖರ್ಚು ಇಲ್ಲವೆಂದು ತಿಳಿದು ಶೇಕಡ 8.5ರ ಬಡ್ಡಿ ದರದಲ್ಲಿ 20 ವರ್ಷದ ಮರುಪಾವತಿ ಅವಧಿಯ ಸಾಲ ಪಡೆದರೂ, ತಿಂಗಳಿಗೆ ಸುಮಾರು ₹ 17 ಸಾವಿರಕ್ಕೂ ಅಧಿಕ ಮೊತ್ತವನ್ನು ಇಎಂಐ ರೂಪದಲ್ಲಿ ಪಾವತಿಸಬೇಕಾಗುತ್ತದೆ. ನಿಮ್ಮ ತಂಗಿ ತಮ್ಮ ವೇತನದಲ್ಲಿ ಯಾವುದೇ ಹೆಚ್ಚುವರಿ ಅಗತ್ಯಗಳಿಗೆ ಖರ್ಚು ಮಾಡುವ ಹಂತದಲ್ಲಿಲ್ಲ. ಆದರೆ ವಾಸ್ತವದಲ್ಲಿ ಅಷ್ಟೊಂದು ಆರ್ಥಿಕ ಅಡಚಣೆಗೊಳಗಾಗಿ ತ್ವರಿತವಾಗಿ ಮನೆ ಕಟ್ಟಿಸುವ ಯೋಜನೆ ಮುಂದುವರಿಸಬೇಕೇ ಅಥವಾ ಮುಂದಕ್ಕೆ ಹಾಕಬಹುದೇ ಎನ್ನುವುದನ್ನು ಯೋಚಿಸಲಿ.

ಅವರ ವೈಯಕ್ತಿಕ ಖರ್ಚುಗಳನ್ನೆಲ್ಲ ಮನೆ ಮಂದಿ ತುಸು ಸಮಯ ವಹಿಸುವುದಿದ್ದರೆ ತೊಂದರೆ ಇಲ್ಲ. ಅಥವಾ ಒಂದೆರಡು ವರ್ಷ ಇನ್ನಷ್ಟು ಹಣ ಉಳಿತಾಯ ಮಾಡಿ, ಸಾಲದ ಮೊತ್ತವನ್ನೂ ಅದಕ್ಕೆ ತಕ್ಕಂತೆ ತಗ್ಗಿಸಿ, ಮನೆ ನಿರ್ಮಾಣಕ್ಕೆ ಮುಂದಾಗಬಹುದು. ಆಗ ವೇತನ ಇನ್ನಷ್ಟು ಹೆಚ್ಚಾಗಿದ್ದರೆ ಸಿಗುವ ಸಾಲವೂ ಹೆಚ್ಚಿರುತ್ತದೆ. ಅಥವಾ ಐದಾರು ಲಕ್ಷ ರೂಪಾಯಿಗಳನ್ನು ಬಂಧುಗಳಿಂದ ಸಾಲವಾಗಿ ಪಡೆದು, ಸದ್ಯದ ಪರಿಸ್ಥಿತಿಯಲ್ಲಿ ಸುಮಾರು ₹ 10,000ದಿಂದ ₹ 15,000 ಇಎಂಐ ಮೊತ್ತ ಪಾವತಿಸುವ ಅಂದಾಜಿನಲ್ಲಿ ಬ್ಯಾಂಕ್ ಸಾಲದ ಮೊರೆ ಹೋಗಬಹುದು. ನಿಮ್ಮ ತಂಗಿ ಈಗಾಗಲೇ ಎಲ್ಐಸಿ ಪಾಲಿಸಿಗೆ ಪ್ರೀಮಿಯಂ ಪಾವತಿಸುತ್ತಿರುವ ಕಾರಣ, ಪಾಲಿಸಿದಾರರಿಗೆ ಆ ಸಂಸ್ಥೆ ಪಾಲಿಸಿಯ ಸರೆಂಡರ್ ಮೊತ್ತದ ಶೇ 85ರಷ್ಟನ್ನು ಸಾಲವಾಗಿ ನೀಡುತ್ತದೆ. ಇದು ತುಸು ನೆರವಾಗಬಹುದು.

ಬ್ಯಾಂಕ್‌ಗಳು ಸಾಮಾನ್ಯವಾಗಿ ವೇತನದ ಶೇ 50ಕ್ಕೆ ಸರಿಹೊಂದುವ ಇಎಂಐಗೆ ಮಾತ್ರ ಸಾಲ ಮಂಜೂರು ಮಾಡುತ್ತವೆ. ಮಾತ್ರವಲ್ಲದೆ, ಯಾವುದೇ ಬ್ಯಾಂಕ್‌ಗಳಿಂದ ಸಾಲ ಪಡೆಯುವ ಸಂದರ್ಭದಲ್ಲಿ ಸಾಲಗಾರರ ಸಿಬಿಲ್ ಅಂಕ, ಕೆಲಸ ಮಾಡುವ ಕಂಪನಿ/ಸಂಸ್ಥೆ, ಪಡೆಯುವ ವೇತನ ಇತ್ಯಾದಿ ಆಧಾರದ ಮೇಲೆ ಬಡ್ಡಿ ದರ, ಸಾಲದ ಮೊತ್ತ ನಿರ್ಧಾರವಾಗುತ್ತದೆ. ಕಡಿಮೆ ಬಡ್ಡಿ ದರ, ತ್ವರಿತ ಸಾಲ ನೀಡುವ ಮಾಹಿತಿಯನ್ನು ಕಲೆ ಹಾಕಲು ಬ್ಯಾಂಕ್‌ಗಳ ಜಾಲತಾಣದಲ್ಲಿ ನೋಂದಾಯಿಸಿಕೊಳ್ಳಲಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001
ಇ–ಮೇಲ್: businessdesk@prajavani.co.in

ಭಾರತದ ಜಿಡಿಪಿ ಬೆಳವಣಿಗೆ ಅಂದಾಜು ತಗ್ಗಿಸಿದ ಐಎಂಎಫ್

ವಾಷಿಂಗ್ಟನ್ (ಪಿಟಿಐ): 2022ರಲ್ಲಿ ಭಾರತದ ಆರ್ಥಿಕ ಬೆಳವಣಿಗೆ ಅಂದಾಜನ್ನು ತಗ್ಗಿಸಿರುವ ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್), ದೇಶದ ಜಿಡಿಪಿ (ಒಟ್ಟು ಆಂತರಿಕ ಉತ್ಪಾದನೆ) ಬೆಳವಣಿಗೆ ದರವು ಶೇಕಡ 6.8ರಷ್ಟು ಇರಲಿದೆ ಎಂದು ಹೇಳಿದೆ. ಜಿಡಿಪಿ ಬೆಳವಣಿಗೆಯು ಶೇ 7.4ರಷ್ಟು ಇರಲಿದೆ ಎಂದು ಐಎಂಎಫ್ ಜುಲೈನಲ್ಲಿ ಅಂದಾಜಿಸಿತ್ತು.

2021–22ನೆಯ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಶೇ 8.7ರಷ್ಟು ಬೆಳವಣಿಗೆ ಕಂಡಿದೆ.

ಐಎಂಎಫ್ ತನ್ನ ವಾರ್ಷಿಕ ಜಾಗತಿಕ ಆರ್ಥಿಕ ಮುನ್ನೋಟ ವರದಿಯನ್ನು ಮಂಗಳವಾರ ಬಿಡುಗಡೆ ಮಾಡಿದೆ.

ಜಾಗತಿಕ ಆರ್ಥಿಕ ಬೆಳವಣಿಗೆ ದರವು 2022ರಲ್ಲಿ ಶೇ 3.2ಕ್ಕೆ ಇಳಿಕೆಯಾಗಲಿದೆ. 2023ರಲ್ಲಿ ಇದು ಶೇ 2.7ಕ್ಕೆ ತಲುಪಲಿದೆ. ಪ್ರಸಕ್ತ ವರ್ಷದ ಮೊದಲಾರ್ಧ ದಲ್ಲಿ ಅಮೆರಿಕದಲ್ಲಿ ಕುಸಿತ ದಾಖಲಾಗಲಿದೆ, ದ್ವಿತೀಯಾರ್ಧ ದಲ್ಲಿ ಯೂರೊ ವಲಯದಲ್ಲಿ ಕುಸಿತ ಕಂಡುಬರಲಿದೆ ಎಂದು ವರದಿ ಹೇಳಿದೆ.

‘ಅತಿಕೆಟ್ಟ ದಿನಗಳು ಇನ್ನಷ್ಟೇ ಬರಬೇಕಿದೆ. ಹಲವರ ಪಾಲಿಗೆ 2023ನೆಯ ಇಸವಿಯು ಆರ್ಥಿಕ ಹಿಂಜರಿತದ ಅನುಭವ ನೀಡಲಿದೆ’ ಎಂದು ವರದಿಯು ಹೇಳಿದೆ.

2023ರಲ್ಲಿ ಜಗತ್ತಿನ ಮೂರನೆಯ ಒಂದಕ್ಕಿಂತ ಹೆಚ್ಚಿನ ಅರ್ಥ ವ್ಯವಸ್ಥೆಗಳು ಆರ್ಥಿಕವಾಗಿ ಕುಸಿತ ಕಾಣಲಿವೆ. ವಿಶ್ವದ ಅತಿದೊಡ್ಡ ಅರ್ಥ ವ್ಯವಸ್ಥೆಗಳಾದ ಅಮೆರಿಕ, ಐರೋಪ್ಯ ಒಕ್ಕೂಟ ಮತ್ತು ಚೀನಾದ ಬೆಳವಣಿಗೆ ಸ್ಥಗಿತವಾಗಲಿದೆ ಎಂದು ಅದು ತಿಳಿಸಿದೆ.

‘ವಿನ್‌ಕೋವ್–19’ನ 2ನೇ ಹಂತದ ಕ್ಲಿನಿಕಲ್ ಟ್ರಯಲ್ ಯಶಸ್ವಿ

ಹೈದರಾಬಾದ್: ‘ಸಾರ್ಸ್-ಕೋವ್-2’ (ಕೊರೊನಾ ವೈರಸ್) ವೈರಸ್ ಸೋಂಕಿನ ಚಿಕಿತ್ಸೆಗಾಗಿ ಅಭಿವೃದ್ಧಿಪಡಿಸಿರುವ ‘ವಿನ್‌ಕೋವ್-19’ ಔಷಧಿಯ 2ನೇ ಹಂತದ ಕ್ಲಿನಿಕಲ್ ಟ್ರಯಲ್ ಯಶಸ್ವಿಯಾಗಿದೆ.

ಔಷಧಿಯನ್ನು ಅಭಿವೃದ್ಧಿಪಡಿಸಿರುವ ಹೈದರಾಬಾದ್ ವಿಶ್ವವಿದ್ಯಾಲಯ, ಸಿಎಸ್ಐಆರ್-ಸಿಸಿಎಂಬಿ ಹಾಗೂ ವಿಐಎನ್ಎಸ್ ಬಯೋ-ಪ್ರಾಡಕ್ಟ್ಸ್ ಲಿಮಿಟೆಡ್, ಕ್ಲಿನಿಕಲ್ ಟ್ರಯಲ್ ಯಶಸ್ವಿಯಾಗಿರುವ ಕುರಿತು ಮಂಗಳವಾರ ಘೋಷಣೆ ಮಾಡಿವೆ.

ಕೊರೊನಾ ವೈರಸ್ ವಿರುದ್ಧ ಭಾರತದಲ್ಲಿ ಅಭಿವೃದ್ಧಿಪಡಿಸಲಾಗಿರುವ ‘ಮೊದಲ ಔಷಧಿ’ ಇದಾಗಿದೆ ಎಂದು ಈ ಸಂಸ್ಥೆಗಳು ಹೇಳಿಕೊಂಡಿವೆ.

‘ವಿನ್‌ಕೋವ್-19’ನ 3ನೇ ಹಂತದ ಕ್ಲಿನಿಕಲ್ ಟ್ರಯಲ್‌ನ ಸಿದ್ಧತೆ ನಡೆಯುತ್ತಿದ್ದು, ಔಷಧಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲು ಸಹ ಅನುಮತಿ ಕೋರಲಾಗಿದೆ ಎಂದು ಸಂಸ್ಥೆಗಳು ಹೇಳಿವೆ.

‘ಕೊರೊನಾ ವೈರಸ್ ಸೋಂಕಿಗೆ ಚಿಕಿತ್ಸೆ ನೀಡಲು ಅಭಿವೃದ್ಧಿಪಡಿಸಲಾಗಿರುವ ಪ್ರತಿಕಾಯಗಳಿರುವ ಈ ಔಷಧಿ ಭಾರತದಲ್ಲಿಯೇ ಮೊದಲು. ಈ ವೈರಸ್ ಸೋಂಕಿನ ಚಿಕಿತ್ಸೆಗೆ ಒಂದಕ್ಕಿಂತ ಹೆಚ್ಚು ಔಷಧಿಗಳ ಆಯ್ಕೆ ಹೊಂದಬೇಕಾಗಿರುವುದು ಅಗತ್ಯ’ ಎಂದು ಸಿಎಸ್ಐಆರ್–ಸಿಸಿಎಂಬಿ ನಿರ್ದೇಶಕ ಡಾ.ವಿನಯ್ ನಂದಿಕೂರಿ ಹೇಳಿದ್ದಾರೆ.

ಹೈಬ್ರಿಡ್ ಕಾರು ಅನಾವರಣ ಮಾಡಿದ ಗಡ್ಕರಿ

ನವದೆಹಲಿ (ಪಿಟಿಐ): ಸಂಪೂರ್ಣವಾಗಿ ಎಥೆನಾಲ್ ಬಳಸಿ ಚಲಿಸಬಲ್ಲ ಹೈಬ್ರಿಡ್ ಕಾರನ್ನು ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಮಂಗಳವಾರ ಅನಾವರಣ ಮಾಡಿದರು.

ಟೊಯೊಟ ಕಂಪನಿ ಅಭಿವೃದ್ಧಿಪಡಿಸಿರುವ ಈ ಕಾರು ಎಥೆನಾಲ್ ಮಾತ್ರವಲ್ಲದೆ ವಿದ್ಯುತ್ ಬಳಸಿಯೂ ಚಲಿಸಬಲ್ಲದು.

ಕೊರೊಲಾ ಆಲ್ಟಿಸ್ ಎಫ್‌ಎಫ್‌ವಿ-ಎಸ್‌ಎಚ್‌ಇವಿ ಹೆಸರಿನ ಈ ಕಾರನ್ನು ಟೊಯೊಟ ಕಂಪನಿಯು ಪ್ರಯೋಗಾರ್ಥವಾಗಿ ಅನಾವರಣ ಮಾಡಿದೆ. ಇದನ್ನು ಬ್ರೆಜಿಲ್‌ನಿಂದ ಆಮದು ಮಾಡಿಕೊಳ್ಳಲಾಗಿದೆ.



ಟೊಯೊಟ ಕೊರೊಲಾ ಆಲ್ಟಿಸ್ ಹೈಬ್ರಿಡ್ ಕಾರು –ಪಿಟಿಐ ಚಿತ್ರ

ದೇಶದಲ್ಲಿ ಮಾಲಿನ್ಯಕ್ಕೆ ಸಾರಿಗೆ ವಲಯದ ಕೊಡುಗೆಯೂ ಇದೆ. ಹೀಗಾಗಿ ವಿದ್ಯುತ್ ಚಾಲಿತ ವಾಹನಗಳು ಮತ್ತು ಜೈವಿಕ ಇಂಧನ ಬಳಸಿ ಚಲಿಸುವ ವಾಹನಗಳ ಬಳಕೆಯನ್ನು ಉತ್ತೇಜಿಸಬೇಕಾದ ಅಗತ್ಯ ಇದೆ ಎಂದು ಗಡ್ಕರಿ ಹೇಳಿದ್ದಾರೆ.

ಈ ಕಾರಿನಲ್ಲಿ ವಿದ್ಯುತ್ ಚಾಲಿತ ಮೋಟರ್ ಹಾಗೂ ಜೈವಿಕ ಇಂಧನ ಬಳಸುವ ಎಂಜಿನ್ ಅಳವಡಿಸಲಾಗಿದೆ. ಇದು ವಿದ್ಯುತ್ ಚಾಲಿತ ಮೋಟರ್ ಬಳಸಿ ಗಣನೀಯ ಅವಧಿಯವರೆಗೆ ಚಲಿಸಬಲ್ಲದು. ಅಲ್ಲದೆ, ಹೆಚ್ಚಿನ ಪ್ರಮಾಣದಲ್ಲಿ ಎಥೆನಾಲ್ ಇರುವ ಇಂಧನ ಬಳಸಿಯೂ ಚಲಿಸಬಲ್ಲದು.

ಈ ಕಾರಿನಲ್ಲಿ ಸಾಮಾನ್ಯವಾಗಿ ಪೆಟ್ರೋಲ್‌ಗೆ ಎಥೆನಾಲ್ ಅಥವಾ ಮಿಥೆನಾಲ್ ಮಿಶ್ರಣ ಮಾಡಿ, ಇಂಧನವಾಗಿ ಬಳಸಲಾಗುತ್ತದೆ. ಬ್ರೆಜಿಲ್, ಅಮೆರಿಕ ಮತ್ತು ಕೆನಡಾ ದೇಶಗಳಲ್ಲಿ ಇಂತಹ ವಾಹನಗಳು ಮಾರುಕಟ್ಟೆಯಲ್ಲಿ ಇವೆ.

ಮಧ್ಯಮ ವರ್ಗಕ್ಕೆ ಉತ್ತಮ ವೈದ್ಯಕೀಯ ವಿಮೆ ಕೊಡಿ– ನೀತಿ ಆಯೋಗ

ನವದೆಹಲಿ (ಪಿಟಿಐ): ‘ದೇಶದ ಶೇ 6.8ರಷ್ಟು ಮಧ್ಯಮ ವರ್ಗದ ಮಂದಿ ಮಾತ್ರವೇ ಖಾಸಗಿ ವೈದ್ಯಕೀಯ ವಿಮೆ ಹೊಂದಿದ್ದಾರೆ. ಆದ್ದರಿಂದ ಮಧ್ಯಮ ವರ್ಗದ ಜನರಿಗಾಗಿ ಉತ್ತಮ ಮಾದರಿಯ ವೈದ್ಯಕೀಯ ವಿಮೆಯನ್ನು ಕೊಡುವ ಅಗತ್ಯ ಇದೆ’ ಎಂದು ನೀತಿ ಆಯೋಗದ (ಆರೋಗ್ಯ) ಸದಸ್ಯ ಡಾ. ವಿ.ಕೆ. ಪಾಲ್ ಹೇಳಿದರು.

ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಸಂಘ ಮಂಗಳವಾರ ಆಯೋಜಿಸಿದ್ದ ‘ಫಿಕ್ಕಿ ಹೀಲ್ 2022’ ಕಾರ್ಯಕ್ರಮದಲ್ಲಿ ‘ಭಾರತದ ಆರ್ಥಿಕ ಬೆಳವಣಿಗೆಯಲ್ಲಿ ಆರೋಗ್ಯಸೇವೆಗಳ ಪಾತ್ರ’ ವಿಷಯದ ಕುರಿತು ಅವರು ಮಾತನಾಡಿದರು. ‘ಕಳೆದುಹೋಗಿರುವ ಮಧ್ಯಮ ವರ್ಗ’ದ 30ರಿಂದ 40 ಕೋಟಿ ಜನರಿಗೆ ವೈದ್ಯಕೀಯ ವಿಮೆ ಬೇಕು ಎನ್ನುವುದನ್ನು ನೀತಿ ಆಯೋಗವು ಹಿಂದಿನಿಂದ ಹೇಳಿಕೊಂಡು ಬಂದಿದೆ’ ಎಂದರು.

‘ಆರೋಗ್ಯ ಕ್ಷೇತ್ರದ ಮೂಲಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿ ದೇಶದಲ್ಲಿ ಎರಡು ಮಧ್ಯಮ ಅವಧಿಯ ಬಂಡವಾಳ ಯೋಜನೆಗಳಿವೆ. ಒಂದು, 15ನೇ ಹಣಕಾಸು ಆಯೋಗದ ಅಡಿಯಲ್ಲಿ ₹77 ಸಾವಿರ ಕೋಟಿ ಹೂಡಿಕೆ ಆಗುತ್ತಿದೆ. ಇನ್ನೊಂದು ಆಯುಷ್ಮಾನ್ ಭಾರತ ವಿಮೆ ಮಿಷನ್ ಅಡಿಯಲ್ಲಿ ₹64 ಸಾವಿರ ಕೋಟಿ ಬಳಕೆಯಾಗುತ್ತಿದೆ. ಈ ಎರಡೂ ಐದು ವರ್ಷದ ಅವಧಿಗೆ ಹೂಡಿಕೆ ಆಗುವಂಥವು’ ಎಂದು ವಿವರಿಸಿದರು.

‘ಈ ಎರಡೂ ಯೋಜನೆಗಳ ಮೊತ್ತವನ್ನು ಕೂಡಿಸಿ, ದೇಶದಲ್ಲಿರುವ ರಾಜ್ಯಗಳಿಂದ ಭಾಗಿಸಿದರೆ, ಪ್ರತಿ ಜಿಲ್ಲೆಗೆ ₹200 ಕೋಟಿ ಹಣ ಸಿಗಲಿದೆ. ಮೂಲಸೌಕರ್ಯ ಅಭಿವೃದ್ಧಿಗಾಗಿ ಐದು ವರ್ಷದಲ್ಲಿ ಪ್ರತಿ ಜಿಲ್ಲೆಗೂ ಇಷ್ಟೊಂದು ಹಣ ಸಿಗಲಿದೆ. ಇದು ಅಭಿವೃದ್ಧಿಗೆ ಪೂರಕವಾಗಿದೆ’ ಎಂದರು.

ಕಾಶ್ಮೀರ ಪ್ರತ್ಯೇಕತಾವಾದಿ ನಾಯಕ ಅಲ್ತಾಫ್ ನಿಧನ

ನವದೆಹಲಿ (ಪಿಟಿಐ): ಕಾಶ್ಮೀರ ಪ್ರತ್ಯೇಕತಾ ವಾದಿ ನಾಯಕ ಅಲ್ತಾಫ್ ಅಹ್ಮದ್ ಶಾ (66) ಇಲ್ಲಿನ ಎಐಐಎಂಎಸ್ ಆಸ್ಪತ್ರೆಯಲ್ಲಿ ಮಂಗಳವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರನ್ನು ದೆಹಲಿ ಹೈಕೋರ್ಟ್ ಆದೇಶದ ಮೇರೆಗೆ ಎಐಐಎಂಎಸ್‌ಗೆ ದಾಖಲಿಸಲಾಗಿತ್ತು. ಶಾ ಅವರು, ಹುರಿಯತ್ ನಾಯಕ ಸೈಯದ್ ಅಲಿ ಶಾ ಗಿಲಾನಿ ಅವರ ಅಳಿಯ.

ಸಂಕ್ಷಿಪ್ತ ಸುದ್ದಿ

ಅಫ್ಘಾನಿಸ್ತಾನಕ್ಕೆ ಭಾರತ ಮತ್ತೆ ನೆರವು

ನವದೆಹಲಿ (ಪಿಟಿಐ): ಯುದ್ಧಪೀಡಿತ ಅಫ್ಘಾನಿಸ್ತಾನಕ್ಕೆ ಭಾರತ ಮಂಗಳವಾರ ಮತ್ತೊಮ್ಮೆ ಅಗತ್ಯ ಔಷಧಗಳು ಮತ್ತು ವೈದ್ಯಕೀಯ ಪರಿಕರಗಳನ್ನು ರವಾನಿಸಿದೆ. ಈ ಎಲ್ಲ ಪರಿಕರಗಳನ್ನು ಕಾಬೂಲ್‌ನಲ್ಲಿರುವ ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಗೆ ಹಸ್ತಾಂತರಿಸಲಾಗಿದೆ.

‘ಕಳೆದ ಕೆಲವು ತಿಂಗಳ ಈಚೆಗೆ ಭಾರತ, ಕ್ಷಯರೋಗ ನಿರೋಧಕ ಔಷಧಗಳು, 50,000 ಡೋಸ್ ಕೋವಿಡ್ ಲಸಿಕೆ ಸೇರಿ 45 ಟನ್ ವೈದ್ಯಕೀಯ ಪರಿಕರಗಳನ್ನು ನೀಡುವ ಮೂಲಕ ಅಫ್ಘಾನಿಸ್ತಾನಕ್ಕೆ ನೆರವಾಗಿದೆ. ಅಲ್ಲದೇ, ಅಲ್ಲಿನ ಜನರಿಗೆ 40,000 ಟನ್ ಗೋಧಿ ಪೂರೈಸಲಾಗಿದೆ ಎಂದು ವಿದೇಶಾಂಗ ಇಲಾಖೆ ತಿಳಿಸಿದೆ.

‘ಸವಾಲುಗಳ ನಡುವೆಯೂ ಆರ್ಥಿಕತೆ ವೃದ್ಧಿ’

ನವದೆಹಲಿ (ಪಿಟಿಐ): ಹಿಂದಿನ ಕಾಂಗ್ರೆಸ್ ಸರ್ಕಾರಗಳ ಆರ್ಥಿಕ ನೀತಿಗಳು ‘ವಿಫಲ ಸಮಾಜವಾದ ಮತ್ತು ಬಂಡವಾಳಶಾಹಿ ಸ್ನೇಹಿ’ಯಾಗಿದ್ದವು. ಆದರೆ ಪ್ರಧಾನಿ ನರೇಂದ್ರ ಮೋದಿ ಅವರ ಪ್ರಬಲ ನಾಯಕತ್ವದಲ್ಲಿ ಜಾಗತಿಕ ಸವಾಲುಗಳ ನಡುವೆಯೂ ಭಾರತದ ಆರ್ಥಿಕತೆ ವೃದ್ಧಿಯಾಗಿದೆ ಎಂದು ಬಿಜೆಪಿ ವಕ್ತಾರ ಗೋಪಾಲಕೃಷ್ಣ ಅಗರ್‌ವಾಲ್ ಮಂಗಳವಾರ ಹೇಳಿದ್ದಾರೆ.

ಮುಕ್ತ ಮಾರುಕಟ್ಟೆಗೆ ಉತ್ತೇಜನ ನೀಡುವುದರ ಜೊತೆಗೆ ಮೋದಿ ಅವರು ಭ್ರಷ್ಟಾಚಾರ ಮುಕ್ತ ಮತ್ತು ಪಾರದರ್ಶಕ ಆಡಳಿತ ನೀಡುತ್ತಿದ್ದಾರೆ ಎಂದಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500- 520
ರಾಶಿ ಉತ್ತಮ	550-600
ಜರಡಿ	600 - 650
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,150-1,250
ಕಾಳು ಮೆಣಸು	480
ಅಡಿಕೆ	
ಬಂಟ್ವಾಳ	
ಹಳತು	48000-56000
ಕೋಕ	12500-25000
ಭದ್ರಾವತಿ	
ರಾಶಿ	43199-49099
ಚನ್ನಗಿರಿ	
ರಾಶಿ	46200-49899
ಕಾರ್ಕಳ	
ಹೊಸತು	20000-35000
ಹಳತು	40000-48500
ಕುಂದಾಪುರ	
ಹಳೆಚಾಲಿ	50000-56000
ಪುತ್ತೂರು	
ಹೊಸತು	35500-48500
ಸಾಗರ	
ಬಿಳಿಗೋಟು	28899-34529
ಚಾಲಿ	38299-39599
ಕೋಕ	30899-36099
ಕೆಂಪುಗೋಟು	35199-35199
ರಾಶಿ	44519-50299
ಸಿಪ್ಪೆಗೋಟು	19599-21899
ಶಿವಮೊಗ್ಗ	
ಗೊರಬಲು	18009-37900
ರಾಶಿ	44009-50499
ಸಿದ್ದಾಪುರ	
ಬಿಳಿಗೋಟು	29109-34029
ಚಾಲಿ	38609-42399
ಕೋಕ	26889-34299
ಕೆಂಪುಗೋಟು	33719-35489
ರಾಶಿ	48399-50249
ತಟ್ಟಿಬೆಟ್ಟೆ	39869-49009
ಶಿರಸಿ	
ಬೆಟ್ಟೆ	39299-46669
ಬಿಳಿಗೋಟು	25009-36499
ಚಾಲಿ	34611-43599
ಕೆಂಪುಗೋಟು	28915-34299
ರಾಶಿ	44199-49399
ತುಮಕೂರು	
ರಾಶಿ	47200-49100
ಯಲ್ಲಾಪುರ	
ಆಪಿ	56933-58919
ಬಿಳಿಗೋಟು	26899-35603
ಚಾಲಿ	36069-43070
ಕೋಕ	18899-32911
ಕೆಂಪುಗೋಟು	26899-36099
ರಾಶಿ	48004-54699
ತಟ್ಟಿಬೆಟ್ಟೆ	38699-47969

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	16000	16100	217.45 ಸೆಂಟ್ಸ್
ಎಸಿ	---	8400	8850	
ಆರ್‌ಪಿ	---	9800	9850	ಲಂಡನ್
ಆರ್‌ಸಿ	---	4500	4750	2158 ಡಾಲರ್ಸ್

ಕ್ರಿಕೆಟ್: ಸ್ಪಿನ್ ದಾಳಿಗೆ ನಲುಗಿದ ದಕ್ಷಿಣ ಆಫ್ರಿಕಾ; ಭಾರತಕ್ಕೆ ಏಳು ವಿಕೆಟ್‌ಗಳ ಜಯ

ಧವನ್ ಬಳಗಕ್ಕೆ ಸರಣಿ ಗೆಲುವು



ಸರಣಿ ಗೆದ್ದ ಭಾರತ ತಂಡದ ಆಟಗಾರರು ಟ್ರೋಫಿಯೊಂದಿಗೆ ಸಂಭ್ರಮಿಸಿದರು –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಭಾರತದ ಸ್ಪಿನ್ನರ್‌ಗಳು ತೋರಿದ ಕೈಚಳಕಕ್ಕೆ ದಕ್ಷಿಣ ಆಫ್ರಿಕಾ ಬ್ಯಾಟರ್‌ಗಳು ಚಡಪಡಿಸಿದರು.

ಮಂಗಳವಾರ ನಡೆದ ಮೂರನೇ ಹಾಗೂ ಕೊನೆಯ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಏಳು ವಿಕೆಟ್‌ಗಳ ಗೆಲುವು ಪಡೆದ ಶಿಖರ್ ಧವನ್ ನೇತೃತ್ವದ ಭಾರತ, ಸರಣಿಯನ್ನು 2–1 ರಲ್ಲಿ ತನ್ನದಾಗಿಸಿಕೊಂಡಿತು.

ಟಾಸ್ ಸೋತು ಮೊದಲು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ದಕ್ಷಿಣ ಆಫ್ರಿಕಾ ತಂಡ ‘ತ್ರಿವಳಿ’ ಸ್ಪಿನ್ನರ್‌ಗಳಾದ ಕುಲದೀಪ್ ಯಾದವ್ (18ಕ್ಕೆ 4), ವಾಷಿಂಗ್ಟನ್ ಸುಂದರ್ (15ಕ್ಕೆ 2) ಮತ್ತು ಶಹಬಾಜ್ ಅಹ್ಮದ್ (32ಕ್ಕೆ 2) ಅವರ ದಾಳಿಗೆ ನಲುಗಿ 27.1 ಓವರ್‌ಗಳಲ್ಲಿ 99 ರನ್‌ಗಳಿಗೆ ಆಲೌಟಾಯಿತು.

ಆತಿಥೇಯ ತಂಡ 19.1 ಓವರ್‌ಗಳಲ್ಲಿ 3 ವಿಕೆಟ್‌ಗೆ 105 ರನ್ ಗಳಿಸಿ ಜಯ ಸಾಧಿಸಿತು. ಸಣ್ಣ ಗುರಿಯನ್ನು ಬೆನ್ನಟ್ಟುವ ಹಾದಿಯಲ್ಲಿ ಭಾರತ ತಂಡ ಶಿಖರ್ ಧವನ್ (8 ರನ್, 14 ಎ.) ಮತ್ತು ಇಶಾನ್ ಕಿಶನ್ (10 ರನ್, 18 ಎ.) ಅವರನ್ನು ಬೇಗನೇ ಕಳೆದುಕೊಂಡಿತು.

ಶುಭಮನ್ ಗಿಲ್ (49 ರನ್, 57 ಎ., 4X8) ಮತ್ತು ಶ್ರೇಯಸ್ ಅಯ್ಯರ್ (ಔಟಾಗದೆ 28, 23 ಎ., 4X3, 6X2) ಯಾವುದೇ ಒತ್ತಡಕ್ಕೆ ಒಳಗಾಗದೆ ತಂಡದ ಗೆಲುವಿನ ಹಾದಿ ಸುಗಮಗೊಳಿಸಿದರು. ಜಯಕ್ಕೆ 3 ರನ್‌ಗಳು ಬೇಕಿದ್ದಾಗ ಗಿಲ್ ಔಟಾದರು. ಅವರು ಕೇವಲ ಒಂದು ರನ್‌ನಿಂದ ಅರ್ಧಶತಕ ತಪ್ಪಿಸಿಕೊಂಡರು.

ಮುಖ್ಯಾಂಶಗಳು

- ದಕ್ಷಿಣ ಆಫ್ರಿಕಾ 99 ರನ್‌ಗಳಿಗೆ ಆಲೌಟ್
- ಕುಲದೀಪ್ ಯಾದವ್‌ಗೆ 4 ವಿಕೆಟ್
- ಮೊಹಮ್ಮದ್ ಸಿರಾಜ್, ವಾಷಿಂಗ್ಟನ್, ಶಹಬಾಜ್ ಪ್ರಭಾವಿ ದಾಳಿ

ಚುರುಕಿನ ಬೌಲಿಂಗ್: ಟಾಸ್ ಗೆದ್ದು ಫೀಲ್ಡಿಂಗ್ ಆಯ್ದುಕೊಂಡ ಧವನ್ ಅವರ ನಿರ್ಧಾರವನ್ನು ಬೌಲರ್‌ಗಳು ಸಮರ್ಥಿಸಿಕೊಂಡರು. ಮೊಹಮ್ಮದ್ ಸಿರಾಜ್ ಮತ್ತು ವಾಷಿಂಗ್ಟನ್ ಸುಂದರ್ ಎದುರಾಳಿ ತಂಡಕ್ಕೆ ಆರಂಭಿಕ ಆಘಾತ ನೀಡಿದರೆ, ಕುಲದೀಪ್ ಕೊನೆಯ ಕ್ರಮಾಂಕದ ಬ್ಯಾಟರ್‌ಗಳನ್ನು ಕಟ್ಟಿಹಾಕಿದರು.

ಕ್ವಿಂಟನ್ ಡಿಕಾಕ್ (6), ರೀಜಾ ಹೆಂಡ್ರಿಕ್ಸ್ (3) ಮತ್ತು ಏಡನ್ ಮರ್ಕರಂ (9) ಎರಡಂಕಿಯ ಮೊತ್ತ ಗಳಿಸಲಿಲ್ಲ. ಇವರು ಕ್ರಮವಾಗಿ ವಾಷಿಂಗ್ಟನ್, ಸಿರಾಜ್ ಮತ್ತು ಶಹಬಾಜ್‌ಗೆ ವಿಕೆಟ್ ಒಪ್ಪಿಸಿದರು. ಉತ್ತಮ ಆರಂಭ ಪಡೆದಿದ್ದ ಜೇನ್ಮನ್ ಮಲಾನ್ (15) ಅವರನ್ನು ಸಿರಾಜ್ ಪೆವಿಲಿಯನ್‌ಗೆ ಅಟ್ಟಿದರು. ನಾಲ್ಕನೇ ವಿಕೆಟ್ ಬಿದ್ದಾಗ ತಂಡದ ಸ್ಕೋರ್ 43 ಆಗಿತ್ತು.

ಹೆನ್ರಿಕ್ ಕ್ಲಾಸನ್ (34 ರನ್, 42 ಎ., 4X4) ಪ್ರತಿರೋಧ ಒಡ್ಡಿದರೂ, ಅವರಿಗೆ ಇತರ ಬ್ಯಾಟರ್‌ಗಳಿಂದ ಬೆಂಬಲ ಸಿಗಲಿಲ್ಲ. ನಾಯಕ ಡೇವಿಡ್ ಮಿಲ್ಲರ್ (7) ಅವರು ವಾಷಿಂಗ್ಟನ್ ಎಸೆತದಲ್ಲಿ ಬೌಲ್ಡ್ ಆದರು. 20ನೇ ಓವರ್‌ನಲ್ಲಿ ದಾಳಿಗಿಳಿದ ಕುಲದೀಪ್ ಕೂಡಾ ವಿಕೆಟ್ ಬೇಟೆ ಶುರು ಮಾಡಿದ್ದರಿಂದ ದಕ್ಷಿಣ ಆಫ್ರಿಕಾ ಮರುಹೋರಾಟದ ಆಸೆ ಕೈಬಿಟ್ಟಿತು.

ಸಂಕ್ಷಿಪ್ತ ಸ್ಕೋರ್: ದಕ್ಷಿಣ ಆಫ್ರಿಕಾ 27.1 ಓವರ್‌ಗಳಲ್ಲಿ 99 (ಜೇನ್ಮನ್ ಮಲಾನ್ 15, ಹೆನ್ರಿಕ್ ಕ್ಲಾಸನ್ 34, ಮಾರ್ಕೊ ಜಾನ್ಸೆನ್ 14, ಕುಲದೀಪ್ ಯಾದವ್ 18ಕ್ಕೆ 4, ವಾಷಿಂಗ್ಟನ್ ಸುಂದರ್ 15ಕ್ಕೆ 2, ಮೊಹಮ್ಮದ್ ಸಿರಾಜ್ 17ಕ್ಕೆ 2, ಶಹಬಾಜ್ ಅಹ್ಮದ್ 32ಕ್ಕೆ 2)

ಭಾರತ 19.1 ಓವರ್‌ಗಳಲ್ಲಿ 3 ವಿಕೆಟ್‌ಗೆ 105 (ಶಿಖರ್ ಧವನ್ 8, ಶುಭಮನ್ ಗಿಲ್ 49, ಇಶಾನ್ ಕಿಶನ್ 10, ಶ್ರೇಯಸ್ ಅಯ್ಯರ್ ಔಟಾಗದೆ 28, ಸಂಜು ಸ್ಯಾಮ್ಸನ್ ಔಟಾಗದೆ 2, ಲುಂಗಿ ಗಿಡಿ 21ಕ್ಕೆ 1, ಬೋರ್ನ್ ಫಾರ್ಟೂನ್ 20ಕ್ಕೆ 1) ಫಲಿತಾಂಶ: ಭಾರತಕ್ಕೆ 7 ವಿಕೆಟ್ ಗೆಲುವು; 3 ಪಂದ್ಯಗಳ ಸರಣಿಯಲ್ಲಿ 2–1 ಜಯ

ದೇವದತ್ತ ಶತಕ ವೈಭವ

ಸೈಯದ್ ಮುಷ್ತಾಕ್ ಅಲಿ ಟಿ20: ಕರ್ನಾಟಕ ಶುಭಾರಂಭ

ಪ್ರಜಾವಾಣಿ ವಾರ್ತೆ



ದೇವದತ್ತ ಪಡಿಕ್ಕಲ್

ಬೆಂಗಳೂರು: ಆರಂಭಿಕ ಬ್ಯಾಟರ್ ದೇವದತ್ತ ಪಡಿಕ್ಕಲ್ (ಔಟಾಗದೆ 124, 62 ಎ., 4X14, 6X4) ಅವರ ಅಬ್ಬರದ ಶತಕದ ನೆರವಿನಿಂದ ಕರ್ನಾಟಕ ತಂಡ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಮೊಹಾಲಿಯಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಮಯಂಕ್ ಅಗರವಾಲ್ ಬಳಗ 99 ರನ್‌ಗಳಿಂದ ಮಹಾರಾಷ್ಟ್ರ ತಂಡವನ್ನು ಮಣಿಸಿತು.

ಮೊದಲು ಬ್ಯಾಟ್ ಮಾಡಿದ ಕರ್ನಾಟಕ 20 ಓವರ್‌ಗಳಲ್ಲಿ 2 ವಿಕೆಟ್‌ಗೆ 215 ರನ್ ಪೇರಿಸಿದರೆ, ಮಹಾರಾಷ್ಟ್ರ ನಿಗದಿತ ಓವರ್‌ಗಳಲ್ಲಿ 8 ವಿಕೆಟ್‌ಗೆ 116 ರನ್ ಮಾತ್ರ ಪೇರಿಸಿತು.

ವಿದ್ವತ್ ಕಾವೇರಪ್ಪ (19ಕ್ಕೆ 3) ಮತ್ತು ವೈಶಾಖ್ ವಿಜಯಕುಮಾರ್ (20ಕ್ಕೆ2) ಅವರ ಬಿಗುವಾದ ಬೌಲಿಂಗ್ ಕಾರಣ ಮಹಾರಾಷ್ಟ್ರ ತಂಡ ಯಾವುದೇ ಪೈಪೋಟಿ ನೀಡದೆ ಶರಣಾಯಿತು.

ಪಡಿಕ್ಕಲ್ ಮಿಂಚು: ಕರ್ನಾಟಕ ತಂಡದ ನಾಯಕ ಮಯಂಕ್ ಅಗರವಾಲ್ (28 ರನ್, 17 ಎ.) ಬಿರುಸಿನ ಆರಂಭ ಪಡೆದರೂ, ಹೆಚ್ಚುಹೊತ್ತು ನಿಲ್ಲಲಿಲ್ಲ. ಆದರೆ ಪಡಿಕ್ಕಲ್ ಮತ್ತು ಮನೀಷ್ ಪಾಂಡೆ (50 ರನ್, 38 ಎ., 4X1, 6X4) ಉತ್ತಮ ಜತೆಯಾಟದ ಮೂಲಕ ತಂಡವನ್ನು ಬೃಹತ್ ಮೊತ್ತದತ್ತು ಮುನ್ನಡೆಸಿದರು.

ಎದುರಾಳಿ ಬೌಲಿಂಗ್ ದಾಳಿಯನ್ನು ಪುಡಿಗಟ್ಟಿದ ಪಡಿಕ್ಕಲ್ 14 ಬೌಂಡರಿ ಮತ್ತು 6 ಸಿಕ್ಸರ್ ಹೊಡೆದರು.

ಸಂಕ್ಷಿಪ್ತ ಸ್ಕೋರ್: ಕರ್ನಾಟಕ 20 ಓವರ್‌ಗಳಲ್ಲಿ 2 ವಿಕೆಟ್‌ಗೆ 215 (ದೇವದತ್ತ ಪಡಿಕ್ಕಲ್ ಔಟಾಗದೆ 124, ಮಯಂಕ್ ಅಗರವಾಲ್ 28, ಮನೀಷ್ ಪಾಂಡೆ 50, ಅಭಿನವ್ ಮನೋಹರ್ ಔಟಾಗದೆ 7; ಆಶಯ್ ಪಾಲ್ಕರ್ 24ಕ್ಕೆ 1, ರಾಮಕೃಷ್ಣ ಘೋಷ್ 58ಕ್ಕೆ 1)

ಮಹಾರಾಷ್ಟ್ರ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 116 (ದಿವ್ಯಾಂಗ್ ಹಿಂಗನೇಕರ್ 47, ಶಂಸುಜಮಾ ಖಾಜಿ ಔಟಾಗದೆ 28, ವಿದ್ವತ್ ಕಾವೇರಪ್ಪ 19ಕ್ಕೆ 3, ವೈಶಾಖ್ ವಿಜಯಕುಮಾರ್ 20ಕ್ಕೆ 2, ವಿ.ಕೌಶಿಕ್ 23ಕ್ಕೆ 1, ಕೆ.ಗೌತಮ್ 15ಕ್ಕೆ 1, ಶ್ರೇಯಸ್ ಗೋಪಾಲ್ 15ಕ್ಕೆ 1) ಫಲಿತಾಂಶ: ಕರ್ನಾಟಕಕ್ಕೆ 99 ರನ್ ಗೆಲುವು

ಹಾಕಿ: ಕರ್ನಾಟಕ ಚಾಂಪಿಯನ್

ಗಾಂಧಿನಗರ (ಪಿಟಿಐ): ಕರ್ನಾಟಕ ಪುರುಷರ ತಂಡದವರು ರಾಷ್ಟ್ರೀಯ ಕ್ರೀಡಾಕೂಟದ ಹಾಕಿ ಟೂರ್ನಿಯಲ್ಲಿ ಚಿನ್ನ ಗೆದ್ದುಕೊಂಡರು.

ಮಂಗಳವಾರ ನಡೆದ ಫೈನಲ್‌ನಲ್ಲಿ ಕರ್ನಾಟಕ ತಂಡ ಸಡನ್‌ಡೆತ್ ಟೈಬ್ರೇಕರ್‌ನಲ್ಲಿ ಉತ್ತರ ಪ್ರದೇಶ ತಂಡವನ್ನು ಮಣಿಸಿತು.

ನಿಗದಿತ ಅವಧಿಯಲ್ಲಿ ಉಭಯ ತಂಡಗಳು 2–2 ಗೋಲುಗಳ ಸಮಬಲ ಸಾಧಿಸಿದ್ದವು. ಪೆನಾಲ್ಟಿ ಶೂಟೌಟ್‌ನಲ್ಲಿ ಎರಡೂ ತಂಡಗಳು ತಲಾ ನಾಲ್ಕು ಗೋಲುಗಳನ್ನು ಗಳಿಸಿ ಮತ್ತೆ ಸಮಬಲದ ಹೋರಾಟ ನೀಡಿದವು. ಇದರಿಂದ ವಿಜೇತರನ್ನು ನಿರ್ಣಯಿಸಲು ಪೆನಾಲ್ಟಿ ಶೂಟೌಟ್ ಮೊರೆ ಹೋಗಲಾಯಿತು.

ಮಹಿಳೆಯರ ವಿಭಾಗದ ಚಿನ್ನದ ಪದಕ ಹರಿಯಾಣ ತಂಡ ತನ್ನಲ್ಲೇ ಉಳಿಸಿಕೊಂಡಿತು. ರಾಣಿ ರಾಂಪಾಲ್ ಅವರು ತಂದಿತ್ತ ಏಕೈಕ ಗೋಲಿನ ನೆರವಿನಿಂದ ಹರಿಯಾಣ ತಂಡ ಫೈನಲ್‌ನಲ್ಲಿ ಪಂಜಾಬ್ ವಿರುದ್ಧ ಗೆದ್ದಿತು.

ಅಗ್ರಸ್ಥಾನದಲ್ಲಿ ಸರ್ವಿಸಸ್: ರಾಷ್ಟ್ರೀಯ ಕ್ರೀಡಾಕೂಟಕ್ಕೆ ಬುಧವಾರ ತೆರೆಬೀಳಲಿದ್ದು, ಸರ್ವಿಸಸ್ ತಂಡದವರು ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಮಂಗಳವಾರ ಮತ್ತೆ ಮೂರು ಚಿನ್ನ ಗೆದ್ದುಕೊಂಡ ಸರ್ವಿಸಸ್ ಒಟ್ಟು ಪದಕಗಳ ಸಂಖ್ಯೆಯನ್ನು 120ಕ್ಕೆ ಹೆಚ್ಚಿಸಿಕೊಂಡಿತು. ಇದರಲ್ಲಿ 56 ಚಿನ್ನ, 34 ಬೆಳ್ಳಿ ಹಾಗೂ 30 ಕಂಚು ಸೇರಿವೆ.

ಅಥ್ಲೆಟಿಕ್ಸ್: ರಾಜ್ಯ ತಂಡದಲ್ಲಿ ಅಭಿನ್

ಬೆಂಗಳೂರು: ಇಲ್ಲಿಯ ಕಂಠೀರವ ಕ್ರೀಡಾಂಗಣದಲ್ಲಿ ಇದೇ 15ರಿಂದ ನಡೆಯಲಿರುವ ರಾಷ್ಟ್ರೀಯ ಓಪನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ತಂಡಗಳನ್ನು ಪ್ರಕಟಿಸಲಾಗಿದೆ. ಅಭಿನ್ ದೇವಾಡಿಗ ತಂಡ ಮುನ್ನಡೆಸಲಿದ್ದಾರೆ.

ತಂಡಗಳು: ಪುರುಷರು: ಶಶಿಕಾಂತ್. ವಿ.ಎ., ಶ್ರೇಯಸ್.ಎಸ್., ವಿಶಾಲ್, ಗೌರಿಶಂಕರ್.ವಿ., ಅಭಿನ್ ದೇವಾಡಿಗ, ಜೀವನ್.ಕೆ.ಎಸ್., ಮಹಾಂತೇಶ.ಎಸ್. ಎಚ್, ನಿಹಾಲ್ ಜೋಯಲ್ ಡಬ್ಲ್ಯು, ಆಕಾಶ ಎಸ್. ಗೊಲ್ಲರ್, ಮಿಲನ್ ಎಂ.ಸಿ., ಸಾಗರ್ ಆರ್, ಅದ್ವಿತ್ ಡಿ. ಶೆಟ್ಟಿ, ಶ್ರೀಕಾಂತ್ ಎಂಸಿಪಿ, ಶರತ್ ಶೆಟ್ಟಿ, ರಕ್ಷಿತ್, ಯಶಸ್, ರಾಂಪಾಲ್, ಪರಶುರಾಮ್ ರಮೇಶ್ ಜಿ, ರಾಹುಲ್, ಹರ್ಷಿತ್, ಆರ್ಯನ್.ಎಸ್, ಪುರುಷೋತ್ತಮ್, ನವೀನ್.ಬಿ, ರಾಹುಲ್ ಕಶ್ಯಪ್ ಎಸ್. ಆರ್, ಮಾನುಷ್ ಬಿ, ಮುಹಮ್ಮದ್ ಎಸ್.ಎ, ಸಂಜೀವ್ ಬಿ.ಕೆ, ಸುಧೀರ್, ವಿಕ್ರಾಂತ್ ಎಂ, ಲೋಕೇಶ್ ರಾಥೋಡ್, ಸಂದೇಶ್ ಶೆಟ್ಟಿ, ನರಸಿಂಗ್ ಪಟೇಲ್.

ಮಹಿಳೆಯರು: ಸ್ನೇಹಾ ಎಸ್.ಎಸ್, ನವಮಿ ಎಚ್. ಆರ್, ಸಿಮಿ ಎನ್. ಎಸ್, ಜ್ಯೋತಿಕಾ, ಸ್ನೇಹಾ ಪಿ.ಜೆ, ಲಿಖಿತಾ ಎಂ, ಇಂಚರ ಎನ್.ಎಸ್, ವಿಜಯಕುಮಾರಿ ಜಿ.ಕೆ, ಸಹನಾ ಎಚ್.ಎಂ, ಅರ್ಪಿತಾ ಇ.ಬಿ, ಉಷಾ ಆರ್, ಚೈತ್ರಾ ದೇವಾಡಿಗ, ರಾಶಿ, ಮೇಧಾ ಕಾಮತ್, ಸಿಂಚಲ್ ಕಾವೇರಮ್ಮ, ಪ್ರಜ್ಞಾ ಕೆ, ಸ್ಮಿತಾ ಡಿ.ಆರ್, ವಂದನಾ, ಕೆ.ಎಂ.ಲಕ್ಷ್ಮಿ, ಸಿಂಚನಾ, ಸಿಂಧುಶ್ರೀ ಜಿ, ಶ್ರೀದೇವಿಕಾ ವಿ.ಎಸ್, ಪವಿತ್ರಾ ಜಿ, ಅಂಬಿಕಾ ವಿ, ಕಲಾವತಿ ಬಿ.ಟಿ, ಸುಷ್ಮಾ, ಅಮ್ರೀನ್, ಕರೀಷ್ಮಾ ಸನಿಲ್. ಮ್ಯಾನೇಜರ್ ಮತ್ತು ಕೋಚ್: ಎಂ.ಕೆ. ಆಶಾ

ರಾಷ್ಟ್ರಮಟ್ಟದ ಕಬಡ್ಡಿ ಟೂರ್ನಿ ಇಂದಿನಿಂದ

ಗದಗ: ನರಗುಂದ ಪಟ್ಟಣದಲ್ಲಿ ಅ.12ರಿಂದ 14ರವರೆಗೆ ಅಖಿಲ ಭಾರತ ‘ಎ’ ಗ್ರೇಡ್ ಪುರುಷ ಹಾಗೂ ಮಹಿಳೆಯರ ಆಹ್ವಾನಿತ ತಂಡಗಳ ರಾಷ್ಟ್ರಮಟ್ಟದ ಕಬಡ್ಡಿ ಟೂರ್ನಿ ಆಯೋಜಿಸಲಾಗಿದೆ.

ಪುರುಷರ ವಿಭಾಗದಲ್ಲಿ ಕರ್ನಾಟಕದ 16 ತಂಡಗಳು ಅಲ್ಲದೆ ಗುಜರಾತ್, ಹರಿಯಾಣ, ದೆಹಲಿ, ಹಿಮಾಚಲ ಪ್ರದೇಶ, ತಮಿಳುನಾಡು, ಮಹಾರಾಷ್ಟ್ರ ಮತ್ತು ಉತ್ತರಪ್ರದೇಶ ರಾಜ್ಯಗಳ ತಂಡಗಳೂ ಸೇರಿದಂತೆ ಒಟ್ಟು 35 ತಂಡಗಳು ಭಾಗವಹಿಸಲಿವೆ.

ಮಹಿಳಾ ವಿಭಾಗದಲ್ಲಿ ಕರ್ನಾಟಕ, ಗುಜರಾತ್, ಹರಿಯಾಣ, ಹಿಮಾಚಲ ಪ್ರದೇಶ, ಉತ್ತರ ಪ್ರದೇಶ, ಮಹಾರಾಷ್ಟ್ರ, ತಮಿಳುನಾಡಿನ ತಂಡಗಳು ಹಾಗೂ ರೈಲ್ವೆ ಸೇರಿದಂತೆ ಒಟ್ಟು 30 ತಂಡಗಳು ಪೈಪೋಟಿ ನಡೆಸಲಿವೆ.

ಪುರುಷರ ವಿಭಾಗದಲ್ಲಿ ಚಾಂಪಿಯನ್ ಆಗುವ ತಂಡಕ್ಕೆ ₹2.50 ಲಕ್ಷ ನಗದು ಬಹುಮಾನ ಹಾಗೂ ಟ್ರೋಫಿ ಲಭಿಸಲಿದೆ. ಪುರುಷರ ವಿಭಾಗದಲ್ಲಿ ಒಟ್ಟು ₹7.50 ಲಕ್ಷ ಮೊತ್ತ ಹಾಗೂ ಮಹಿಳೆಯರ ವಿಭಾಗದಲ್ಲಿ ₹ 5.50 ಲಕ್ಷ ನಗದು ಬಹುಮಾನ ಇರಲಿದೆ.

ನರಗುಂದದ ತಾಲ್ಲೂಕು ಕ್ರೀಡಾಂಗಣದಲ್ಲಿ 4 ಅಂಕಣಗಳನ್ನು ಸಿದ್ಧಪಡಿಸಲಾಗಿದೆ. ಈ ಟೂರ್ನಿಯಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ರೆಫರಿಗಳು ನಿರ್ಣಾಯಕರಾಗಿ ಪಾಲ್ಗೊಳ್ಳುತ್ತಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ಭಾರತ ಮತ್ತು ಅಮೆರಿಕ ತಂಡದ ಆಟಗಾರ್ತಿಯರ ಪೈಪೋಟಿ –ಪಿಟಿಐ ಚಿತ್ರ

ಫಿಫಾ ವಿಶ್ವಕಪ್: ಭಾರತಕ್ಕೆ ನಿರಾಸೆ

ಭುವನೇಶ್ವರ (ಪಿಟಿಐ): ಭಾರತ ತಂಡದವರು ಫಿಫಾ 17 ವರ್ಷದೊಳಗಿನವರ ಮಹಿಳಾ ವಿಶ್ವಕಪ್ ಟೂರ್ನಿಯಲ್ಲಿ ಅಮೆರಿಕ ಎದುರು 0–8 ಗೋಲುಗಳಿಂದ ಮುಖಭಂಗ ಅನುಭವಿಸಿದರು.

ಕಳಿಂಗ ಕ್ರೀಡಾಂಗಣದಲ್ಲಿ ನಡೆದ ‘ಎ’ ಗುಂಪಿನ ಪಂದ್ಯದಲ್ಲಿ ಭಾರತ ತಂಡ ಪ್ರಬಲ ಎದುರಾಳಿಗಳಿಗೆ ತಕ್ಕ ಪೈಪೋಟಿ ನೀಡಲು ವಿಫಲವಾಯಿತು.

ಬ್ರೆಜಿಲ್ ಶುಭಾರಂಭ: ದಿನದ ಮೊದಲ ಪಂದ್ಯದಲ್ಲಿ ಬ್ರೆಜಿಲ್ 1–0 ಗೋಲಿನಿಂದ ಮೊರೊಕ್ಕೊ ತಂಡವನ್ನು ಮಣಿಸಿತು. ಜಾನ್ಸನ್ ಅವರು ಪಂದ್ಯದ ಐದನೇ ನಿಮಿಷದಲ್ಲಿ ಗೆಲುವಿನ ಗೋಲು ತಂದಿತ್ತರು. ಬ್ರೆಜಿಲ್ ತಂಡಕ್ಕೆ ಗೋಲು ಗಳಿಸುವ ಹಲವು ಉತ್ತಮ ಅವಕಾಶಗಳು ಲಭಿಸಿತಾದರೂ, ಹೊಂದಾಣಿಕೆಯ ಕೊರತೆ ಎದ್ದುಕಂಡಿತು.

ಗೋವಾದಲ್ಲಿ ನಡೆದ ‘ಬಿ’ ಗುಂಪಿನ ಪಂದ್ಯದಲ್ಲಿ ಚಿಲಿ ತಂಡವು 3–1 ರಲ್ಲಿ ನ್ಯೂಜಿಲೆಂಡ್ ತಂಡವನ್ನು ಪರಾಭವಗೊಳಿಸಿತು.

ಕಬಡ್ಡಿ: ಸ್ಟೀಲರ್ಸ್, ಟೈಟನ್ಸ್‌ಗೆ ಜಯ

ಪ್ರಜಾವಾಣಿ ವಾರ್ತೆ



ಹರಿಯಾಣ ಸ್ಟೀಲರ್ಸ್ ತಂಡದವರು ತಮಿಳು ತಲೈವಾಸ್ ತಂಡದ ಆಟಗಾರನನ್ನು ಹಿಡಿತಕ್ಕೆ ಪಡೆದ ಕ್ಷಣ –ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

ಬೆಂಗಳೂರು: ಸೊಗಸಾದ ಆಟವಾಡಿದ ಹರಿಯಾಣ ಸ್ಟೀಲರ್ಸ್ ಮತ್ತು ತೆಲುಗು ಟೈಟನ್ಸ್ ತಂಡಗಳು ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ಗೆಲುವು ಪಡೆದವು.

ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಮೊದಲ ಪಂದ್ಯದಲ್ಲಿ ಟೈಟನ್ಸ್ 30–21 ರಲ್ಲಿ ಪಟ್ನಾ ಪೈರೇಟ್ಸ್ ತಂಡವನ್ನು ಮಣಿಸಿತು.

ಆರಂಭದಿಂದಲೇ ಚುರುಕಿನ ರೇಡಿಂಗ್ ಮೂಲಕ ಪಾಯಿಂಟ್ ಕಲೆಹಾಕಿದ ಟೈಟನ್ಸ್ ವಿರಾಮದ ವೇಳೆಗೆ 21–13 ರಲ್ಲಿ ಮುನ್ನಡೆ ಸಾಧಿಸಿತ್ತು. ವಿಜೇತ ತಂಡ ರೇಡಿಂಗ್‌ನಲ್ಲಿ 17 ಪಾಯಿಂಟ್ಸ್ ಗಳಿಸಿತು.

10 ಪಾಯಿಂಟ್ ಗಿಟ್ಟಿಸಿದ ಮೋನು ಗೋಯತ್ ಮತ್ತು ಏಳು ಪಾಯಿಂಟ್ಸ್ ತಂದಿತ್ತ ಸಿದ್ದಾರ್ಥ್ ದೇಸಾಯಿ ಅವರು ತಂಡದ ಗಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು.

ದಿನದ ಎರಡನೇ ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ 27–22 ರಲ್ಲಿ ತಮಿಳು ತಲೈವಾಸ್ ವಿರುದ್ಧ ಗೆಲುವು ಸಾಧಿಸಿತು.

ವಿರಾಮದ ವೇಳೆಗೆ ವಿಜಯಿ ತಂಡ 15–10 ರಲ್ಲಿ ಮೇಲುಗೈ ಸಾಧಿಸಿತ್ತು. ಈ ತಂಡದ ರೇಡರ್ ಮಂಜೀತ್ ಎಂಟು ಹಾಗೂ ಜೈದೀಪ್ ಐದು ಪಾಯಿಂಟ್ಸ್ ಸಂಗ್ರಹಿಸಿದರು.

ದ್ವಿತೀಯಾರ್ಧದಲ್ಲಿ ಮರು ಹೋರಾಟ ನಡೆಸಿದರೂ ತಮಿಳು ತಲೈವಾಸ್‌ಗೆ ಗೆಲುವು ದಕ್ಕಲಿಲ್ಲ. ಈ ತಂಡದ ಸಾಗರ್ ಐದು ಪಾಯಿಂಟ್ಸ್ ಕಲೆಹಾಕಿದರು.

ಇಂದಿನ ಪಂದ್ಯಗಳು

ಬೆಂಗಳೂರು ಬುಲ್ಸ್– ಬೆಂಗಾಲ್ ವಾರಿಯರ್ಸ್ (ರಾತ್ರಿ 7.30)

ಯು.ಪಿ. ಯೋಧಾಸ್– ದಬಂಗ್ ಡೆಲ್ಲಿ (ರಾತ್ರಿ 8.30)

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್ ಮತ್ತು ಹಾಟ್‌ಸ್ಟಾರ್ ಆ್ಯಪ್

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಡೆಲ್ಲಿ	2	2	0	0	10
ಹರಿಯಾಣ	2	2	0	0	10
ಬೆಂಗಳೂರು	2	2	0	0	10
ಜೈಪುರ	2	1	1	0	6
ಯು.ಪಿ	2	1	1	0	6
ಟೈಟನ್ಸ್	3	1	2	0	6

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಎಚ್ಚರಿಕೆ

ಅಣ್ವಸ್ತ್ರ ತಾಲೀಮಿಗೆ ನ್ಯಾಟೊ ಸಜ್ಜು

ಬ್ರಸೆಲ್ಸ್ (ಎಪಿ): ರಷ್ಯಾದ ಭೂಪ್ರದೇಶ ರಕ್ಷಿಸಲು ಲಭ್ಯವಿರುವ ಎಲ್ಲ ವಿಧಾನಗಳನ್ನು ಬಳಸುವುದಾಗಿ ಅಧ್ಯಕ್ಷ ಪುಟಿನ್ ಎಚ್ಚರಿಕೆ ನೀಡಿದ ಬೆನ್ನಲ್ಲೇ, ‘ಉಕ್ರೇನ್‌ನಲ್ಲಿ ಯುದ್ಧದ ಉದ್ವಿಗ್ನತೆ ತಗ್ಗಿಸಲು ಪೂರ್ವಯೋಜಿತ ಅಣ್ವಸ್ತ್ರ ತಾಲೀಮು ಮುಂದಿನ ವಾರ ಆರಂಭವಾಗಲಿದೆ’ ಎಂದು ನ್ಯಾಟೊ ಪ್ರಧಾನ ಕಾರ್ಯದರ್ಶಿ ಜೆನ್ಸ್ ಸ್ಟೋಲ್ಟೆನ್ ಬರ್ಗ್ ಹೇಳಿದ್ದಾರೆ.

ನ್ಯಾಟೊ ರಕ್ಷಣಾ ಸಚಿವರ ಸಭೆಯ ಮುನ್ನಾದಿನ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮಿತ್ರರಾಷ್ಟ್ರಗಳ ರಕ್ಷಣೆಯ ನಮ್ಮ ಬದ್ಧತೆಯನ್ನು ರಷ್ಯಾ ತಪ್ಪಾಗಿ ಗ್ರಹಿಸಿದರೆ ಉದ್ವಿಗ್ನತೆಯ ಅಪಾಯವನ್ನು ನಾವು ಇನ್ನಷ್ಟು ಹೆಚ್ಚಿಸುತ್ತೇವೆ. ಯುದ್ಧದ ತೀವ್ರತೆ ತಗ್ಗಿಸಲು ಸೇನಾ ಶಕ್ತಿಯ ಪ್ರದರ್ಶನ ಅನಿವಾರ್ಯ’ ಎಂದು ಎಚ್ಚರಿಸಿದರು.

‘ರಷ್ಯಾದ ಅಣ್ವಸ್ತ್ರಗಳ ಸಾಮರ್ಥ್ಯ ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ. ರಷ್ಯಾದ ನಿಲುವಿನಲ್ಲಿ ಯಾವುದೇ ಬದಲಾವಣೆ ಕಾಣಿಸುತ್ತಿಲ್ಲ. ಯಾವುದೇ ರೀತಿ ಅಣ್ವಸ್ತ್ರ ಬಳಕೆಯಾದರೆ ತೀವ್ರ ಪರಿಣಾಮ ಎದುರಿಸಬೇಕಾಗುತ್ತದೆ ಎಂದರು.

ನ್ಯಾಟೊ ರಕ್ಷಣಾ ಸಚಿವರೊಂದಿಗೆ ಗುರುವಾರ ಮೈತ್ರಿಕೂಟದ ರಹಸ್ಯ ಅಣ್ವಸ್ತ್ರ ಯೋಜನಾ ಗುಂಪು ಮಹತ್ವದ ಸಭೆ ನಡೆಸಲಿದೆ. ವಾರ್ಷಿಕ ಒಂದು ವಾರ ನಡೆಯುವ ‘ಸ್ಟೆಡ್‌ಫಾಸ್ಟ್ ನೂನ್’ ಅಣ್ವಸ್ತ್ರ ತಾಲೀಮಿನಲ್ಲಿ ನ್ಯಾಟೊದ 30 ಸದಸ್ಯ ರಾಷ್ಟ್ರಗಳ ಪೈಕಿ 14 ರಾಷ್ಟ್ರಗಳು ಭಾಗವಹಿಸಲಿವೆ.

‘ರಷ್ಯಾದ ಗಡಿಯಿಂದ ಒಂದು ಸಾವಿರ ಕಿ.ಮೀ. ದೂರದಲ್ಲಿ ತಾಲೀಮು ನಡೆಯುತ್ತಿದೆ. ಅಣ್ವಸ್ತ್ರ ಸಿಡಿತಲೆಗಳನ್ನು ಸಾಗಿಸುವ ಸಾಮರ್ಥ್ಯದ ಯುದ್ಧ ವಿಮಾನಗಳು ಭಾಗವಹಿಸಲಿವೆ. ಆದರೆ, ಈ ವಿಮಾನಗಳು ಯಾವುದೇ ಸಜೀವ ಬಾಂಬ್‌ಗಳನ್ನು ಒಳಗೊಂಡಿರುವುದಿಲ್ಲ’ ಎಂದು ಜೆನ್ಸ್ ಸ್ಟೋಲ್ಟೆನ್ ಬರ್ಗ್ ಹೇಳಿದ್ದಾರೆ.

ಗೋಪ್ಯ ಮತದಾನ ಬೇಡಿಕೆ ವಿರುದ್ಧ ಭಾರತ ಮತ: ಉಕ್ರೇನ್‌ನ 4 ಪ್ರಾಂತ್ಯಗಳ ಸ್ವಾಧೀನ ಸಂಬಂಧ ವಿಶ್ವಸಂಸ್ಥೆ ಭದ್ರತಾ ಮಂಡಳಿಯಲ್ಲಿ ಕರಡು ನಿರ್ಣಯಕ್ಕೆ ಗೋಪ್ಯ ಮತದಾನ ರಷ್ಯಾ ಬೇಡಿಕೆ. ಇದನ್ನು ತಿರಸ್ಕರಿಸುವ ನಿರ್ಣಯದ ಪರವಾಗಿ ಭಾರತ ಮತ ಚಲಾಯಿಸಿದೆ. ರಷ್ಯಾ ಪರ 13 ರಾಷ್ಟ್ರಗಳು ಮಾತ್ರ ಮತ ಚಲಾಯಿಸಿವೆ.

ಪ್ರಮುಖಾಂಶಗಳು

- ಕೀವ್, ಲುವಿವ್, ಝುಪೊರಿಝಿಯಾ ನಗರಗಳ ಮೇಲೆ ಮುಂದುವರಿದ ದಾಳಿ, 24 ತಾಸುಗಳಲ್ಲಿ 19 ಜನರ ಸಾವು
- ರಷ್ಯಾ ವಶದಲ್ಲಿದ್ದ ಉಕ್ರೇನ್‌ನ 62 ಯೋಧರ ಶವಗಳನ್ನು ಸೇನಾಧಿಕಾರಿಗಳ ಮಟ್ಟದ ಮಾತುಕತೆ ಬಳಿಕ ಉಕ್ರೇನ್ ಹಸ್ತಾಂತರ
- ಉಕ್ರೇನ್‌ನ ಹಲವು ನಗರಗಳ ಈಚೆಗೆ ನಡೆದ ದಾಳಿಗೆ ಜಿ7 ರಾಷ್ಟ್ರಗಳ ಖಂಡನೆ. ದಾಳಿಗೆ ಪುಟಿನ್ ನೇರ ಹೊಣೆ ಎಂದು ಹೇಳಿಕೆ.

‘ಚೀನಾ ಜೊತೆಗೆ ಎರಡೂವರೆ ವರ್ಷ ಸಂಕಷ್ಟದ ಬಾಂಧವ್ಯ’

ಸಿಡ್ನಿ (ಪಿಟಿಐ): ‘ಭಾರತವು ಚೀನಾದ ಜೊತೆಗೆ ಎರಡೂವರೆ ವರ್ಷ ‘ತುಂಬಾ ಸಂಕಷ್ಟ’ದ ಬಾಂಧವ್ಯ ಹೊಂದಿತ್ತು. ಈ ಅವಧಿಯಲ್ಲಿ 40 ವರ್ಷದ ಇತಿಹಾಸದಲ್ಲಿಯೇ ಗಡಿಯಲ್ಲಿ ಸಾವುಗಳು ಸಂಭವಿಸಿದ್ದು, 20 ಸೈನಿಕರನ್ನು ಕಳೆದುಕೊಳ್ಳಬೇಕಾಯಿತು’ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಹೇಳಿದ್ದಾರೆ.

ಇಲ್ಲಿನ ಲೋವಿ ಇನ್‌ಸ್ಟಿಟ್ಯೂಟ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಆದರೂ, ಭಾರತ ಮಾತುಕತೆಯ ಮಾರ್ಗವನ್ನು ಎಂದಿಗೂ ಮುಕ್ತವಾಗಿ ಇರಿಸಿತ್ತು. ನೆರೆಯವರ ಜೊತೆಗೆ ಪರಸ್ಪರ ವ್ಯವಹಾರ ಇರಬೇಕು ಎಂಬುದೇ ಇದಕ್ಕೆ ಕಾರಣ’ ಎಂದು ಹೇಳಿದರು.

ಕ್ವಾಡ್ ಸದಸ್ಯ ರಾಷ್ಟ್ರಗಳಾಗಿ ಭಾರತ –ಆಸ್ಟ್ರೇಲಿಯಾ ನಡುವಣ ಬಾಂಧವ್ಯ ವೃದ್ಧಿ ಕುರಿತ ಪ್ರಶ್ನೆಗೆ ಉತ್ತರಿಸಿ ಈ ಮಾತು ಹೇಳಿದರು. ‘ಮಾತುಕತೆ ಯತ್ನ ನಿರಂತರವಾಗಿತ್ತು. ಘಟನೆಯ ಮಾರನೇ ದಿನವೂ ಚೀನಾದ ವಾಂಗ್ ಯಿ ಅವರಿಗೆ ಕರೆ ಮಾಡಿ, ಚೀನಾ ಕಡೆಯಿಂದ ಅತಿಕ್ರಮಣ ಯತ್ನ ನಡೆಯದಂತೆ ಕ್ರಮವಹಿಸಲು ಆಗ್ರಹಿಸಿದ್ದೆ’ ಎಂದರು.

‘ರಾಜತಾಂತ್ರಿಕತೆಯು ಸಂವಹನವನ್ನು ಆಧರಿಸಿದೆ. ಚೀನಾ ಜೊತೆಗೆ ಎಂದಲ್ಲ, ಯಾವುದೇ ರಾಷ್ಟ್ರದ ಜೊತೆಗೂ ಚರ್ಚೆಯೇ ನಡೆಯದಿದ್ದರೆ ಯಾವ ರೀತಿ ಬಾಂಧವ್ಯ ಮೂಡಲು ಸಾಧ್ಯ? ಅಂತಿಮವಾಗಿ ರಾಷ್ಟ್ರಗಳು ಪರಸ್ಪರ ಜೊತೆಗೆ ವಹಿವಾಟು ನಡಸಲೇಬೇಕು’ ಎಂದು ಅವರು ಪ್ರತಿಪಾದಿಸಿದರು.

ಆಸ್ಟ್ರೇಲಿಯಾ ಸೇನೆ ಜತೆಗೆ ಚರ್ಚೆ: ಎರಡು ದಿನದ ಪ್ರವಾಸಕ್ಕೆ ಆಗಮಿಸಿರುವ ಜೈಶಂಕರ್ ಅವರು, ಆಸ್ಟ್ರೇಲಿಯಾದ ಸೇನಾ ಪಡೆಗಳ ಜೊತೆಗೂ ಚರ್ಚಿಸಿದರು. ಇಂಡೊ ಪೆಸಿಫಿಕ್ ವಲಯವನ್ನು ಮುಕ್ತವಾಗಿರಿಸಲು ಉಭಯ ದೇಶಗಳ ನಡುವಿನ ರಕ್ಷಣಾ ಮತ್ತು ಭದ್ರತೆ ಕುರಿತು ಒಡಂಬಡಿಕೆಯೂ ಗಣನೀಯ ಕೊಡುಗೆ ನೀಡಿದೆ ಎಂದು ತಿಳಿಸಿದರು.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಸುಧಾರಣೆಗಳು ಆಗದಿದ್ದರೆ ವಿಶ್ವಸಂಸ್ಥೆಯೇ ಅಪ್ರಸ್ತುತವೆನಿಸಿಕೊಳ್ಳಲಿದೆ ಎಂದು ಎಸ್. ಜೈಶಂಕರ್ ಹೇಳಿದರು.

ಸಂಕ್ಷಿಪ್ತ ಸುದ್ದಿ

ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಮಲಾಲಾ ಪ್ರವಾಸ

ಕರಾಚಿ (ಪಿಟಿಐ): ನೊಬೆಲ್ ಪ್ರಶಸ್ತಿ ಪುರಸ್ಕೃತೆ ಮಲಾಲಾ ಯೂಸುಫ್ ಜಾಯ್ ಅವರು ಮಂಗಳವಾರ ಪಾಕಿಸ್ತಾನಕ್ಕೆ ಭೇಟಿ ನೀಡಿದ್ದಾರೆ. ನಾಲ್ಕು ವರ್ಷಗಳ ನಂತರ ಅವರು ತವರು ರಾಷ್ಟ್ರಕ್ಕೆ ಭೇಟಿ ನೀಡಿದಂತಾಗಿದೆ.

ಪಾಕ್‌ನ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಪ್ರವಾಸ ಮಾಡಿ, ಅವರು ಸಂತ್ರಸ್ತರಿಗೆ ಸಾಂತ್ವನ ಹೇಳಲಿದ್ದಾರೆ.

ನ್ಯೂಜೆರ್ಸಿಯಲ್ಲಿ ಗಾಂಧಿ ಸಂಗ್ರಹಾಲಯ ಉದ್ಘಾಟನೆ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ನ್ಯೂಜೆರ್ಸಿಯ ಅಂಟ್ಲಾಟಿಕಾ ನಗರದಲ್ಲಿ ಮಹಾತ್ಮಗಾಂಧಿ ಅವರ ಜೀವನ, ಸಂದೇಶ ಬಿತ್ತರಿಸುವ ಉದ್ದೇಶದಿಂದ ಸಂಗ್ರಹಾಲಯ ಸ್ಥಾಪಿಸಲಾಗಿದೆ. ಡಿಜಿಟಲ್ ಪರದೆಯನ್ನೂ ಹೊಂದಿರುವ ಈ ಸಂಗ್ರಹಾಲಯದಲ್ಲಿ ವೀಕ್ಷಕರು ಗಾಂಧಿ ಜೀವನ, ಸಾಧನೆಗಳನ್ನು ದೃಶ್ಯರೂಪದಲ್ಲಿ ವೀಕ್ಷಿಸಬಹುದಾಗಿದೆ.

ನ್ಯೂಯಾರ್ಕ್‌ನಲ್ಲಿನ ಭಾರತದ ಕೌನ್ಸುಲ್ ಜನರಲ್ ರಣದೀರ್ ಜೈಸ್ವಾಲ್ ಉದ್ಘಾಟಿಸಿದರು. ನ್ಯೂಜೆರ್ಸಿ ಮೂಲದ ಗಾಂಧಿ ಸೊಸೈಟಿಯು ಆದಿತ್ಯ ಬಿರ್ಲಾ ಸಮೂಹದ ಸಹಯೋಗದಲ್ಲಿ ಈ ಸಂಗ್ರಹಾಲಯವನ್ನು ಸ್ಥಾಪಿಸಿದೆ.

ಗ್ವಾಟೆಮಾಲಾ: ಮಳೆ ಪ್ರವಾಹ, 19 ಸಾವು

ಗ್ವಾಟೆಮಾಲಾ (ಎಪಿ): ‘ಜೂಲಿಯಾ’ ಚಂಡಮಾರುತದ ಪರಿಣಾಮ ಅಮೆರಿಕದ ಗ್ವಾಟೆಮಾಲಾ, ಎಲ್. ಸಾಲ್ವಡಾರ್‌ಗಳಲ್ಲಿ ಧಾರಾಕಾರ ಮಳೆ, ಪ್ರವಾಹ ಪರಿಸ್ಥಿತಿ ತಲೆದೋರಿದೆ. ಈ ಸಂಬಂಧಿತ ಅವಘಡಗಳಲ್ಲಿ 19 ಜನರು ಮೃತಪಟ್ಟಿದ್ದಾರೆ.

ವಿಡಿಯೊ ಗೇಮ್ಸ್‌ಗಳಿಂದ ಅಪಾಯ: ಅಧ್ಯಯನ

‘ಮಕ್ಕಳಲ್ಲಿ ಹೃದಯ ಸಂಬಂಧಿ ಸಮಸ್ಯೆ’

ಮೆಲ್ಬೋರ್ನ್ (ಪಿಟಿಐ): ‘ವಿಡಿಯೊ ಗೇಮ್ಸ್‌ಗಳಿಂದ ಮಕ್ಕಳಲ್ಲಿ ಗಂಭೀರ ಸ್ವರೂಪದ ಹೃದಯ ಸಂಬಂಧಿ ಸಮಸ್ಯೆಗಳು ಕಾಣಿಸಿಕೊಳ್ಳಬಹುದು’ ಎಂದು ಈಚೆಗೆ ನಡೆದಿರುವ ಅಧ್ಯಯನ ವರದಿಯೊಂದು ಎಚ್ಚರಿಸಿದೆ.

‘ಹಾರ್ಟ್ ರೈಮ್’ ನಿಯತಕಾಲಿಕದಲ್ಲಿ ಈಚೆಗೆ ಈ ಅಧ್ಯಯನ ವರದಿಯು ಪ್ರಕಟವಾಗಿದೆ. ಮಕ್ಕಳಲ್ಲಿನ ಹೃದಯಬಡಿತ ಕ್ರಮದಲ್ಲಿ ಏರುಪೇರಾಗಬಹುದು ಹಾಗೂ ವಿಡಿಯೊ ಗೇಮ್ಸ್ ಆಡುವಾಗಲೇ ಪ್ರಜ್ಞೆ ಕಳೆದುಕೊಳ್ಳುವ ಸಂದರ್ಭಗಳು ತಲೆದೋರಬಹುದು ಎಂದು ವರದಿ ತಿಳಿಸಿದೆ.

‘ವಿಡಿಯೊ ಗೇಮ್ಸ್‌ಗಳು ಮಕ್ಕಳನ್ನು ಅಸಹಜ ಸ್ಥಿತಿಗೆ ಒಯ್ಯಲಿವೆ. ಆದರೆ, ಹೃದಯಸಂಬಂಧಿ ಸಮಸ್ಯೆಗಳ ಲಕ್ಷಣಗಳು ಮುಂದಾಗಿಯೇ ಗೋಚರಿಸದಿರಬಹುದು’ ಎಂದು ಅಧ್ಯಯನ ತಂಡದ ನೇತೃತ್ವವನ್ನು ವಹಿಸಿದ್ದ ಆಸ್ಟ್ರೇಲಿಯದ ದ ಹಾರ್ಟ್ ಸೆಂಟರ್‌ನ ಕ್ಲೇರ್ ಎಂ.ಲಾಲಿ ಅವರು ಅಭಿಪ್ರಾಯಪಡುತ್ತಾರೆ.

ಎಲೆಕ್ಟ್ರಾನಿಕ್ ಪರಿಕರಗಳ ಜೊತೆಗೆ ಆಟವಾಡುವಾಗ ಮಕ್ಕಳು ಹಠಾತ್ತನೇ ಪ್ರಜ್ಞೆ ಕಳೆದುಕೊಳ್ಳಬಹುದು. ಇಂಥ ಲಕ್ಷಣಗಳು ಭವಿಷ್ಯದಲ್ಲಿ ಅವರಿಗೆ ಗಂಭೀರ ಸಮಸ್ಯೆ ತಂದೊಡ್ಡಬಹುದು. ಹೀಗಾಗಿ, ಹೃದ್ರೋಗ ತಜ್ಞರ ತಪಾಸಣೆಗೆ ಒಳಪಡಿಸುವುದು ಉತ್ತಮ ಎಂದೂ ಸಲಹೆ ಮಾಡುತ್ತಾರೆ.

ಮಕ್ಕಳು ಹಠಾತ್ತನೇ ಪ್ರಜ್ಞೆ ಕಳೆದುಕೊಂಡಿರುವ ವಿವಿಧ ಪ್ರಕರಣಗಳ ಅಧ್ಯಯನದ ಜೊತೆಗೆ ಪೂರಕವಾದ ಸಂಶೋಧನಾ ಲೇಖನಗಳನ್ನು ಅಧ್ಯಯನ ತಂಡ ಪರಾಮರ್ಶೆ ಮಾಡಿದೆ. 22 ಪ್ರಕರಣಗಳನ್ನು ಗಮನಿಸಿದ್ದು, ಹೆಚ್ಚಿನ ಪ್ರಕರಣಗಳಲ್ಲಿ ಸಮಸ್ಯೆಗೆ ಮೂಲ ಕಾರಣವೇ ವಿಡಿಯೊ ಗೇಮ್ಸ್ ಎಂಬುದು ದೃಢಪಟ್ಟಿದೆ ಎಂದು ಹೇಳಿದ್ದಾರೆ.

ಎಲೆಕ್ಟ್ರಾನಿಕ್ ಗೇಮ್ಸ್‌ನಿಂದಾಗುವ ಪ್ರತಿಕೂಲ ಪರಿಣಾಮಗಳ ಕುರಿತು ಕುಟುಂಬಗಳು ಮತ್ತು ಆರೋಗ್ಯ ಕ್ಷೇತ್ರದ ಪ್ರಮುಖರು ಚಿಂತನೆ ನಡೆಸುವುದು ಅಗತ್ಯ. ಮಕ್ಕಳು ಗೇಮ್ಸ್ ಜೊತೆಗೆ ಭಾವನಾತ್ಮಕವಾಗಿ ಬೆಸೆಯುವುದರಿಂದ ಅದರ ಪರಿಣಾಮ ನರವ್ಯವಸ್ಥೆಯ ಮೇಲೂ ಆಗಲಿದೆ ಎಂದು ವಿಶ್ಲೇಷಿಸಿದ್ದಾರೆ.

ವಿಡಿಯೊ ಗೇಮ್ಸ್‌ಗಳು ಮಕ್ಕಳಿಗೆ ಒಂದು ಸುರಕ್ಷಿತ ಚಟುವಟಿಕೆ ಎಂದು ಇದುವರೆಗೂ ಭಾವಿಸಲಾಗಿತ್ತು. ಆದರೆ, ವಾಸ್ತವ ಸಂಗತಿಯು ಹಾಗಿಲ್ಲ ಎಂಬುದೇ ಈ ಅಧ್ಯಯನದಲ್ಲಿ ಕಂಡುಬಂದಿರುವ ಪ್ರಮುಖ ಅಂಶವಾಗಿದೆ ಎಂದೂ ಹೇಳಿದ್ದಾರೆ.

ಪದಾಧಿಕಾರಿಗಳ ಅವಿರೋಧ ಆಯ್ಕೆ ಖಚಿತ; ಕಾರ್ಯದರ್ಶಿಯಾಗಿ ಜಯ್ ಶಾ ಮುಂದುವರಿಕೆ

ರೋಜರ್ ಬಿನ್ನಿಗೆ ಬಿಸಿಸಿಐ ಚುಕ್ಕಾಣಿ

ನವದೆಹಲಿ (ಪಿಟಿಐ): ಭಾರತವು 1983ರಲ್ಲಿ ಚೊಚ್ಚಲ ಏಕದಿನ ಕ್ರಿಕೆಟ್ ವಿಶ್ವಕಪ್ ಗೆದ್ದ ತಂಡದಲ್ಲಿದ್ದ ಆಲ್‌ರೌಂಡರ್ ರೋಜರ್ ಬಿನ್ನಿ ಅವರು ವಿಶ್ವದ ಅತ್ಯಂತ ಶ್ರೀಮಂತ ಕ್ರಿಕೆಟ್ ಮಂಡಳಿಯ ಚುಕ್ಕಾಣಿ ಹಿಡಿಯಲಿದ್ದಾರೆ.


ಕಳೆದ ಮೂರು ವರ್ಷಗಳಿಂದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅಧ್ಯಕ್ಷರಾಗಿರುವ ಸೌರವ್ ಗಂಗೂಲಿ ಇದೇ 18 ರಂದು ಅಧಿಕಾರವನ್ನು ಬಿನ್ನಿ ಅವರಿಗೆ ಹಸ್ತಾಂತರಿಸಲಿದ್ದಾರೆ. ಮುಂಬೈನಲ್ಲಿ ನಡೆಯಲಿರುವ ಸರ್ವಸದ್ಯಸರ ಸಭೆಯಲ್ಲಿ ಅವರು ಮಂಡಳಿಯ 36ನೇ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಬಿಸಿಸಿಐ ಅಧ್ಯಕ್ಷ ಸ್ಥಾನಕ್ಕೇರಿದ ಕರ್ನಾಟಕದ ಎರಡನೇ ವ್ಯಕ್ತಿ ಎಂಬ ಗೌರವ ಬಿನ್ನಿ ಅವರದಾಗಲಿದೆ. ಈ ಹಿಂದೆ ಎಂ.ಚಿನ್ನಸ್ವಾಮಿ ಅವರು 1977 ರಿಂದ 1980ರ ಅವಧಿಗೆ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

ಜಯ್ ಶಾ ಸತತ ಎರಡನೇ ಅವಧಿಗೆ ಕಾರ್ಯದರ್ಶಿಯಾಗಿ ಮುಂದುವರಿಯಲಿದ್ದು, ಐಸಿಸಿ ಮಂಡಳಿಯಲ್ಲಿ ಅವರು ಗಂಗೂಲಿ ಅವರ ಸ್ಥಾನದಲ್ಲಿ ಭಾರತದ ಪ್ರತಿನಿಧಿಯಾಗುವ ಸಾಧ್ಯತೆಯೂ ಇದೆ.

ಕಳೆದ ಒಂದು ವಾರದ ಅವಧಿಯಲ್ಲಿ ತೆರೆಮರೆಯಲ್ಲಿ ನಡೆದ ಚರ್ಚೆ, ಮಾತುಕತೆಯ ಬಳಿಕ ಬಿಸಿಸಿಐನ ಎಲ್ಲ ಸ್ಥಾನಗಳಿಗೆ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲು ತೀರ್ಮಾನಿಸಲಾಗಿದೆ.

‘ಎಲ್ಲ ಸ್ಥಾನಗಳಿಗೂ ಅವಿರೋಧ ಆಯ್ಕೆ ನಡೆದಿದ್ದು, ಅ.18 ರಂದು ಚುನಾವಣೆ ಇರುವುದಿಲ್ಲ. ಮಂಡಳಿಯ ವಿವಿಧ ಸ್ಥಾನಗಳಿಗೆ ಪದಾಧಿಕಾರಿಗಳನ್ನು ನಿರ್ಧರಿಸುವಲ್ಲಿ ಕೇಂದ್ರದ ಪ್ರಭಾವಿ ಸಚಿವರೊಬ್ಬರು ಪ್ರಮುಖ ಪಾತ್ರ ವಹಿಸಿದ್ದಾರೆ’ ಎಂದು ಬಿಸಿಸಿಐ ಮೂಲಗಳು ಹೇಳಿವೆ.


ರೋಜರ್ ಬಿನ್ನಿ


ಜಯ್ ಶಾ


ಅರುಣ್ ಸಿಂಗ್

ರಾಜೀವ್ ಶುಕ್ಲಾ ಅವರು ಉಪಾಧ್ಯಕ್ಷರಾಗಿ ಮುಂದುವರಿಯಲಿದ್ದಾರೆ. ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರ ತಮ್ಮ, ಹಾಲಿ ಖಜಾಂಚಿಯಾಗಿರುವ ಅರುಣ್ ಸಿಂಗ್ ಧುಮಾಲ್ ಐಪಿಎಲ್ ಮುಖ್ಯಸ್ಥರಾಗಲಿದ್ದಾರೆ. ಬ್ರಿಜೇಶ್ ಪಟೇಲ್ ಅವರ ಅಧಿಕಾರದ ಅವಧಿಯು ಕೊನೆಗೊಳ್ಳಲಿದೆ.

ಮಹಾರಾಷ್ಟ್ರದ ಬಿಜೆಪಿ ಮುಖಂಡ ಆಶೀಶ್ ಶೆಲಾರ್ ನೂತನ ಖಜಾಂಚಿಯಾಗಲಿದ್ದಾರೆ. ಅಸ್ಸಾಂ ಮುಖ್ಯಮಂತ್ರಿ ಹಿಮಾಂತ ಬಿಸ್ವ ಶರ್ಮ ಅವರ ಆಪ್ತರಾಗಿರುವ ದೇವಜಿತ್ ಸೈಕಿಯಾ, ಜಂಟಿ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

67 ವರ್ಷದ ಬಿನ್ನಿ ಅವರು ಬಿಸಿಸಿಐನಲ್ಲಿ ಪ್ರಮುಖ ಹುದ್ದೆ ಅಲಂಕರಿಸಲಿದ್ದಾರೆ ಎಂಬ ಸುದ್ದಿ ಕೆಲವು ದಿನಗಳಿಂದ ಹರಿದಾಡುತ್ತಿತ್ತು. ಬಿಸಿಸಿಐ ಸರ್ವಸದಸ್ಯರ ಸಭೆಗೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು (ಕೆಎಸ್‌ಸಿಎ) ಕಾರ್ಯದರ್ಶಿ ಸಂತೋಷ್ ಮೆನನ್ ಅವರ ಬದಲು ಬಿನ್ನಿಯವರ ಹೆಸರು ಕಳಿಸಿದ್ದು ಇದಕ್ಕೆ ಕಾರಣವಾಗಿತ್ತು. ಆದರೆ ಅವರಿಗೆ ಅಧ್ಯಕ್ಷ ಸ್ಥಾನ ದೊರೆತಿರುವುದು ಹಲವರಿಗೆ ಅಚ್ಚರಿ ಉಂಟುಮಾಡಿದೆ.

‘ಬಿಸಿಸಿಐ ಅಧ್ಯಕ್ಷ ಸ್ಥಾನಕ್ಕೆ ಬಿನ್ನಿ ಸೂಕ್ತ ವ್ಯಕ್ತಿ. ಅವರೊಬ್ಬ ಜಂಟಲ್‌ಮನ್. ಭಾರತಕ್ಕಾಗಿ ಹಲವು ಪಂದ್ಯಗಳನ್ನು ಆಡಿದ್ದಾರಲ್ಲದೆ, ವಿಶ್ವಕಪ್ ಟೂರ್ನಿಯ ಹೀರೊ ಕೂಡಾ ಆಗಿದ್ದರು. ಅವರದ್ದು ಕಳಂಕರಹಿತ ವ್ಯಕ್ತಿತ್ವ. ತಮ್ಮ ಪುತ್ರ ಸ್ಟುವರ್ಟ್ ಬಿನ್ನಿ ಭಾರತ ತಂಡದಲ್ಲಿ ಸ್ಥಾನ ಪಡೆಯಲು ಸ್ಪರ್ಧೆಯಲ್ಲಿದ್ದ ಸಮಯದಲ್ಲಿ ಅವರು ರಾಷ್ಟ್ರೀಯ ಆಯ್ಕೆ ಸಮಿತಿಯ ಸ್ಥಾನಕ್ಕೂ ರಾಜೀನಾಮೆ ನೀಡಿದ್ದರು’ ಎಂದು ಬಿಸಿಸಿಐನ ಇನ್ನೊಂದು ಮೂಲ ಹೇಳಿದೆ.

1983ರಲ್ಲಿ ಭಾರತ ತಂಡ ವಿಶ್ವಕಪ್ ಗೆಲ್ಲುವಲ್ಲಿ ಬಿನ್ನಿ ಅವರ ಆಲ್‌ರೌಂಡ್ ಆಟವೂ ಪ್ರಮುಖ ಪಾತ್ರ ವಹಿಸಿತ್ತು. ಆ ಟೂರ್ನಿಯಲ್ಲಿ ಆಡಿದ ಎಂಟು ಪಂದ್ಯಗಳಲ್ಲಿ ಅವರು 18 ವಿಕೆಟ್‌ಗಳನ್ನು ಪಡೆದಿದ್ದರು.

ನಾಮಪತ್ರ ಸಲ್ಲಿಕೆ (ಮುಂಬೈ ವರದಿ): ರೋಜರ್ ಬಿನ್ನಿ ಸೇರಿದಂತೆ ವಿವಿಧ ಹುದ್ದೆಗಳ ಆಕಾಂಕ್ಷಿಗಳು ಮಂಗಳವಾರ ನಾಮಪತ್ರ ಸಲ್ಲಿಸಿದರು. ನಾಮಪತ್ರ ವಾಪಸ್ ಪಡೆಯಲು ಅ.14 ಕೊನೆಯ ದಿನವಾಗಿದೆ. ಅ.15 ರಂದು ಅಭ್ಯರ್ಥಿಗಳ ಅಂತಿಮಪಟ್ಟಿ ಪ್ರಕಟವಾಗಲಿದೆ.

ಕೆಎಸ್‌ಸಿಎನಲ್ಲಿ ಗರಿಗೆದರಿದ ಚಟುವಟಿಕೆ

ರೋಜರ್ ಅವರು ಬಿಸಿಸಿಐ ಅಧ್ಯಕ್ಷರಾಗಿ ತೆರಳುವುದರಿಂದ ಕೆಎಸ್‌ಸಿಎ ಅಧ್ಯಕ್ಷ ಸ್ಥಾನ ತೆರವಾಗಲಿದೆ. ಇದು ರಾಜ್ಯ ಕ್ರಿಕೆಟ್ ಸಂಸ್ಥೆಯಲ್ಲಿ ಚಟುವಟಿಕೆ ಗರಿಗೆದರುವಂತೆ ಮಾಡಿದೆ.

ಸದ್ಯ ಇರುವ ಆಡಳಿತ ಸಮಿತಿ ನವೆಂಬರ್‌ನಲ್ಲಿ ಮೂರು ವರ್ಷ ಪೂರೈಸಲಿದೆ. ಅದರಿಂದಾಗಿ ಮುಂದಿನ ತಿಂಗಳು ಚುನಾವಣೆ ನಡೆಯುವುದು ಬಹುತೇಕ ಖಚಿತವಾಗಿದೆ.

ನೂತನ ಪದಾಧಿಕಾರಿಗಳು	
ಅಧ್ಯಕ್ಷ	ರೋಜರ್ ಬಿನ್ನಿ
ಕಾರ್ಯದರ್ಶಿ	ಜಯ್ ಶಾ
ಉಪಾಧ್ಯಕ್ಷ	ರಾಜೀವ್ ಶುಕ್ಲಾ
ಖಜಾಂಚಿ	ಆಶೀಶ್ ಶೆಲಾರ್
ಜಂಟಿ ಕಾರ್ಯದರ್ಶಿ	ದೇವಜಿತ್ ಸೈಕಿಯಾ
ಐಪಿಎಲ್ ಮುಖ್ಯಸ್ಥ	ಅರುಣ್ ಧುಮಾಲ್

ಐಪಿಎಲ್ ಮುಖ್ಯಸ್ಥನ ಹುದ್ದೆ ತಿರಸ್ಕರಿಸಿದ ಗಂಗೂಲಿ


ಸೌರವ್ ಗಂಗೂಲಿ

ಸೌರವ್ ಗಂಗೂಲಿ ಅವರು ಸತತ ಎರಡನೇ ಅವಧಿಗೆ ಬಿಸಿಸಿಐ ಅಧ್ಯಕ್ಷರಾಗಿ ಮುಂದುವರಿಯಲು ಬಯಸಿದ್ದರು. ಆ ನಿಟ್ಟಿನಲ್ಲಿ ಪ್ರಯತ್ನಿಸಿದ್ದ ಅವರು ಕಳೆದ ಕೆಲ ದಿನಗಳಿಂದ ಸಂಬಂಧಪಟ್ಟ ಪ್ರಮುಖರ ಜತೆ ಚರ್ಚಿಸಿದ್ದರು.

‘ಆದರೆ ಬಿಸಿಸಿಐನ ಇತಿಹಾಸದಲ್ಲಿ ಅಧ್ಯಕ್ಷ ಸ್ಥಾನದಲ್ಲಿ ಯಾರೂ ಸತತ ಎರಡನೇ ಅವಧಿಗೆ ಮುಂದುವರಿದಿಲ್ಲ ಎಂಬುದನ್ನು ಅವರಿಗೆ ಮನವರಿಕೆ ಮಾಡಿಕೊಡಲಾಯಿತು’ ಎಂದು ಮಂಡಳಿಯ ಮೂಲಗಳು ತಿಳಿಸಿವೆ.

‘ಐಪಿಎಲ್ ಮುಖ್ಯಸ್ಥನ ಹುದ್ದೆ ವಹಿಸಿಕೊಳ್ಳುವಂತೆ ಗಂಗೂಲಿ ಅವರಲ್ಲಿ ಕೇಳಲಾಗಿತ್ತು. ಆದರೆ ಅದನ್ನು ನಯವಾಗಿ ತಿರಸ್ಕರಿಸಿದರು. ಬಿಸಿಸಿಐ ಅಧ್ಯಕ್ಷನಾದ ಬಳಿಕ ಅದರ ಅಧೀನದಲ್ಲಿರುವ ಸಮಿತಿಯ ಮುಖ್ಯಸ್ಥರಾಗುವುದು ಅವರಿಗೆ ಇಷ್ಟವಿರಲಿಲ್ಲ’ ಎಂದು ಮೂಲಗಳು ಹೇಳಿವೆ.

8ನೇ ಸ್ಥಾನಕ್ಕೆ ಲಕ್ಷ್ಯ


ಲಕ್ಷ್ಯ ಸೇನ್

ನವದೆಹಲಿ (ಪಿಟಿಐ): ಭಾರತದ ಬ್ಯಾಡ್ಮಿಂಟನ್ ಆಟಗಾರ ಲಕ್ಷ್ಯ ಸೇನ್ ಅವರು ಬಿಡಬ್ಲ್ಯುಎಫ್ ಪುರುಷರ ಸಿಂಗಲ್ಸ್ ರ‍್ಯಾಂಕಿಂಗ್‌ನಲ್ಲಿ ಜೀವನಶ್ರೇಷ್ಠ ಎಂಟನೇ ಸ್ಥಾನಕ್ಕೇರಿದ್ದಾರೆ. ಮಂಗಳವಾರ ಪ್ರಕಟವಾದ ರ‍್ಯಾಂಕಿಂಗ್‌ನಲ್ಲಿ ಲಕ್ಷ್ಯ ಅವರು ಒಂದು ಸ್ಥಾನ ಬಡ್ತಿ ಪಡೆದಿದ್ದಾರೆ.

ಪುರುಷರ ಡಬಲ್ಸ್ ಜೋಡಿ ಚಿರಾಗ್ ಶೆಟ್ಟಿ– ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಅವರು ಎಂಟನೇ ಸ್ಥಾನದಲ್ಲಿದ್ದಾರೆ.

ಒಡಿಶಾಗೆ ಗೆಲುವು

ಜಮ್ಶೆಡ್‌ಪುರ (ಪಿಟಿಐ): ಡಿಗೊ ಮೌರಿಸಿಯೊ ಗಳಿಸಿದ ಎರಡು ಗೋಲುಗಳ ಬಲದಿಂದ ಒಡಿಶಾ ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು.

ಮಂಗಳವಾರ ಇಲ್ಲಿ ನಡೆದ ಪಂದ್ಯದಲ್ಲಿ ಒಡಿಶಾ 3–2ರಿಂದ ಜಮ್ಶೆಡ್‌ಪುರ ತಂಡಕ್ಕೆ ಸೋಲುಣಿಸಿತು.

14ರಿಂದ ಬಾಕ್ಸಿಂಗ್

ಬೆಂಗಳೂರು: ಕರ್ನಾಟಕ ಅಮೆಚೂರ್ ಬಾಕ್ಸಿಂಗ್ ಸಂಸ್ಥೆಯು ಅಕ್ಟೋಬರ್ 14ರಿಂದ 16ರವರೆಗೆ ರಾಜ್ಯ ಮಟ್ಟದ ಬಾಕ್ಸಿಂಗ್ ಚಾಂಪಿಯನ್‌ಷಿಪ್ ಆಯೋಜಿಸಲಿದೆ.

ನಗರದ ಜಾಲಹಳ್ಳಿ ಎಚ್‌ಎಂಟಿ ಕ್ರೀಡಾಂಗಣದಲ್ಲಿ ಸಬ್‌ಜೂನಿಯರ್ಸ್, ಜೂನಿಯರ್ಸ್, ಯೂತ್, ಎಲೀಟ್ ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ಚಾಂಪಿಯನ್‌ಷಿಪ್ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಅಮೆಚೂರ್ ಬಾಕ್ಸಿಂಗ್ ಸಂಸ್ಥೆಯ ಕಾರ್ಯದರ್ಶಿ ಸಾಯ್ ಸತೀಶ್ (9448114716) ಅವರನ್ನು ಸಂಪರ್ಕಿಸಬಹುದು.

ಫ್ರೆಂಡ್ಸ್ ಯುನೈಟೆಡ್‌ಗೆ ಜಯ

ಬೆಂಗಳೂರು: ಸಂಘಟಿತ ಆಟವಾಡಿದ ಫ್ರೆಂಡ್ಸ್ ಯುನೈಟೆಡ್ ಎಫ್‌ಸಿ ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಫ್ರೆಂಡ್ಸ್ ಯುನೈಟೆಡ್ 2–1ರಿಂದ ಬೆಂಗಳೂರು ಈಗಲ್ಸ್ ಎದುರು ಗೆದ್ದರು. ವಿಜೇತ ತಂಡಕ್ಕಾಗಿ ಮಹೇಶ್ ಸೆಲ್ವಾ (68ನೇ ನಿಮಿಷ, ಪೆನಾಲ್ಟಿ) ಮತ್ತು ಶೆಮ್ ಮೋರ್ಟನ್ ಯೂಜೀನ್ (82ನೇ ನಿ.) ಕಾಲ್ಚಳಕ ತೋರಿದರು.

ಈಗಲ್ಸ್ ತಂಡದ ಪರ ತಿಲಕ್ ದೇವದತ್ತ ಕೆ. (70ನೇ ನಿ.) ಒಂದು ಗೋಲು ಗಳಿಸಿದರು.

ಮತ್ತೊಂದು ಹಣಾಹಣಿಯಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ (ಎಫ್‌ಸಿಬಿಯು) 1–1ರಿಂದ ಸ್ಪೋರ್ಟಿಂಗ್ ಕ್ಲಬ್ ತಂಡದೊಂದಿಗೆ ಡ್ರಾ ಸಾಧಿಸಿತು. ಎಫ್‌ಸಿಬಿಯು ಪರ ಇರ್ಫಾನ್ ಯಾದವಾಡ (73ನೇ ನಿ.) ಮತ್ತು ಸ್ಪೋರ್ಟಿಂಗ್ ತಂಡಕ್ಕಾಗಿ ಕೊವಾಸಿ ಬರ್ನಾಡ್ ಯಾವೊ ಗೋಲು ದಾಖಲಿಸಿದರು.

ಇನ್ನೊಂದು ಪಂದ್ಯದಲ್ಲಿ ರೂಟ್ಸ್ ಎಫ್‌ಸಿ ತಂಡವು ಬಿಎಫ್‌ಸಿಯೊಡನೆ ಗೋಲುರಹಿತ ಡ್ರಾ ಸಾಧಿಸಿತು.


ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ಗೆದ್ದ ರೋಹಿತ್ ಶಂಕರ್, ಆಕಾಶ್ ಕೆ.ಜೆ, ಅನಿರ್ಬನ್ ಚೌಧರಿ, ಯಶಸ್ವಿನಿ ಘೋರ್ಪಡೆ, ಹಿಮಾಂಶಿ ಚೌಧರಿ, ಅನರ್ಘ್ಯಾ ಮಂಜುನಾಥ್

ಟಿಟಿ: ಅನಿರ್ಬನ್‌ಗೆ ಪ್ರಶಸ್ತಿ

ಬೆಂಗಳೂರು: ಅನಿರ್ಬನ್ ರಾಯ್ ಚೌಧರಿ ಮತ್ತು ಯಶಸ್ವಿನಿ ಘೋರ್ಪಡೆ ಅವರು ಕರ್ನಾಟಕ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ಸಿಂಗಲ್ಸ್ ವಿಭಾಗಗಳಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಮಲ್ಲೇಶ್ವರಂ ಅಸೋಸಿಯೇಷನ್‌ನಲ್ಲಿ ಮಂಗಳವಾರ ನಡೆದ ಫೈನಲ್‌ನಲ್ಲಿ ಅನಿರ್ಬನ್ 11–7, 8–11, 11–6, 11–7, 11–5ರಿಂದ ಯಶವಂತ್ ಪಿ. ಅವರನ್ನು ಮಣಿಸಿದರು. ಮಹಿಳೆಯರ ಫೈನಲ್‌ನಲ್ಲಿ ಯಶಸ್ವಿನಿ 11–6, 11–7, 11–5, 11–8ರಿಂದ ಅನರ್ಘ್ಯಾ ಮಂಜುನಾಥ್ ಸವಾಲು ಮೀರಿದರು.

ಇದಕ್ಕೂ ಮೊದಲು ಬಾಲಕಿಯರ 19 ವರ್ಷದೊಳಗಿನವರ ವಿಭಾಗದ ಫೈನಲ್‌ನಲ್ಲಿ ಅನರ್ಘ್ಯಾ 11–7, 12–10, 8–11, 12–10, 11–8ರಿಂದ ಯಶಸ್ವಿನಿ ಅವರಿಗೆ ಸೋಲುಣಿಸಿದ್ದರು. ಈ ವಿಭಾಗದ ಬಾಲಕರ ಪ್ರಶಸ್ತಿ ಸುತ್ತಿನಲ್ಲಿ ಆಕಾಶ್ ಕೆ.ಜೆ. 15–13, 11–9, 5–11, 10–12, 6–11, 11–8, 12–10ರಿಂದ ರೋಹಿತ್ ಶಂಕರ್ ಅವರನ್ನು ಸೋಲಿಸಿದರು.

17 ವರ್ಷದೊಳಗಿನ ಬಾಲಕರ ಫೈನಲ್‌ನಲ್ಲಿ ರೋಹಿತ್ 11–9, 13–11, 11–4, 11–6ರಿಂದ ತೇಶುಭ್ ದಿನೇಶ್ ಅವರನ್ನು ಮಣಿಸಿದರು.

ದೇಶ್ನಾ ಎಂ.ವಂಶಿಕಾ ಬಾಲಕಿಯರ 17 ವರ್ಷದೊಳಗಿನವರ ವಿಭಾಗದಲ್ಲಿ ಚಾಂಪಿಯನ್ ಆದರು. ದೇಶ್ನಾ 11-7, 11-4, 11-3, 6-11, 6-11, 6-11, 12-10 ರಲ್ಲಿ ಸಹನಾ ಎಚ್.ಮೂರ್ತಿ ಅವರನ್ನು ಮಣಿಸಿದರು.

ತವಂತ್, ಪಾರ್ನವಿ ಚಾಂಪಿಯನ್: ತವಂತ್ ನೀರ್ಲಜೆ ಮತ್ತು ಪಾರ್ನವಿ ಅವರು ಕ್ರಮವಾಗಿ 15 ವರ್ಷದೊಳಗಿನವರ ಬಾಲಕ ಹಾಗೂ ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಆದರು. ಫೈನಲ್‌ನಲ್ಲಿ ತವಂತ್ 5-11, 11-13, 11-8, 11-6, 11-3, 14-12ರಲ್ಲಿ ತೇಶುಭ್ ವಿರುದ್ಧ, ಪಾರ್ನವಿ 13-11,1 3-11, 11-13, 11-9, 11-9, 11-3 ರಲ್ಲಿ ಹಿಮಾಂಶಿ ಚೌಧರಿ ಅವರನ್ನು ಸೋಲಿಸಿದರು.

ನಾನ್ ಮೆಡಲಿಸ್ಟ್ ವಿಭಾಗದ ಫೈನಲ್‌ನಲ್ಲಿ ಹಿಮಾಂಶಿ 11–9, 11–7, 8–11, 11–7ರಿಂದ ಅರ್ನವ್ ಎನ್. ಅವರನ್ನು ಸೋಲಿಸಿದರು.


ಒಳಾಂಗಣ ಕ್ರಿಕೆಟ್ ವಿಶ್ವಕಪ್ ಟೂರ್ನಿಗೆ ತೆರಳಿರುವ ಭಾರತ ತಂಡ

ಒಳಾಂಗಣ ಕ್ರಿಕೆಟ್ ವಿಶ್ವಕಪ್‌ಗೆ ಭಾರತ ತಂಡ

ಬೆಂಗಳೂರು: ಆಸ್ಟ್ರೇಲಿಯಾದ ಮೆಲ್ಬರ್ನ್‌ನಲ್ಲಿ ನಡೆಯುತ್ತಿರುವ ಒಳಾಂಗಣ ಕ್ರಿಕೆಟ್ ವಿಶ್ವಕಪ್ ಟೂರ್ನಿಗೆ ಭಾರತ ತಂಡ ತೆರಳಿದೆ.

ಅಕ್ಟೋಬರ್ 8ರಂದು ಆರಂಭವಾಗಿರುವ ವಿಶ್ವಕಪ್ ಟೂರ್ನಿಯು ಇದೇ 15ರವರೆಗೆ ನಡೆಯಲಿದೆ.

ಭಾರತ ತಂಡ: ಗಿರೀಶ್ ಕೆ.ಜಿ (ನಾಯಕ), ಧನುಷ್ ಭಾಸ್ಕರ್, ಯತೀಶ್ ಚನ್ನಪ್ಪ, ವಿಜಯ್ ಹನುಮಂತ ರಾಯಪ್ಪ, ದೈವಿಕ್ ರೈ, ಮೊಹಮ್ಮದ್ ಕಿಜರ್ ಅಹ್ಮದ್, ಆರಿಸ್ ಅಜೀಜ್, ಸೂರಜ್ ರೆಡ್ಡಿ, ಅಫ್ರೋಜ್ ಪಾಷ, ಮೊಹಮ್ಮದ್ ರುಮಾನ್ ಚೌಧುರಿ, ಮೊಹಸಿನ್ ನಾದಮ್ಮಾಳ್, ನಮಶೀದ್ ವಯ್ಯಾಪ್ರಥ್, ವಿಜಯ್ ಎಚ್. ಗೌಡ. **ಕೋಚ್:** ಸಂದೀಪ್ ಮಾಯಣ್ಣ, **ಮ್ಯಾನೇಜರ್:** ಎಂ.ಎಸ್. ಪೂಂಜಾ

ಸಂಕ್ಷಿಪ್ತ ಸುದ್ದಿ

ಟಿ20 ವಿಶ್ವಕಪ್ ಟೂರ್ನಿ: ಐನಾಕ್ಸ್‌ನಲ್ಲಿ ಪಂದ್ಯಗಳು

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಪುರುಷರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾರತ ತಂಡವು ಆಡುವ ಪಂದ್ಯಗಳು ಮಲ್ಟಿಪ್ಲೆಕ್ಸ್ ಚಿತ್ರಮಂದಿರ ಐನಾಕ್ಸ್‌ನಲ್ಲಿ ನೇರ ಪ್ರಸಾರವಾಗಲಿವೆ.

ಈ ಕುರಿತು ಐಸಿಸಿಯೊಂದಿಗೆ ಒಪ್ಪಂದ ಮಾಡಿಕೊಂಡಿರುವುದಾಗಿ ಐನಾಕ್ಸ್ ಲೇಶರ್ ಲಿಮಿಟೆಡ್ ತಿಳಿಸಿದೆ.

‘ಭಾರತ ಆಡುವ ಗುಂಪು ಹಂತದ, ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳನ್ನು ದೇಶದಾದ್ಯಂತ 25ಕ್ಕೂ ಹೆಚ್ಚು ನಗರಗಳಲ್ಲಿರುವ ಮಲ್ಟಿಪ್ಲೆಕ್ಸ್‌ಗಳಲ್ಲಿ ನೇರಪ್ರಸಾರ ಮಾಡಲಾಗುವುದು’ ಎಂದು ಐನಾಕ್ಸ್ ಹೇಳಿದೆ.

ಟಿ20 ವಿಶ್ವಕಪ್ ಟೂರ್ನಿಯು ಅಕ್ಟೋಬರ್ 16ರಿಂದ ನವಂಬರ್ 13ರವರೆಗೆ ಆಸ್ಟ್ರೇಲಿಯಾದಲ್ಲಿ ನಿಗದಿಯಾಗಿದೆ.

ಟಿ20 ರ‍್ಯಾಂಕಿಂಗ್: ದೀಪ್ತಿಗೆ ಬಡ್ತಿ

ದುಬೈ (ಪಿಟಿಐ): ಭಾರತದ ದೀಪ್ತಿ ಶರ್ಮಾ ಐಸಿಸಿ ಟ್ವೆಂಟಿ–20 ಕ್ರಿಕೆಟ್ ಬೌಲರ್‌ಗಳ ವಿಭಾಗದ ರ‍್ಯಾಂಕಿಂಗ್‌ನಲ್ಲಿ ಜೀವನಶ್ರೇಷ್ಠ ಮೂರನೇ ಸ್ಥಾನಕ್ಕೆ ಮರಳಿದ್ದಾರೆ. ಮಂಗಳವಾರ ಪ್ರಕಟವಾಗಿರುವ ರ‍್ಯಾಂಕಿಂಗ್‌ನಲ್ಲಿ ದೀಪ್ತಿ ಅವರು ಮೂರು ಸ್ಥಾನಗಳ ಬಡ್ತಿ ಪಡೆದಿದ್ದಾರೆ. ಆಲ್‌ರೌಂಡರ್‌ಗಳ ವಿಭಾಗದಲ್ಲೂ ಅವರಿಗೆ ಮೂರನೇ ಸ್ಥಾನ ಲಭಿಸಿದೆ.